A.—Sri S. R. KANTHI (Minister for Education).—

(*a*) Two.

(*b*) Yes.

(*c*) Yes. Subject to the condition that the local people agree to deposit 50 per cent of the cost of the building.

Member's Representations

Sri D. M. SIDDIAH (Biligere).—Sir, is my question No. 388 held over ?

Mr. SPEAKER.—Yes ; the Hon'ble Chief Minister is not here.

Sri S. SHIVAPPA.—May I know, Sir, when the Chief Minister would be present here ?

Mr. SPEAKER.—You may expect him, perhaps, in the course of the day.

ಶ್ರೀ ಸಿದ್ದಯ್ಯ ಕಾಶೀಮಠ (ಶಿರಹಟ್ಟಿ).—ಸ್ವಾಮಿ, ಹೆಸರಘಟ್ಟ ಫಾರಂನಲ್ಲಿ ಐದಾರು ದಿವಸಗಳ ಹಿಂದೆ ಅಮೆರಿಕದಿಂದ ತರಿಸಿದಂಥ........

Mr. SPEAKER.—I have received that and I am getting it examined.

Sri SIDDIUHA KASIMATH.—It is a serious matter.

Mr. SPEAKER.—Every serious matter cannot be brought unless it is included in the agenda.

BUDGET ESTIMATES FOR 1963-64—DEMANDS FOR GRANTS

Demands Nos : 5—12. Sales Tax.

Sri B. D. JATTI (Minister for Finance).—Sir, on the recommendation of the Governor of Mysore, I beg to move :

> "That a sum not exceeding Rs. 35,61,000 be granted to the Government to defray the charges which will come in course of payment during the financial year for the period ending 31st day of March 1964, in respect of 'Sales-Tax'."

Mr. SPEAKER.—Motion moved :

> "That a sum not exceeding Rs. 35,61,000 be granted to the Government to defray the charges which will come in course of payment during the financial year for the period ending 31st day of March 1964, in respect of 'Sales-Tax'."

Demands No. 1, 3 and 6 are also deemed to have been moved Sri Gopala Gowda will initiate the debate.

† ಶ್ರೀ ಎಸ್. ಗೋಪಾಲ ಗೌಡ (ತೀರ್ಥಹಳ್ಳಿ).—ಸ್ವಾಮಿ, ಮಾನ್ಯ ಆರ್ಥಿಕ ಮಂತ್ರಿಗಳು ಈ ಸಭೆಯ ಮುಂದೆ ಮಂಡಿಸಿರುವ ಬೇಡಿಕೆಗಳು 1,3,5, ಮತ್ತು 6ನ್ನು ವಿರೋಧಿಸುತ್ತ ಈ ಬೇಡಿಕೆಗಳ ಬಗ್ಗೆ ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಬೇಕೆಂದು ಇದ್ದೇನೆ.

ಮೊಟ್ಟ ಮೊದಲನೆಯದಾಗಿ ಈ ಅಬ್ಕಾರಿ ಬಾಬಿನಲ್ಲಿ ಕೆಲವು ಖರ್ಚುಗಳನ್ನು ಕೇಳಿದ್ದಾರೆ. ಆ ವಿಷಯದಲ್ಲಿ ಮಾನ್ಯ ಸಭೆ ಕೂಲಂಕಷವಾಗಿ ವಿಚಾರ ಮಾಡತಕ್ಕದ್ದು ಒಳ್ಳೆಯದೆಂದು ನಾನು ಭಾವಿಸುತ್ತೇನೆ. ಈಗ ದೇಶದಲ್ಲಿ ಕೆಲವು ಕಡೆ ಪಾನನಿರೋಧ ಅಥವಾ ಪ್ರತಿಬಂಧ ಇದೆ. ಕೆಲವು

(ಶ್ರೀ ಎಸ್. ಗೋಪಾಲಗೌಡ)

ಕಡೆ ಪ್ರತಿಬಂಧವಿಲ್ಲ. ಈ ನೀತಿಯ ಬಗ್ಗೆ ಸಾಕಷ್ಟು ಚರ್ಚೆ ಈ ಮನೆಯಲ್ಲಿಯೂ ನಡೆದಿದೆ, ಹೊರಗಡೆ ದೇಶದಲ್ಲಿ ಕೂಡ ನಡೆಯುತ್ತಿದೆ. ಈ ಸಂಬಂಧದಲ್ಲಿ ಅನೇಕ ವಿಚಾರವಂತರು ಸರ್ಕಾರ ಅನುಸರಿಸುತ್ತಿರುವ ಪಾನನಿರೋಧ ನೀತಿ ಸಂಪೂರ್ಣವಾಗಿ ವಿಫಲವಾಗಿದೆ, ಅದರ ಉದ್ದೇಶ ಸಾಧನೆಯಾಗಿಲ್ಲ, ಕೇವಲ ಅದೊಂದು ನಡೆಸಿಕೊಂಡು ಹೋಗಬೇಕಾದ ವಿಷಯವೆಂದು ಸಾರ್ಕಾರ ನಡೆಸಿಕೊಂಡು ಹೋಗತ್ತಿದೆಯೆಂದು ಅಭಿಪ್ರಾಯಪಟ್ಟಿದ್ದಾರೆ. ಅದರಿಂದ ಯಾವ ಸಾರ್ಥಕವೂ ಆಗಿಲ್ಲವೆನ್ನುವ ಅಭಿಪ್ರಾಯ ಸಾಮಾನ್ಯವಾಗಿ ದೇಶದಲ್ಲಿ ಉಂಟಾಗಿದೆ. ಈಚೆಗೆ ಉತ್ತರ ಪ್ರದೇಶದಲ್ಲಿ ಕೆಲವು ಜಿಲ್ಲೆಗಳಲ್ಲಿದ್ದಂಥ ಪಾನ ಪ್ರತಿಬಂಧವನ್ನು ಅಲ್ಲಿಯ ಮುಖ್ಯ ಮಂತ್ರಿಗಳಾದ ಗುಪ್ತ ಅವರು ಧೈರ್ಯಮಾಡಿ ತೆಗೆದುಹಾಕಿ ಎಲ್ಲ ಕಡೆಯೂ ಒಂದೇ ರೀತಿಯ ಕಾನೂನನ್ನು ಜಾರಿಗೆ ತಂದಿದ್ದಾರೆ. ಈ ವಿಷಯದಲ್ಲಿ ಭಿನ್ನಾಭಿಪ್ರಾಯಗಳಿವೆ, ನಿಜ. ನಾನು ವೈಯಕ್ತಿಕವಾಗಿ, ಹೆಂಡವನ್ನು ಮಾರಾಟಮಾಡಿ, ಮದ್ಯವನ್ನು ಮಾರಾಟಮಾಡಿ, ಶಾಲೆಗಳನ್ನು ಕಟ್ಟಿಸುವುದಾಗಲೀ, ದೇವಸ್ಥಾನಗಳನ್ನು ಕಟ್ಟಿಸುವುದಾಗಲೀ, ಜನತೆಯ ಅಭಿವೃದ್ಧಿಗಾಗಿ ಆಸ್ಪತ್ರೆಗಳನ್ನು ಕಟ್ಟಿಸುವುದಾಗಲೀ, ತಪ್ಪು, ಅಂಥ ಹಣದಿಂದ ದೇಶೋದ್ಧಾರ ಕಾರ್ಯ ಮಾಡಬಾರದು. ಆ ರೀತಿಯ ಹಣ ಸಂಪಾದನೆ ಸರ್ಕಾರದ ಮುಖ್ಯ ಉದ್ದೇಶವಾಗಿರಬಾರದು ಎನ್ನುವ ಮಾತನ್ನು ಯಾವತ್ತು ಹೇಳುತ್ತೇನೆ. ಆದರೆ ಈ ವಿಷಯದಲ್ಲಿ ಸರ್ಕಾರ ಅನುಸರಿಸುತ್ತಿರತಕ್ಕ ನೀತಿ ಬಹಳ ವಿರೋಧಾಭಾಸಕ್ಕೆ ಎಡೆಕೊಟ್ಟಿದೆ ಮತ್ತು ಅದರಿಂದ ಅಪಾರವಾದ ಹಣವನ್ನು ಕಳೆದುಕೊಳ್ಳುವುದಲ್ಲದೆ, ಹಣ ಕಳೆದುಕೊಂಡು ಉದ್ದೇಶ ಸಾಧನೆಯಾಗುತ್ತ ಇಲ್ಲ. ಕೆಲವು ರಾಜ್ಯಗಳಲ್ಲಿ ಪೂರ್ಣಪಾನ ಪ್ರತಿಬಂಧವಿದೆ ಆದರೆ ನಮ್ಮ ರಾಜ್ಯದಲ್ಲಿ ಆ ರೀತಿ ಇಲ್ಲ. ಪಾನ ಪ್ರತಿಬಂಧದ ಜೊತೆಗೆ ನಾವು ಈ ಮಾದಕ ವಸ್ತುಗಳನ್ನು ತಯಾರು ಮಾಡತಕ್ಕವರಿಗೆ ಲೈಸೆನ್ಸ್ ಕೊಡುತ್ತಿದ್ದೇವೆ. ಅದು ಕೆಲವು ಸಲ bye-product ಆಗಿ ತಯಾರಾಗುತ್ತಿದೆ. ಈ ವಿಷಯದಲ್ಲಿ ಕೂಡ ಸರ್ಕಾರದವರು ವಿಚಾರ ಮಾಡಬೇಕು.

ನಮಗೆ ಈಚೆಗೆ ಕೋಲಾರದ ಚಿನ್ನದ ಗಣಿ ಪ್ರದೇಶದಿಂದ ಒಂದು ಪ್ರಶ್ನೆ ಈ ಸಭೆಯ ಮುಂದೆ ಬಂದಾಗ 50-60ರಷ್ಟು ಜನರು ಏನೋ ವಿಷ ಪದಾರ್ಥವನ್ನು ಕುಡಿದು ಸತ್ತು ಹೋದರು ಎನ್ನುವ ವಿಷಯ ಬಂದಾಗ ಈ ಸಭೆಯ ಗಮನವನ್ನೂ, ಸರ್ಕಾರದ ಗಮನವನ್ನೂ ಸೆಳೆದೆವು. ಇವೊತ್ತು ದೇಶದಲ್ಲಿ ಈ ಕಳ್ಳ ಭಟ್ಟಿ ಎಂದು ಏನು ಹೇಳುತ್ತಾರೆ ಅದು ಪ್ರಖ್ಯಾತಿಯಾಗಿದೆ. ಅದನ್ನು ಕುಡಿಯುತಕ್ಕದ್ದು ಸರ್ವೇ ಸಾಮಾನ್ಯವಾಗಿದೆ. ಸುಮಾರು ನೂರಕ್ಕೆ ಆರೇಳು ಜನರು ಈ ರೀತಿಯ ಕಳ್ಳ ಭಟ್ಟಿಯನ್ನು ಕುಡಿದು ಅನೇಕ ರೀತಿಯ ರೋಗಗಳಿಗೆ ಕೂಡ ತುತ್ತಾಗಿದ್ದಾರೆ. ಉತ್ಪಾದನೆಯ ದೃಷ್ಟಿಯಿಂದ ಸದ್ಯಕ್ಕೆ ಇದು ರಾಷ್ಟ್ರವ್ಯಾಪ್ತಿಯಾಗದೆ ಇರಬಹುದು. ಪರ ದೇಶದಿಂದ ಮದ್ಯವನ್ನು ನಾವು ತರಿಸಬೇಕಾಗಿದೆ, ತರಿಸುವುದಾದರೆ ಎಂಥ ಮದ್ಯವನ್ನು ತರಿಸಬೇಕು ? ಅದರ ಬಗ್ಗೆ ರಾಷ್ಟ್ರವ್ಯಾಪ್ತಿ ನೀತಿ ಇರಬೇಕು ಈ ದೇಶದಲ್ಲಿ ಮಾದಕ ಪದಾರ್ಥಗಳನ್ನು ತಯಾರು ಮಾಡುವುದಾದರೆ ಅದನ್ನು ಹೇಗೆ ತಯಾರು ಮಾಡಬೇಕು, ಯಾರು ತಯಾರು ಮಾಡಬೇಕು ಎಷ್ಟು ತಯಾರುಮಾಡಬೇಕೇನೂ ಎನ್ನುವುದನ್ನು ಕೂಡ ರಾಷ್ಟ್ರ ನೀತಿಯನ್ನಾಗಿ ಸರ್ಕಾರ ಇಟ್ಟುಕೊಳ್ಳಬೇಕು. ಹಾಗೆಯೇ ಮಾರಾಟದ ವಿಷಯದಲ್ಲಿಯೂ ಕೂಡ ಇವೊತ್ತು ಪಾನ ಪ್ರತಿಬಂಧವಿದ್ದರೂ ಆಮದು ಮಾಡಿಕೊಳ್ಳುವ ವಿಷಯದಲ್ಲಿ ಮತ್ತು ಮಾದಕ ಪದಾರ್ಥಗಳನ್ನು ತಯಾರು ಮಾಡತಕ್ಕ ವಿಷಯದಲ್ಲಿ ಸರ್ಕಾರದ ಮುಂದೆ ಯಾವ ಸ್ಪಷ್ಟವಾದ ಧೋರಣೆಯೂ ಇಲ್ಲವೆಂದು ಬಹಳ ಖಚಿತವಾಗಿ ಗೊತ್ತಾಗುತ್ತಿದೆ. ಬೆಂಗಳೂರು ನಗರದಲ್ಲಿ breveriesಗೆ ಲೈಸನ್ಸ್ ಕೊಟ್ಟಿದ್ದೀರಿ, ಈ ರಾಜ್ಯದಲ್ಲಿ ಕೂಡ ಕೆಲವು liquors ತಯಾರಾಗುತ್ತಿವೆ. ಬ್ರಾಂದಿ, ವಿಸ್ಕಿ ಇತ್ಯಾದಿಗಳನ್ನು ತಯಾರು ಮಾಡುತ್ತಿದ್ದಾರೆ. ಅಲ್ಲಿ ಅಬ್ಕಾರಿ ನೌಕರರು ಹಾಜರಿದ್ದರೂ ಕೂಡ ಅವರು ಗೇಟ್ ಕೀಪರ್‌ಗಳಾಗಿ ಇರುತ್ತಾರೆ. ಚೀಟಿ ಹಚ್ಚುವುದನ್ನು ಮಾತ್ರ ಮಾಡುತ್ತಾರೆ. ಅಲ್ಲಿ ಏನು ನಡೆಯುತ್ತದೆ, ಏನು ನಡೆಯುವುದಿಲ್ಲ, ಎನ್ನುವ ಬಗ್ಗೆ ಮಾನ್ಯ ಗೃಹ ಮಂತ್ರಿಗಳು ಕಾನೂನು ಮಂತ್ರಿಗಳು ಮತ್ತು ಆರ್ಥಿಕ ಮಂತ್ರಿಗಳು ಎರಡೆರಡು ದಿವಸ ಗೇಟ್‌ಕೀಪರ್ ಕೆಲಸ ಮಾಡಿದರೆ ಅವರಿಗೂ ಅನುಕೂಲವಾಗುತ್ತದೆ. ದೇಶಕ್ಕೂ ಅನುಕೂಲವಾಗುತ್ತದೆ ಎಂದು ಮಾತ್ರ ನಾನು ಹೇಳುತ್ತೇನೆ.

ಶ್ರೀ ಬಿ. ಡಿ. ಜತ್ತಿ.—ಏಳು ದಿವಸದಲ್ಲಿ ಒಂದು ದಿವಸ ಉಳಿಯುತ್ತದೆ. ಶ್ರೀಮಾನ್ ಗೋಪಾಲಗೌಡರು ಆ ಒಂದು ದಿನ ಮಾಡಿಕೊಂಡರೆ ಚೆನ್ನಾಗಿರುತ್ತದೆ.

ಶ್ರೀ ಎಸ್. ಗೋಪಾಲಗೌಡ.—ನಾನು ಒಂದು ದಿವಸ ಬರುವುದಕ್ಕೆ ತಯಾರಿದ್ದೇನೆ, ಗೃಹ ಮಂತ್ರಿಗಳ ಕೂಡ. ಇದು ಬಹಳ ಮುಖ್ಯವಾದ ವಿಷಯ.

ಇನ್ನು ಪಾನಪ್ರತಿಬಂಧದ ವಿಷಯಕ್ಕೂ ಸೇಲ್ಸ್ ಟ್ಯಾಕ್ಸಿಗೂ ಒಂದು ಸಂಬಂಧವನ್ನು ಕಲ್ಪಿಸಿದ್ದೀರಿ. ಮಾನ್ಯ ಮುಖ್ಯ ಮಂತ್ರಿಗಳು ಮೊನ್ನೆ ತಾನೇ ಹೇಳಿದಂತೆ ಇದರಿಂದ ಸುಮಾರ

ಎಂಟು ಹತ್ತು ಕೋಟಿಗಳಷ್ಟು ಆದಾಯ ಈ ಕ್ಯಾಟಗರಿಯಿಂದ ಬರುವುದಕ್ಕೆ ಸಾಧ್ಯ. ಅದರಿಂದ ಪಾನಪ್ರತಿಬಂಧವನ್ನು ಕೈಬಿಟ್ಟಿಲ್ಲ ಎಂದು ಹೇಳಿದ್ದಾರೆ. ನಾನ ಮೊದಲೇ ಹೇಳಿದ ಹಾಗೆ ಈ ಪಾನಪ್ರತಿಬಂಧವನ್ನು ರದ್ದು ಮಾಡಬೇಕೆಂದು ಹೇಳುವುದಿಲ್ಲ. ಶ್ರೀಮರ್ಾ ರಾಚಯ್ಯನವರು ಪಾನಪ್ರತಿಬಂಧವಿರಬೇಕು, ಇದರಿಂದ ಬಹಳ ಜನರಿಗೆ ಅನುಕೂಲವಾಗಿದೆ. ಕೂಲಿಗಾರರು ತಮ್ಮ ದಿವಸದ ದುಡಿಮೆಯನ್ನು ಮನೆಗೆ ತೆಗೆದುಕೊಂಡು ಹೋಗುವುದಕ್ಕೆ ಅನುಕೂಲವಾಗಿದೆ, ಅವರ ಜೀವನ ಮಟ್ಟ ಉತ್ತಮವಾಗಿದೆ ಎಂದರು. ಕೆಲವು ಮಟ್ಟಿಗೆ ಆ ಮಾತು ನಿಜ. ಕೂಲಿಗಾರರಿಗೆ ಕೆಲವು ಸಲ ಈ ಕುಡಿತದ ಪ್ರಭಾವದಿಂದ ತಪ್ಪಿಸಿಕೊಳ್ಳುವುದಕ್ಕೆ ಸಾಧ್ಯವಿದ್ದರೆ ಅವರ ಕೈಯ್ಯಲ್ಲಿ ದುಡಿಮೆ ಹಣವನ್ನುಳಿಸಿಕೊಳ್ಳಬಹುದು. ಸಾರ್ವತ್ರಿಕವಾಗಿ ಇದರಿಂದ ಏನಾಗುತ್ತದೆ ಎಂದರೆ, ನನಗೆ ಗೊತ್ತಿರುವ ಹಾಗೆ, ಎಷ್ಟೋ ಜನರು ಕಳ್ಳ ಭಟ್ಟಿಯನ್ನು ಕುಡಿದು ಅಥವಾ ಬೇರೆ ಯಾವುದೋ ತರಹದ ಬ್ರೆವರಿಯಿಂದ ಬರುವ ವಿಷಪದಾರ್ಥಗಳನ್ನು ಬೆರೆಸಿರುವಂತಹುದನ್ನು ಕುಡಿದು, ಇದರ ಪರಿಣಾಮದಿಂದ ಕರುಳು ತೂತಾಗಿ ಬಿಟ್ಟು, ಎಷ್ಟೋ ಜನರು ಈ ಕುಡಿತದ ಅಮಲಿನಿಂದ ಸತ್ತುಹೋಗಿದ್ದಾರೆ. ಇದರಿಂದ ಒಂದು ರೀತಿಯಲ್ಲಿ ಹಿಂಸೆಯಾಗುವುದೂ ಅಲ್ಲದೆ ಆರೋಗ್ಯಕ್ಕೆ ಹಾಳಾಗಿ, ಅನೀತಿ ಹೆಚ್ಚುತ್ತಿದೆ. ಇದನ್ನು ತಪ್ಪಿಸಬೇಕೆಂದು ಈ ಕೆಲಸವನ್ನು ನೀವು ಪೋಲೀಸ್ ಇಲಾಖೆಗೆ ಕೊಟ್ಟಿದ್ದೀರಿ. ಇವೊತ್ತು ಪೋಲೀಸು ಆಡಳಿತಕ್ಕೆ ಸೇರಿದ ಅಧಿಕಾರಿಗಳು ಅವರ ಕೈಯಲ್ಲಿ ಈ ಕೆಲಸ ಮಾಡಲಾಗದಿದ್ದರೆ, ಅವರ ಕೆಲಸವನ್ನು ನೋಡಿಕೊಳ್ಳುವುದಕ್ಕೆ ಆಗದಿದ್ದರೆ ಈ ಕೆಲಸವನ್ನು ಅವರಿಗೆ ವಹಿಸಿರುವುದು ಒಂದು ದೊಡ್ಡ ಅಗೌರವವೆಂದು ನಾನು ಹೇಳುತ್ತೇನೆ. ಶ್ರೀಮತಿ ಸುಬ್ಬಮ್ಮನವರು ಈಗ ಇಲ್ಲಿಲ್ಲ. ಅವರು ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆಬಂದ ಮೇಲೆ ಪಾನ ನಿರೋಧವನ್ನು ಜಾರಿಗೆ ತರಲೇಬೇಕು ಎನ್ನುವ ಜವಾಬುದಾರಿಯನ್ನು ಹೊತ್ತಿದ್ದೇವೆಎಂದು ಹೇಳಿದರು. ಅವರೇ ಆಗಲೇ ಈ ಕುಡಿತದಿಂದ ಸಾಕಷ್ಟು ಜನಕ್ಕೆ ತೊಂದರೆಯಾಗಿದೆ ಎಂದು ತಿಳಿದುಕೊಂಡು ಹೇಳಿದ್ದಾರೆ. ನಾನು ಸಹ ಅದನ್ನು ಅನುಮೋದಿಸುತ್ತಿದ್ದೆ. ಆ ರೀತಿ ಜವಾಬುದಾರಿಯುತವಾಗಿ ಮುಂದೆ ಬಂದು ಅವರೇ ಪ್ರಯತ್ನ ಮಾಡಿದರೆ ಬಹಳ ಒಳ್ಳೆಯದು. ಆದರೆ ಪೋಲೀಸರಿಗೆ ಈ ಅಧಿಕಾರವನ್ನು ವಹಿಸಿಕೊಟ್ಟಿರುವುದರಿಂದ, ಅವರಿಗೆ ಕುಡಿಯುವವರನ್ನು ನೋಡಲಾಗಲಿಲ್ಲ. ಮತ್ತು ಅಂತಹವರನ್ನೂ ಹಿಡಿಯುವುದಕ್ಕೂ ಆಗಲಿಲ್ಲ. ಅವರಲ್ಲಿ ಪ್ರತಿಯೊಬ್ಬರಿಗೂ ಮಾಮೂಲು ಬರುತ್ತದೆ. ಇಲ್ಲೇನೋ ದೊಡ್ಡದಾಗಿ ಕುಡಿಯುವುದನ್ನು ತಪ್ಪಿಸಬೇಕೆಂದು ಹೇಳುತ್ತಾರೆ. ಈ ಎಲ್ಲ ಹೇಳಿಕೆಗಳಿಂದಲೂ ಪರಿಸ್ಥಿತಿ ಉತ್ತಮವಾಗುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ಈ ವಿಷಯದಲ್ಲಿ ಸರಕಾರ ತೀವ್ರವಾಗಿ ಆಲೋಚನೆ ಮಾಡಬೇಕು. ಕೂಲಂಕುಷವಾಗಿ ವಿಚಾರ ಮಾಡಬೇಕು. ಈ ಸಮಸ್ಯೆಗೆ ಸಂಬಂಧಪಟ್ಟ ಎಲ್ಲ ವಿಚಾರಗಳನ್ನು ಪರಿಶೀಲನೆ ಮಾಡಬೇಕು. ಇದಕ್ಕೆ ಮೈಸೂರು ರಾಜ್ಯ ಸರಕಾರ ಮತ್ತಿತರ ಸರಕಾರಗಳೂ ಭಾರತ ಸರಕಾರಕ್ಕೆ ಈ ಪಾನ ನಿರೋಧದ ವಿಷಯದ ನೀತಿಯನ್ನು ಪುನರ್ವಿಮರ್ಶಿಸಬೇಕೆಂದು ಈ ಸಂದರ್ಭದಲ್ಲಿ ಒತ್ತಾಯ ಪೂರ್ವಕವಾಗಿ ತಿಳಿಸಬೇಕೆಂದು ಹೇಳುತ್ತೇನೆ. ಪಾನಪ್ರತಿಬಂಧದಲ್ಲಿ ಸಂಪೂರ್ಣವಾಗಿ ಮಾದಕ ಪದಾರ್ಥ ಗಳ ಉಪಯೋಗವನ್ನು ತೊಡೆದುಹಾಕುವುದಕ್ಕೆ ಈ ಜಗತ್ತಿನಿಂದಲೂ ಸಾಧ್ಯವಿಲ್ಲ.ಎಂದು ನನಗನಿಸುತ್ತದೆ.ಇದನ್ನು ನಿಯಂತ್ರಣ ಮಾಡಲುತಕ್ಕ ಕಾರ್ಯಕ್ರಮವನ್ನು ಮಾಡಲು ಇದು ಉತ್ಪತ್ತಿಯಾಗುವ ವಿಧಾನವನ್ನು ಮೂಲೋತ್ಪಾದನ ಮಾಡುವ ಕಾರ್ಯಕ್ರಮವನ್ನು ಮಾಡಿ ಇದನ್ನು ನಿಯಂತ್ರಣಗೊಳಿಸಬೇಕು. ಹೊರಗಿನಿಂದ ಬರುವ ಮದ್ಯವೇ ಬೇರೆ ಇನ್ನೂ ಸಾಮಾನ್ಯ ಜನರಿಗೆ ಕುಡಿಯಲು ಕೊಡುವಂತಹ ಮದ್ಯವೇ ಬೇರೆ ಎಂದು ಇಂತಹ ಭಾಷಣಗಳನ್ನು ಹೇಳಿಕೊಂಡು ನಿರ್ಣಯವನ್ನು ಮಾಡಿ ಸಂಪೂರ್ಣವಾಗಿ ತೊಡೆದುಹಾಕುವುದು ಸಾಧ್ಯವಿಲ್ಲ. ಏಕೆಂದರೆ ಎಷ್ಟೋ ವಸ್ತುಗಳು ಇವೊತ್ತು ಇವೆ. ತಂಬಾಕು ಇದೆ. ಇದನ್ನು ಹೆಚ್ಚಾಗಿ ಸೇವನೆ ಮಾಡಿದರೆ ಮದ್ಯ ಸೇವನ ಮಾಡಿದಂತೆ ಅಮಲು ಬಂದು ಸಾಯುತ್ತಾರೆ. ಹಾಗೇ ಆಯುರ್ವೇದ ಪದ್ಧತಿಯಲ್ಲೂ ಎಷ್ಟೋ ಔಷಧಿಗಳಿವೆ, ಅರಿಷ್ಟಗಳಿವೆ, ಕಷಾಯಗಳಿವೆ. ಹೀಗೆ ಇವುಗಳಲ್ಲಿ ಕೆಲವನ್ನು ಎಷ್ಟೋ ಮಾದಕ ಪದಾರ್ಥಗಳಿಗೆ ಉಪಯೋಗಿಸಿ ಮಾದಕಗಳಾಗಿರುವುದನ್ನು ನೋಡಿದ್ದೇವೆ. Sleeping Pill ಎಂದು ಕೊಡುತ್ತಾರೆ. ಅದೂ ಒಂದು ವಿಷವಸ್ತುವೇ ಆದನ್ನು ಕೂಡ ನೋಡಿ ಸರಿಯಾಗಿ ತೆಗೆದುಕೊಳ್ಳಬೇಕು. ಇಲ್ಲದಿದ್ದರೆ ಅದೇ ಮೃತ್ಯುವಾಗುತ್ತದೆ. ವಿಷದ ವಸ್ತುಗಳು ಎಷ್ಟೋ ಔಷಧಿಗಳ ಉಪಯೋಗದಲ್ಲಿ ಬೇಕಾಗುತ್ತವೆ. ಈ ತರಹದ ಪದಾರ್ಥಗಳನ್ನೇ ಕುಡಿಯುತ್ತಾರೆಎಂದು ನೋಡಲು ಸಾಧ್ಯವಿಲ್ಲ. ಮಾದಕ ಪದಾರ್ಥಗಳನ್ನು ಈ ಜಗತ್ತಿನಿಂದ ದೂರ ಕಳುಹಿಸುವುದಕ್ಕೆ ಸಾಧ್ಯವೇಇಲ್ಲ. ಮತ್ತು ಇದಕ್ಕೆ ಬಲಿಯಾದವರನ್ನು ಬಿಡಿಸುವುದಕ್ಕಂತೂ ಸಾಧ್ಯವೇ ಇಲ್ಲ. ವಿಷಯವಾಗಿ ನಾನು ಅನೇಕ ಬಾರಿ ಸಲಹೆ ಮಾಡಿದ್ದೆ. ನೀವು ಒಂದು ನೀತಿಯನ್ನು ಅನುಸರಿಸಿ ಯಾವ ಯಾವ ಪದಾರ್ಥಗಳನ್ನು ನೀವು ಬಿಡಬೇಕು. ಅದನ್ನು ಹೇಗೆ ಉತ್ಪನ್ನ ಮಾಡಬಹುದು, ಉತ್ಪತ್ತಿಯಿಂದ ಬಂದ ಹಣ ಏನಾಗಬೇಕು, ಮತ್ತು ಮಾರಾಟದ ಕ್ರಮ ಹೇಗಿರಬೇಕು ಮತ್ತು ಈ ಔಷಧಿಗಳನ್ನು ಹೇಗೆ ಮಾರಾಟ ಮಾಡಬೇಕು ಎನ್ನುವುದರ ಬಗ್ಗೆ ಒಂದು ಕಟುವಾದ, ಕಟ್ಟುನಿಟ್ಟಾದ ನೀತಿ

(ಶ್ರೀ ಎಸ್. ಗೋಪಾಲಗೌಡ)

ನಿಯಮಗಳನ್ನು ಹಾಕಿಕೊಂಡು ಈಗಿನಿಂದ ಪರಿಪೂರ್ಣ ಮಾಡುತ್ತೇವೆಂದು ಹೇಳಬೇಕು. ಅದರಂತೆ ಇಂತಹವನ್ನು ವಿಷಪೂರಿತವಾದ ಔಷಧಿಯೆಂದು ಕರೆಯಿರಿ, ಇದನ್ನು ಮಾದಕ ಪದಾರ್ಥಗಳಿಗೆ ಉಪಯೋಗಿಸುವಾಗ ಒಂದು ಗೊತ್ತಾದ ಪ್ರಮಾಣದಂತೆ ಉಪಯೋಗಿಸಬೇಕೆಂದು ನಿಯಂತ್ರಣ ಹಾಕಿ, ಆ ನಿಯಂತ್ರಣದಂತೆ ಉತ್ಪನ್ನ ಮಾಡುವುದು ಮತ್ತು ಅದರ ಹಂಚುವಿಕೆಯನ್ನು ನಿಯಂತ್ರಣಗೊಳಿಸಬೇಕು ಹೀಗೆ ನಿಯಂತ್ರಣ ಮಾಡಿದರೂ ಇಧರಲ್ಲಿ ಬೇರೆ ಮಾರ್ಗಗಳನ್ನು ಕಂಡು ಹಿಡಿಯುತ್ತಾರೆ. ಇದರಿಂದ ಕೋಟಿಗಟ್ಟಲೆ ಬರುವ ಹಣ ಹೋಗುವುದೇ ಅಲ್ಲದೆ ದೇಶದ ಜನತೆಯ ನೀತಿಕೆಟ್ಟು ಕುಡಿಯತಕ್ಕ ಜನರ ಸಂಖ್ಯೆಯೂ ಹೆಚ್ಚು. ಅದೇ ಒಂದು ಉದ್ಯೋಗವಾಗಿ ಬೆಳೆದು, ಒಂದು ದೊಡ್ಡ ಮಧ್ಯದ ಅವಾಂತರ ಹಬ್ಬುವಂತಾಗುತ್ತದೆ. ಈ ಸರಕಾರದವರು ತಮ್ಮ ನೀತಿಯನ್ನು ಪುನರ್ವಿಮರ್ಶೆ ಮಾಡಿ ಒಳ್ಳೆಯ ಜನಪ್ರಿಯರಾಗಬೇಕಾದರೆ ಈ ಎಲ್ಲ ದೃಷ್ಟಿಯಿಂದಲೂ ಸಮರ್ಥನೀಯವಾದ ಕಾರ್ಯಕ್ರಮಗಳನ್ನನುಸರಿಸಬೇಕು ಎಂದು ಈ ಸಂದರ್ಭದಲ್ಲಿ ಮತ್ತೊಮ್ಮೆ ಒತ್ತಿ ಹೇಳುತ್ತೇನೆ,

ಇನ್ನು ಕೆಲವು ಜಿಲ್ಲೆಗಳಲ್ಲಿ ಬಾಕಿ ಬರಬೇಕಾಗಿದೆ. ಅದನ್ನು ಯಾರೇ ಆದರೂ ವಸೂಲಿ ಮಾಡಿಲ್ಲ. ಅದನ್ನು ಯಾವ ಮುಲಾಜೂ ಇಲ್ಲದೇ ವಸೂಲು ಮಾಡಬೇಕು. ಈ ವಸೂಲಿಯ ವಿಷಯದಲ್ಲಿ ಕೆಲವು ಲೋಪ ದೋಷಗಳನ್ನು ಸರಕಾರದವರು ಗಮನಿಸಿದ್ದಾರೆಂದು ನೀವು ಈ ತೆರಿಗೆ ತಿದ್ದುಪಡಿ ಮಸೂದೆಯನ್ನು ಪಾಸು ಮಾಡಿದ್ದೆವು. ಸಾಮಾನ್ಯವಾಗಿ ಸೇಲ್ಸ್ ಟ್ಯಾಕ್ಸು ವಿಷಯದಲ್ಲಿ ಕೆಲವು ಸಣ್ಣ ಪುಟ್ಟ ಮಾರಾಟಗಾರರಿಗೆ ತೊಂದರೆಯಾಗದಂತೆ ತೆರಿಗೆಗಳನ್ನು ವಸೂಲು ಮಾಡಬೇಕು. ಇನ್ನೂ ಒಂದು ದೃಷ್ಟಿಯಿಂದ ಈ ಟ್ಯಾಕ್ಸುಗಳ ವಸೂಲಿಯ ಕೆಲಸವನ್ನೆಲ್ಲಾ ಫೈನಾನ್ಸ್ ಮಿನಿಸ್ಟರವರಿಗೇ ವಹಿಸಬೇಕೆನ್ನುವ ಒಂದು ಸಲಹೆಯನ್ನು ತಾವು ಪರಿಶೀಲನೆ ಮಾಡಬೇಕು. ಈಗ ಬೇರೆ ಬೇರೆ ಇಲಾಖೆಗಳಲ್ಲಿ ಇರುವ ಕೆಲಸಗಳನ್ನು ನಡೆಸುವುದೇ ಕಷ್ಟ, ಅದರ ಜೊತೆಗೆ ಈ ವಸೂಲಿಯ ಕೆಲಸವನ್ನೂ ಮಾಡುವುದೂ ಕಷ್ಟವಾಗುತ್ತದೆ ಇಂತಹ ತೆರಿಗೆಯ ವಸೂಲಿಯನ್ನೆಲ್ಲಾ ಒಂದೇ ಕಡೆ ವಸೂಲು ಮಾಡುವಂತೆ ಮಾಡಬಹುದು.

ಈಗ ತೆರಿಗೆ ವಸೂಲಿಯ ಪದ್ಧತಿ 1885ನೇ ಇಸವಿಯಿಂದಲೂ ನಡೆದುಕೊಂಡು ಬಂದಿರುವ ಪದ್ಧತಿ. ಈ ಕಾರ್ಯಕ್ರಮ ಸರಿ ಹೋಗುವುದಿಲ್ಲ. ಆಗ ಹಿಂದೆ ತೆರಿಗೆಯನ್ನು ಕೊಡುವುದೂ ಕಡಿಮೆಯಾಗಿತ್ತು, ಲ್ಯಾಂಡ್ ರೆವಿನ್ಯೂ ನಿಯಮವನ್ನನುಸರಿಸಿ ವಸೂಲಿ ಮಾಡುವುದು ಬಹು ಸಡಿಲವಾಗಿತ್ತು. ಆದರೆ ಈಗ ಬೇರೆ ಬೇರೆ ತೆರಿಗೆಗಳನ್ನು ಹಾಕುತ್ತಿರುವುದರಿಂದ ಇದಕ್ಕೆ ಹೆಚ್ಚಿಗೆ ಆಫೀಸರುಗಳು ಬೇಕಾಗಬಹುದು. ಇದನ್ನು ಪುನಃ ವಿಮರ್ಶೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಅಗ್ರಿಕಲ್ಚರಲ್ ಇನ್‌ಕಂ ಟ್ಯಾಕ್ಸು ಎಂದು ಹೊಸ ತೆರಿಗೆಯನ್ನು ಭಾರಿ ಭಾರಿ ಶ್ರೀಮಂತರ ಮೇಲೆ ಹಾಕಿ ಒಂದು ಮಿತಿಯನ್ನು ಹಾಕಿ ಆ ಮಿತಿಗಿಂತ ಕೆಳಗಿನವರಿಗೆ ಬೀಳದಂತೆ ಮಾಡಬಹುದು. ಇದನ್ನು ಸರಿಪಡಿಸಲು ಸರಕಾರ ತಕ್ಕ ಕಾರ್ಯಕ್ರಮ ತೆಗೆದು ಕೊಳ್ಳಬೇಕು. ಇದರಿಂದಾಗಿಯೋ ಏನೋ ಭೂಸುಧಾರಣೆ ಬಾರದೆ ಇರುವುದಕ್ಕೆ ಒಂದು ಕಾರಣವಾಗಿದೆ. ಇದರ ಬಗ್ಗೆ ಇನ್ನೂ ಸರಕಾರದವರೂ ಯಾವ ಒಂದು ನೀತಿಯನ್ನು ಖಚಿತವಾಗಿಟ್ಟು ಕೊಂಡಿಲ್ಲ. ನೀವು ರೈತರ ಪ್ರತಿನಿಧಿಗಳಾಗಿ ಚುನಾಯಿತವಾಗಿರುವ ಸರಕಾರಕ್ಕೆ ಅಭಿಮಾನವಿದೆ. ರೈತರು ಎನ್ನುವುದು ಒಂದು ದೊಡ್ಡ ಶಬ್ದ ಯಾರು ಯಾರು ರೈತರು ಎನ್ನುವುದನ್ನು ತಾವು ಸರಿಯಾಗಿ ಹೇಳುವುದಿಲ್ಲ. ಇದುವರೆಗೆ ಅದಕ್ಕೆ ಯಾವ ರೀತಿ ವಿವರಣೆ ಕೊಡಬೇಕು ಎಂದು ತೀರ್ಮಾನ ಮಾಡಿಲ್ಲ.

ಈ ತೆರಿಗೆ ಹಾಕುವುದು ಮತ್ತು ಅದನ್ನು ಜಾರಿಗೆ ಕೊಟ್ಟು ಹಣ ಪಡೆಕೊಳ್ಳುವಾಗ್ಗೆ ದಾಕ್ಷಿಣ್ಯಕ್ಕೆ ಅವಕಾಶ ವಿರಬಾರದು ಎಂದು ಸರಕಾರಕ್ಕೆ ತಿಳಿಸುತ್ತೇನೆ. ಈಗ ಸಮಯವಿಲ್ಲದೇ ಇರುವುದರಿಂದ ಹೆಚ್ಚಾಗಿ ಹೇಳಲು ಇಷ್ಟಪಡುವುದಿಲ್ಲ. ನಾವು ಕೊಟ್ಟಿರುವ ಖೋತಾ ನಿರ್ಣಯಗಳನ್ನು ಹಣಕಾಸಿನ ಮಂತ್ರಿಗಳು ಸ್ವಲ್ಪ ಕಣ್ಣು ಬಿಟ್ಟು ನೋಡಬೇಕು. ನಿಜವಾಗಿಯೂ ದೇಶದ ಹಿತದೃಷ್ಟಿಯಿಂದ ತೆರಿಗೆ ಕೊಡುವವರ ಹಿತದೃಷ್ಟಿಯಿಂದ ಸರಕಾರದ ಹಿತದೃಷ್ಟಿಯಿಂದ ಒಳ್ಳೇ ಖೋತಾ ನಿರ್ಣಯಗಳು ಇರುವುದರಿಂದ ಇವುಗಳಿಗೆ ಉತ್ತರ ಕೊಡುವುದಕ್ಕೆ ಶ್ರಮವಹಿಸಬೇಕು. ಉತ್ತರ ಕೊಟ್ಟ ಮೇಲೆ ಅದೇ ರೀತಿಯಾಗಿ ಕಾರ್ಯಗತ ಮಾಡಲು ಶ್ರಮವಹಿಸಬೇಕು ಎಂದು ಹೇಳುತ್ತೇನೆ. ಈಗ ಸಭೆಯ ಮುಂದಿರುವ ಬೇಡಿಕೆಗಳನ್ನು ವಿರೋಧಿಸುತ್ತೇನೆ.

ಶ್ರೀ ಬಿ. ಕೆ. ಪುಟ್ಟಯ್ಯ (ಮೈಸೂರು ಸಿಟಿ-ಉತ್ತರ).—ಮಾನ್ಯ ಸಭಾಪತಿಗಳೇ, ಮಾರಾಟ ತೆರಿಗೆಯ ಬಗ್ಗೆ ಕೆಲವು ವಿಷಯಗಳನ್ನು ತಮ್ಮ ಮುಂದೆ ಇಡುತ್ತೇನೆ. ಕಳೆದ ವರ್ಷ 1961-62ನೇ ಸಾಲಿನಲ್ಲಿ 30,04,515 ರೂ. ವೆಚ್ಚಮಾಡಿದೆ. 1962-63ರಲ್ಲಿ 33,38,000 ರೂ. ವೆಚ್ಚಮಾಡಿದೆ. 32,45,000 ಇದ್ದುದನ್ನು ಈ ವರ್ಷ 35,61,000 ರೂ. ಆಗಬಹುದು ಎಂದು ಹೇಳಿದ್ದಾರೆ. ವರಮಾನ 1961-62ರಲ್ಲಿ 9,45,28,894 ರೂ. ಎಂದು ಅಂದಾಜಿದೆ. 1962-63ರಲ್ಲಿ 10.10

ಲಕ್ಷ ಇದ್ದುದು ರಿವೈಜ್ಡ್ ಆಗಿ 11,27,62,000 ಅಂದಾಜು ಮಾಡಿದೆ. ಬರುವ ವರ್ಷಕ್ಕೆ 12,25,97,000 ರೂ. ಅಂದಾಜು ಮಾಡಿದ್ದಾರೆ. ಬರುವ ವರ್ಷ ಒಂದು ಕೋಟಿ ಜಾಸ್ತಿ ಬರುತ್ತದೆಂದು ಅಂದಾಜು ಮಾಡಿದ್ದಾರೆ. ಆದರೆ ಇದಕ್ಕೂ ಜಾಸ್ತಿ ಬರಬಹುದು ಎಂದು ನಾನು ತಿಳಿದುಕೊಂಡಿದ್ದೇನೆ. ಹೀಗೆ ಈ ಸೇಲ್ಸ್‌ಟ್ಯಾಕ್ಸನ್ನು ಸಂಸ್ಥಾನಾ ಮಳೆ ಜಾರಿಗೆ ತಂದ ಕಾಲದಲ್ಲಿ ಇದು ಅಬಕಾರಿ ಬಾಬಿನ ಬದಲು ಇದೆ ಎಂದು ಹೇಳಿರುವುದು ದೇಶಕ್ಕೆಲ್ಲಾ ಗೊತ್ತಿದೆ. ಈ ರೀತಿ ಈಗ ಎರಡೂ ಜಾರಿಯಲ್ಲಿ ಇರ ತಕ್ಕಂಥಾದ್ದು ರೀತಿ ನೀತಿಯಲ್ಲ ಎಂದು ಒತ್ತಾಯ ಪೂರ್ವಕ ಹೇಳಬೇಕಾಗಿದೆ. ಅಬಕಾರಿ ತೆರಿಗೆ ಗಳನ್ನು ತೆಗೆದುಹಾಕಿ ವಾರಾಟ ತೆರಿಗೆ ಪದ್ಧತಿ ಜಾರಿಗೆ ತರುತ್ತೇವೆಂದು ಹೇಳಿ ಈಗ ಎರಡೂ ಕ್ರಮವನ್ನು ಜಾರಿಗೆ ತರುವುದು ಬಹಳ ಅನ್ಯಾಯ. ವಾಗ್ದಾನ ಕೊಟ್ಟಂತೆ ನಡೆಕೊಳ್ಳಬೇಕಾದುದು ಅಗತ್ಯ. ಇದನ್ನು ಪರಿಶೀಲನೆ ಮಾಡಿ ಹಿಂದೆ ಇದ್ದಂಥ ಪದ್ಧತಿಯನ್ನು ಜಾರಿಗೆ ತರಬೇಕು.

ಈ ಸಂದರ್ಭದಲ್ಲಿ ವರ್ತಕರಿಗೆ ಆಗುವ ತೊಂದರೆಗಳನ್ನು ತಮ್ಮ ಮುಂದೆ ಇಡಲು ಇಚ್ಛಿ ಸುತ್ತೇನೆ. ಮದ್ರಾಸ್ ರಾಜ್ಯದಲ್ಲಿ 15 ಸಾವಿರ ಮಿತಿ ಇದ್ದರೆ ನಮ್ಮ ರಾಜ್ಯದಲ್ಲಿ 7½ ಸಾವಿರ ಮಿತಿ ಮಾಡಿದ್ದೀರಿ. ಇದು ಬಹಳ ಅನ್ಯಾಯ. ಇದನ್ನು ಪರಿಶೀಲನೆ ಮಾಡಬೇಕು. ಕೊನೆಯ ಪಕ್ಷ ಇದನ್ನು 10 ಸಾವಿರದವರೆಗೆ ಏರಿಸಬೇಕು ಎಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ.

ಇನ್ನು fine, penalties ವಸೂಲ್ಮಾಡುವುದಕ್ಕೆ ವರ್ತಕರನ್ನು ಕೋರ್ಟಿನ ಮುಂದೆ ನಿಲ್ಲಿ ಸುತ್ತೀರಿ. ರೆವೆನ್ಯೂ ಇಲಾಖೆಗೆ ವಸೂಲ್ಮಾಡುವುದಕ್ಕೆ ಅಧಿಕಾರವಿದೆ. ವರ್ತಕರು ದುಡ್ಡು ಕೊಡದೇ ಇರತಕ್ಕ ಸಂದರ್ಭದಲ್ಲಿ ಒಂದಲ್ಲ ಒಂದು ರೀತಿಯಿಂದ ವಸೂಲ್ಮಾಡಲು ಬರುತ್ತದೆ. ವರ್ತಕರನ್ನು ಕೋರ್ಟ್ ಬಾಗಿಲಿಗೆ ನಿಲ್ಲಿಸುವುದು ಬಹಳ ಅನ್ಯಾಯ. ಇದನ್ನು ಪರಿಶೀಲನೆ ಮಾಡಬೇಕು. ರೆವೆನ್ಯೂ ಇಲಾಖೆ ಮುಖಾಂತರ ವಸೂಲ್ಮಾಡಲು ಬೇಕಾದಷ್ಟು ಅವಕಾಶವಿದೆ. ಆ ಪದ್ಧತಿ ಇಟ್ಟುಕೊಂಡು ಕೋರ್ಟಿನಲ್ಲಿ ಕೇಸು ಹಾಕುವ ಪದ್ಧತಿ ರದ್ದು ಮಾಡಬೇಕೆಂದು ಈ ಸಮಯದಲ್ಲಿ ಪ್ರಾರ್ಥನೆ ಮಾಡಿ ಕೊಳ್ಳುತ್ತೇನೆ.

1958-59ರಿಂದ ರಿಫಂಡ್ ಆಗದೇ ಇರತಕ್ಕಂಥ ಕೇಸಿಸ್ ಅನೇಕ ಇವೆ. 1961-62ರಲ್ಲಿ 6,80,210 ರೂ. ಕೊಟ್ಟಿದ್ದಾರೆ. ಕಳೆದ ವರ್ಷ ಆರು ಲಕ್ಷ ಗೊತ್ತುಮಾಡಿ 8,97,000 ರೂ. ಕೊಟ್ಟಿದ್ದಾರೆ. ಮುಂದಿನ ವರ್ಷದ ಸಲುವಾಗಿ 5,62,000 ರೂ. ಗೊತ್ತುಮಾಡಿದ್ದಾರೆ. ಹಳೇ ಕೇಸುಗಳ ಬಾಕಿ ಕೊಡುವುದನ್ನು ಬೇಗ ಮುಕ್ತಾಯ ಮಾಡಬೇಕು ಎಂದು ಹೇಳುತ್ತೇನೆ. ಆಯಾಯ ವರ್ಷದ ಲೆಕ್ಕ ಆಯಾಯ ವರ್ಷವೇ ನೋಡಬೇಕು ಎಂದು ಒತ್ತಾಯ ಪೂರ್ವಕ ಹೇಳು ತ್ತೇನೆ. 5—6 ವರ್ಷದ ಹಿಂದಿನ ಲೆಕ್ಕ ಕೇಳಿದರೆ ವರ್ತಕರಿಗೆ ಜ್ಞಾಪಕವಿರುವದಿಲ್ಲ. ಐದಾರು ವರ್ಷ ಹಿಂದಿನ ಲೆಕ್ಕ ಕೊಡುವುದು ಸಾಧ್ಯವಿರುವುದಿಲ್ಲ. ವಿವರಣೆ ಕೊಡಲು ತೊಂದರೆಯಾಗುತ್ತದೆ. ಈ ಪದ್ಧತಿ ವಿಮರ್ಶೆ ಮಾಡಬೇಕು. ಮತ್ತು ಸಾಧ್ಯವಾದಮಟ್ಟಿಗೆ ಹಳೇ ಕೇಸೆಸ್ ಉಳಿಯುವುದಕ್ಕೆ ಅವಕಾಶ ಕೊಡಬಾರದು. ಸೇಲ್ಸ್‌ಟ್ಯಾಕ್ಸ್ ಬಾಕಿ ನಿಲ್ಲಿಸಿದ ಜನ ಅನೇಕರಿದ್ದಾರೆ. ಸರಕಾರದ ಮೇಲೆ ಪ್ರಭಾವ ಬೀರಿ ಸೇಲ್ಸ್‌ಟ್ಯಾಕ್ಸ್ ಕೊಡುತ್ತಾ ಇಲ್ಲ ಎನ್ನುವುದು ಗಮನಕ್ಕೆ ಬಂದಿದೆ. ಇದು ಒಂದು ಕಣ್ಣಿಗೆ ಬೆಣ್ಣೆ ಇನ್ನೊಂದು ಕಣ್ಣಿಗೆ ಸುಣ್ಣ ಹಾಕಿದಂತಾಗುತ್ತದೆ. ಈ ರೀತಿ ಮಾಡಬಾರದು. ತಕ್ಷಣ ಸೇಲ್ಸ್‌ಟ್ಯಾಕ್ಸ್ ಎಲ್ಲರಿಂದಲೂ ವಸೂಲ್ಮಾಡಬೇಕು.

ಅಬಕಾರಿ ಬಾಬಿನಲ್ಲಿ 1961-62ರಲ್ಲಿ 288 ಲಕ್ಷ ರೂ. ಇದ್ದಿತು. ಕಳೆದ ವರ್ಷದ ಬಜೆಟ್ಟಿನಲ್ಲಿ 274 | ಲಕ್ಷ ರೂ. ಇದ್ದುದು 291 ಲಕ್ಷ ರೂ. ಆಗಿದೆ. ಮುಂದಿನ ವರ್ಷಕ್ಕೆ 294 ಲಕ್ಷ ರೂ. ಗೊತ್ತು ಮಾಡಿದ್ದೀರಿ. ಈ ಅಬಕಾರಿ ಬಾಬು ಯಾವ ರೀತಿ ನಡೆದಿದೆ ಹೇಳುವುದಕ್ಕೆ ಭಯ ಬರುತ್ತದೆ. ಸಂಸ್ಥಾನಾ ಮಳೆ ಪಾನನಿರೋಧವನ್ನು ತೆಗೆದುಹಾಕಬೇಕು ಎಂದು ಹೇಳುತ್ತೇನೆ. ಯಾಕೆಂದರೆ ಬರುವ ಆದಾಯ ಕಳೆದುಕೊಂಡಿದ್ದೀರಿ. ಮರ್ಯಾದೆಯಿಂದ ನಿಮ್ಮ ನೀತಿ ಏನಿದೆ ಇದನ್ನು ಸ್ಪಷ್ಟ ಪಡಿಸಬೇಕು. ಇದರಲ್ಲಿ ತೊಂದರೆ ಏನೂ ಇರುವದಿಲ್ಲ. ಶ್ರೀಮಾನ್ ಗೋಪಾಲಗೌಡರು ಈ ವಿಚಾರ ವಿವರಣೆ ಕೊಟ್ಟು ಹೇಳಿದ್ದಾರೆ. ಪಾನನಿರೋಧ ನೀತಿಯಿಂದ ದೇಶದಲ್ಲಿ ಬಹಳ ಅನ್ಯಾಯ ವಾಗುತ್ತದೆ. ಬಹಳ ಜನ ಇದರಿಂದ ಸಾಯುತ್ತಿದ್ದಾರೆ. ಯಾವದೋ ಒಂದು ದಾಕ್ಷಿಣ್ಯಕ್ಕೋಸ್ಕರ ಗಾಗಿ ಒಂದು ಪ್ರತಿಷ್ಠೆಗೋಸ್ಕರ ಜಾರಿ ಮಾಡಿರುವುದನ್ನು ಹಿಂತೆಗೆದುಕೊಳ್ಳಲು ಅನುಮಾನ ಪಡುತ್ತಿದ್ದೀರಿ. ಆದರೆ ಪಾನನಿರೋಧ ಜಾರಿ ಮಾಡಿರುವುದನ್ನು ಹಿಂತೆಗೆದುಕೊಂಡರೆ ಇದರಲ್ಲಿ ಏನೂ ಅವಮಾನವಾಗುವದಿಲ್ಲ. ದೇಶಕ್ಕೆ ಹಾನಿ ಮಾಡಿದಂತಾಗುತ್ತದೆ. ಆದುದರಿಂದ ಈ ವಿಚಾರ ದಲ್ಲಿ ಖಂಡಿತವಾಗಿ ಒಂದು ಇತ್ಯರ್ಥಕ್ಕೆ ಜಾಗ್ರತೆ ಬರಬೇಕು.

ಈ ದಾಕ್ಷಿಣ್ಯದಿಂದ ಈಗ ಏನಾಗಿದೆಯೆಂದರೆ, ಕುಡಿಯುವವನೂ ಟ್ಯಾಕ್ಸ್ ಕೊಡುತ್ತಾನೆ. ಕುಡಿ ಯದಿದ್ದವನು ಟ್ಯಾಕ್ಸ್ ಕೊಡುತ್ತಾನೆ. ಜನತೆಯ ನೀತಿ ಮಟ್ಟ ಕೆಳಗೆ ಹೋಗುತ್ತಿದೆ. ಇಷ್ಟು ಎಲ್ಲಾ ಇಳಿಯುತ್ತ ಇದ್ದರೂ ತಮ್ಮ ಧೋರಣೆ ಬದಲಾವಣೆಯಾಗದೆ ಜನಗಳಿಗೆ ತೊಂದರೆಯಾಗು ತ್ತಿದೆ. ಕಳೆದ ವರ್ಷ ಕೋಲಾರದಲ್ಲಿ ಒಂದೇ ದಿವಸ 62 ಜನ ಇಲ್ಲಿ ಸಿಟ್ ಸಾರಾಯಿ ಕುಡಿದು

(ಶ್ರೀ ಬಿ. ಕೆ. ಪುಟ್ಟಯ್ಯ)

ಏನು ದುಷ್ಪರಿಣಾಮವಾಯಿತು ಎಂಬುದರ ಬಗ್ಗೆ ಇದೇ ಅಸೆಂಬ್ಲಿಯಲ್ಲಿ ಪ್ರಸ್ತಾಪ ಬಂದಿದ್ದು ತಾವು ನೋಡಿದ್ದೀರಿ. ಆದ್ದರಿಂದ ಈಗ ಜಾರಿಯಲ್ಲಿರುವ ಪದ್ಧತಿಯನ್ನು ಬದಲಾವಣೆ ಮಾಡಬೇಕು.

ಈ ಪಾನ ಪ್ರತಿಬಂಧಕ ವಿಷಯದ ಬಗ್ಗೆ ಹೇಳುವುದಾದರೆ ದೇಶದಲ್ಲಿ ಒಂದು ಕಡೆ ಪ್ರತಿಬಂಧಕ ಹಾಕುತ್ತೀರಿ, ಇನ್ನೊಂದು ಕಡೆ ಲೈಸೆನ್ಸ್ ಕೊಡುತ್ತಾ ಹೋಗುತ್ತಿದ್ದೀರಿ. ಪ್ರತಿಯೊಂದು ಡಿಸ್ಟ್ರಿಕ್ಟಿನಲ್ಲಿಯೂ ಕೂಡ 800-900 ಲೈಸೆನ್ಸ್‌ಗಳಿವೆ. ಈ ಲೈಸೆನ್ಸನ್ನು ಕುಡಿಯುವವರು ತೆಗೆದುಕೊಳ್ಳುತ್ತಿದ್ದಾರೋ, ಕುಡಿಯದೆ ಇರುವವರು ತೆಗೆದುಕೊಳ್ಳುತ್ತಿದ್ದಾರೋ ಗೊತ್ತಿಲ್ಲ. ಒಟ್ಟಿನಲ್ಲಿ ಪ್ರತಿಯೊಂದು ಡಿಸ್ಟ್ರಿಕ್ಟಿನಲ್ಲಿಯೂ ಲೈಸೆನ್ಸ್ ಕೊಡುತ್ತಾ ಇದ್ದೀರಿ. ಇದರ ಅರ್ಥ ಏನು ? ಒಂದು ಕಡೆ ಪ್ರತಿಬಂಧಕ ಹಾಕಿ, ಇನ್ನೊಂದು ಕಡೆ ಲೈಸೆನ್ಸ್ ಕೊಟ್ಟು, ಈ ಪಾನನಿರೋಧ ಯಶಸ್ವಿಯಾಗುತ್ತದೆಂದು ಯಾವ ರೀತಿಯಲ್ಲಿ ನಂಬಿಕೊಂಡಿದ್ದೀರೋ ಗೊತ್ತಾಗುವುದಿಲ್ಲ. 800-900 ಲೈಸೆನ್ಸುಗಳು ಪ್ರತಿಯೊಂದು ಡಿಸ್ಟ್ರಿಕ್ಟಿನಲ್ಲಿಯೂ ಓಡಾಡುತ್ತಿದ್ದರೆ, ಈ ಕಾನೂನು ಕಟ್ಟಳೆಯಿಂದ ದೇಶಕ್ಕಾಗಲಿ ಜನತೆಗಾಗಲಿ, ಯಾರಿಗೇ ಆಗಲಿ, ಒಳ್ಳೆಯದಾಗುತ್ತದೆಯೇ ಎನ್ನುವುದನ್ನು ಆಲೋಚನೆ ಮಾಡಬೇಕು. ತಕ್ಷಣ ಇದರ ಬಗ್ಗೆ ತೀರ್ಮಾನ ತೆಗೆದುಕೊಳ್ಳಬೇಕೆಂದು ಕೇಳಿಕೊಂಡು, ಇಷ್ಟು ಅವಕಾಶ ಕೊಟ್ಟ ಅಧ್ಯಕ್ಷರನ್ನು ವಂದಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಜೆ. ಎಲ್. ಕಬಾಡಿ (ಬಿದರೋಳ್ಳಿ).—ಮಾನ್ಯ ಸಭಾಧ್ಯಕ್ಷರೆ, ಇವತ್ತಿನ ದಿವಸ ನಮ್ಮ ರಾಜ್ಯದಲ್ಲಿ ಮಾರಾಟ ತೆರಿಗೆ ವಿಷಯದ ಬಗ್ಗೆ ಭಾಷಣ ಮಾಡಲು ಪರವಾನಿ ಕೊಟ್ಟಿದ್ದಕ್ಕೆ ತಮ್ಮನ್ನು ಮೊದಲು ಅಭಿನಂದಿಸಿ, ನನ್ನ ನಾಲ್ಕು ಮಾತುಗಳನ್ನು ಹೇಳುತ್ತೇನೆ.

ನಮ್ಮ ರಾಜ್ಯದಲ್ಲಿ turn-over tax ಏನು ಹಾಕುತ್ತಾ ಇದ್ದೀರಿ ಅದರಿಂದ ನಿಜವಾಗಿಯೂ ನಮ್ಮ ರಾಜ್ಯಕ್ಕೆ ಬಹಳ ಲುಕ್ಸಾನು ಆಗುತ್ತಾ ಇದೆಯೆಂದು ಹೇಳುತ್ತೇನೆ. ಉದಾಹರಣೆ ಕೊಡುವುದಾದರೆ, ಮಹಾರಾಷ್ಟ್ರಕ್ಕೆ ಸಮೀಪವಾಗಿರುವ ನಮ್ಮ ಬಿಜಾಪುರ ಜಿಲ್ಲೆಗೆ turn-over tax ಬಹಳ ಹಾನಿಯಾಗುತ್ತಿದೆ. ಹೇಗೆಂದರೆ crude oil ಮತ್ತು diesel oil ಗೆ ಮಹಾರಾಷ್ಟ್ರದಲ್ಲಿ ಒಂದು ರೂಪಾಯಿಗೆ ಮೂರು ನಯೆ ಪೈಸೆ ಇದೆ. ನಮ್ಮಲ್ಲಿ ಒಂದು ಲಿಟರಿಗೆ (12 ಆಣೆಗೆ) 5 ನಯೆಪೈಸೆ ಟ್ಯಾಕ್ಸ್ ಬೀಳುತ್ತಾ ಇದೆ. ನಮ್ಮಲ್ಲಿ ಬಳಕೆದಾರರು ಡೀಸಲ್ ಆಯಿಲನ್ನು ನಮ್ಮಲ್ಲಿಯ ಏಜಂಟರುಗಳಿಂದದಾಗಲಿ ವ್ಯಾಪಾರಸ್ಥರಿಂದಾಗಲಿ ಕೊಳ್ಳುವುದಿಲ್ಲ. ಹೀಗಾಗಿ ಅಲ್ಲಿ ನಮಗೆ ಹಣದ ಒಂದು ಲುಕ್ಸಾನು ಆಗುತ್ತದೆ. ಈ ಲುಕ್ಸಾನು ಆಗುವ ಬಗ್ಗೆ ಎಷ್ಟೋ ವೇಳೆ ಸರ್ಕಾರದ ಗಮನಕ್ಕೆ ತಂದಾಗ ವಿಚಾರ ಮಾಡುತ್ತೇವೆಂದು ಹೇಳಿದರೂ ವಿಚಾರ ಮಾಡಿಲ್ಲ. ನಾನು ಸೂಚನೆ ಮಾಡುವುದಾದರೂ ಏನೆಂದರೆ ಅಕ್ಕಪಕ್ಕದಲ್ಲಿರುವ ರೇಟಿನಂತೆ ನಮ್ಮೆಲ್ಲರಿಗೂ ಒಂದೇ ಒಂದು ರೀತಿಯ ರೇಟ್ ಮಾಡಿದರೆ ಎಲ್ಲರಿಗೂ ಒಳ್ಳೆಯದಾಗಬಹುದೆಂದು ತಿಳಿದುಕೊಂಡಿದ್ದೇನೆ. ಇವತ್ತು ನಿಜವಾಗಿಯೂ ಒಂದು ಬಾರಲ್ಲಿಗೆ 10-11 ರೂಪಾಯಿ ಡಿಫರೆನ್ಸ್ ಬರುತ್ತದೆ. ಈ ವ್ಯತ್ಯಾಸವಿರುವದರಿಂದ ಕೆಲವು ವರ್ತಕರು ಸೋಲಾಪುರದಿಂದಾಗಲಿ, ಮಿರಜ್ ಕೊಲ್ಹಾಪುರದಿಂದಾಗಲಿ ಅದನ್ನು ತಂದು ನಮ್ಮಲ್ಲಿ ಪರಭಾರಿ ಮಾರಿ ಸೇಲ್ಸ್‌ಟ್ಯಾಕ್ಸ್ ಮುಳುಗಿಸುತ್ತಾ ಇದ್ದಾರೆ. ಅದನ್ನು ಸರ್ಕಾರ ಪೂರ್ತಿಯಾಗಿ ತಪ್ಪಿಸಲಿಕ್ಕೆ ತಕ್ಕ ಕ್ರಮವನ್ನು ತೆಗೆದುಕೊಳ್ಳಬೇಕು.

ಇನ್ನು sales-tax ಆಫೀಸರುಗಳ ವಿಚಾರ ಹೇಳುವುದಾದರೆ, ನಿಜವಾಗಿಯೂ ಕೆಲವು ನಿಷ್ಠಾವಂತ ಜನರು sales-tax officeನಲ್ಲಿದ್ದರೆ ಮಾತ್ರ sale-tax ವಸೂಲನ್ನು ಕಾರ್ಯ ರೂಪಕ್ಕೆ ಸುಲಭವಾಗಿ ತರಬಹುದು. ನಿಷ್ಠಾವಂತ ಆಫೀಸರುಗಳನ್ನು ನೇಮಕ ಮಾಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ಇಷ್ಟೇ ಅಲ್ಲ ಈ property sales tax lawyers ಹಾಗು ಆಫೀಸರರು ಕೂಡಿ 500 ರೂಪಾಯಿ ಟ್ಯಾಕ್ಸ್ ವಸೂಲು ಮಾಡುವಲ್ಲಿ 300 ರೂಪಾಯಿ ಕೊಟ್ಟುಬಿಡಿ, ನೂರು ರೂಪಾಯಿ ನಮ್ಮ ಆಫೀಸರುಗಳಿಗೆ ಹಾಗು ಉಳಿದದು ತಮಗೂ ಅನ್ನುವ ರೀತಿಯಲ್ಲಿ ನಡೆದದ್ದು......

Mr. SPEAKER.—The Hon'ble Member should not make allegations against Lawyers. They are not here to defend nor should he make allegations against officers. Anyway, officers are under the control of the Government, but Lawyers are not. He is making allegations......

Sri J. L. KABADI.—I am not making any allegations against ....

Mr. SPEAKER.—He should not try to justify—if he wants, he can think over and continue.

ಶ್ರೀ ಜೆ. ಎಲ್. ಕಬಾಡಿ.—ಆ ರೀತಿಯಲ್ಲಿ ಕೆಲವು ಕಡೆ ಆಗುತ್ತಿದೆ ಅನ್ನುವುದನ್ನು ಹೇಳುತ್ತಿದ್ದೇನೆ.

ಈಗ Cottage and Village Industries Act ಪ್ರಕಾರ ಯಾವ ಐಟಮ್ ಈ ಆಕ್ಟ್ ಕೆಳಗೆ ಬರುತ್ತದೆಯೋ, ಆ ವಸ್ತುಗಳ ಮೇಲೆ sales tax ಹಾಕಬಾರದು ಎಂದು ಅದರಲ್ಲಿದೆ. ಖಾದಿ ಕಮಿಷನ್ನಿನವರು ಸರ್ಕಾರಕ್ಕೆ ಒಂದು ಮನವಿ ಸಲ್ಲಿಸಿದರು. ಅದರ ಬಗ್ಗೆ ಯಾವುದೂ ಕನ್‌ಸಿಡರ್ ಮಾಡದೆ, ಅದೂ ಒಂದು ಯೂನಿಟ್ ಎಂದು ಎಣಿಸಿದ್ದಾರೆ. ಅಂಥ ವಸ್ತುಗಳ ಮೇಲೆ ಟ್ಯಾಕ್ಸ್ ಹಾಕಬೇಕೆಂದಿದ್ದಾರೆ. ಮೊನ್ನೆ 1963ನೆಯ ಇಸವಿ ಫೆಬ್ರವರಿ 13 ರಲ್ಲಿ ಒಂದು ತರಹ call-for ಮಾಡಿದರು—ಯಾರಾದರೂ objections ಇದ್ದರೆ ಹಾಕಿ ಎಂದು. ಅದರ ಪ್ರಕಾರ ಎಷ್ಟೋ objections ಗಳು ಸರ್ಕಾರಕ್ಕೆ ತಲುಪಿಸಿದರೂ, ಇನ್ನೂ ಅದರ ಬಗ್ಗೆ ವಿಚಾರ ಮಾಡಿಲ್ಲ. ಕಾಬ್ಲರ್‌ಗಳಿಗೆ ಮುಂಬೈರಾಜ್ಯದ ಉದಾಹರಣೆ ತೆಗೆದುಕೊಂಡರೆ ನಾಲ್ಕು ಜನಗಳಿಗೆ ಒಂದು ಯೂನಿಟ್ ಮಾಡು ಕೂಡದೆಂದು ಮಾನ್ಯ ಅರ್ಥ ಸಚಿವರನ್ನು ಕೇಳಿಕೊಂಡರೂ, ಅವರ ಬಗ್ಗೆ ಕನ್‌ಸೆಷನ್ ತೋರಿಸುವುದು ಇನ್ನೂ ಇತ್ಯರ್ಥವಾಗಿಲ್ಲ. ನಮ್ಮ ಸರ್ಕಾರಕ್ಕೆ ಕೇಂದ್ರ ಸರ್ಕಾರದ Office of the Development Commissioner, Ministry of Commerce and Industries, ನಿಂದ ಸುಮಾರು 1958 ರಲ್ಲಿ ನಮ್ಮ ಸರ್ಕಾರಕ್ಕೆ Seminar ಬಗ್ಗೆ ಆದೇಶಕ್ಕೆ ಕೊಟ್ಟಿರುತ್ತಾರೆ. ಅವರು ಎಲ್ಲದರ ಮೇಲೆ ತಕ್ಕ ಕ್ರಮ ಕೈಕೊಳ್ಳಲು ಲೆಟರ್ ಬರೆದರು ಅದರಂತೆ ನನಗೆ "ನಿಮ್ಮ ಲೆಟರ್ ಪ್ರಕಾರ ನಾವು ಎಲ್ಲಾ ಸ್ಟೇಟ್ ಗವರ್ನ್‌ಮೆಂಟುಗಳಿಗೂ ಒಂದು ಆದೇಶವನ್ನು ನೀಡಿದ್ದೇವೆ. ಸಮಿನಾರಿನಲ್ಲಿ ಪಾಸಾದ ಠರಾವುಗಳ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳುವುದು". ಆ ಠರಾವಿನ ಪ್ರಕಾರ ಲೆದರ್ ಗೂಡ್ಸಿಗೆ ಸರ್ಕಾರ ವಿನಾಯಿತಿ ಕೊಡಬೇಕು ಆದರೂ ಕೂಡ ನಮ್ಮ ಸರ್ಕಾರ ಯಾವ ರೀತಿಯಲ್ಲಿಯೂ ಆತರಹ ಕ್ರಮ ಕೈ ಗೊಂಡಿಲ್ಲ. ಇದರ ಬಗ್ಗೆ ಯೋಗ್ಯ ನಿರ್ಣಯ ತೆಗೆದುಗೊಳ್ಳದಿದ್ದರೆ ಕೇಂದ್ರ ಸರ್ಕಾರದ ಪ್ರಪೋಸಲ್ ನಮ್ಮ ಸ್ಟೇಟ್ ಅಲ್ಲಗಳೆದಂತೆ ಆಗುತ್ತದೆ. ದಯೆಯಿಟ್ಟು ಅದನ್ನು ಗಮನಿಸಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಅದರ ಜಿಸ್ಟ ಹೀಗಿದೆ:

"This Seminar took note of the difficulties experienced by the Small Scale units in regard to the Sales-tax etc., and it was decided that a recommendation should be made to the State Government that such items as are not subjected to exise duty on footwear should be exempted from payment of Sales-tax on furnished goods."

ಇದೇ ರೀತಿಯಲ್ಲಿ ಹೋದ ಸಲವೂ ಮನವಿ ಮಾಡಿಕೊಂಡಿದ್ದೆ. ಇಲ್ಲಿಯವರೆಗೂ, ಸೆಂಟ್ರಲ್ ಗವರ್ನ್‌ಮೆಂಟ್ ಆದೇಶದ ಮೇಲೆ ಯಾವ ತರಹ ಕ್ರಮ ತೆಗೆದುಕೊಳ್ಳಬೇಕಾಗಿತ್ತೋ, ಅದನ್ನು ತೆಗೆದುಕೊಳ್ಳದಿರುವುದು ನಿಜವಾಗಿಯೂ ವಿಷಾದದ ಸಂಗತಿ. ಆದರೆ ಖಾದಿ ಕಮಿಷನ್ನಿನವರು, ಇಂತಿಷ್ಟೇ ಜನರ ಒಂದು ಯೂನಿಟ್ ಡಿಫೈನ್ ಮಾಡಿಲ್ಲ. ಮಾಲೀಕರೊಳಗೊಂಡು 5 ಜನ ಇದ್ದರೆ ಯೂನಿಟ್ಟಾಗಿ ತೆಗೆದುಕೊಳ್ಳಬಹುದೆಂದು ಸರಕಾರ ಹೇಳಿದೆ. ಆದರೆ ಯೂನಿಟ್ಟಿನಲ್ಲಿ ಇಂತಿಷ್ಟು ಜನ ಇದ್ದಾರೆಂದು ತಿಳಿದುಕೊಳ್ಳುವುದಕ್ಕಾಗುವುದಿಲ್ಲ. ಉದಾಹರಣೆಗೆ ಲೆದರ್‌ಗೂಡ್ಸಿನಲ್ಲಿ, ಯೂನಿಟ್ ಡಿಫೈನ್ ಮಾಡುವುದಕ್ಕೆ ಬರುವುದಿಲ್ಲ ಯಾವುದನ್ನಾದರೂ ಗಣನೆ ಮಾಡಬೇಡಿ ಎಂದು ಖಾದಿ ಕಮಿಷನ್ನಿನವರು ಹೇಳಿದ್ದಾರೆ. ಹಳ್ಳಿಯಲ್ಲಿ ಕೆಲಸಮಾಡತಕ್ಕ ಕಾಬ್ಲರುಗಳ ಯೂನಿಟ್ಟನ್ನು ತಿಳಿದು ಕೊಂಡು, ಏನಾದರೂ ಅಂಕಿ ಸಂಖ್ಯೆಗಳನ್ನು ನಿರ್ದಿಷ್ಟ ಮಾಡುವುದಾದರೆ, ನಿಜವಾಗಿಯೂ ಅವರ ಒಂದು ಉದ್ಯೋಗಕ್ಕೆ ಒಂದು ಆತಂತ್ರ ತಂದ ಹಾಗಾಗುತ್ತದೆ. ನೀವು ಯೂನಿಟ್ಟಿಗೆ ಇಂತಿಷ್ಟು ಜನ ಇರಬೇಕೆಂಬುದನ್ನು ಸಡಿಲಗೊಳಿಸಬೇಕು. ಏಕೆಂದರೆ ಇವತ್ತು tanning process, leather works for loan ತೆಗೆದುಕೊಂಡರೆ, ಕೆಲವೇ ಜನ ಮಾತ್ರ ಬರುತ್ತಾರೆಂದು objections call for ಮಾಡಿದಾಗ ನಿಮ್ಮ ಗಮನಕ್ಕೆ ತಂದಿದ್ದೇನೆ.

2-30 P.M.

ಟ್ಯಾನಿಂಗ್ ಪ್ರೋಸೆಸ್‌ನಲ್ಲಿ ಕನಿಷ್ಟ ಪಕ್ಷ 11 ಜನ ಬೇಕಾಗುತ್ತದೆ. ಕಾಬ್ಲರ್ಸ್ ವಿಷಯದಲ್ಲಿ ಕನಿಷ್ಟ 7 ಜನ ಬೇಕಾಗುತ್ತದೆ. ಈ ರೀತಿ ಯಾವ ಯಾವ ಭಾಗದಲ್ಲಿ ಎಷ್ಟೆಷ್ಟು ಬೇಕಾಗುತ್ತದೆ ಎಂಬುದನ್ನು ನಾನು ಆ ಪತ್ರದ ಮುಖೇನ ತಿಳಿಸಿದ್ದೇನೆ. ಅದನ್ನು ತಾವು ಸ್ವಲ್ಪ ಗಮನಿಸಿ ಅದರ ಬಗ್ಗೆ ಸಾಕಾದಷ್ಟು ವಿಚಾರಮಾಡಿ ಕಾಬ್ಲರ್ಸ್‌ಗೆ ಬೇಕಾಗಿರತಕ್ಕ ಸೌಕರ್ಯಗಳನ್ನು ಸೂಕ್ತ ರೀತಿಯಲ್ಲಿ ಅವರಿಗೆ ಮಾಡಿ ಕೊಡಬೇಕೆಂದು ಹೇಳುತ್ತೇನೆ. ಒಂದು ಕಡೆ ಸೇಲ್ಸ್ ಟ್ಯಾಕ್ಸ್ ಯಾವ ರೀತಿ

(ಶ್ರೀ ಜೆ. ಎಲ್. ಕಬಾಡಿ)

ಯಲ್ಲಿ ವಸೂಲು ಮಾಡುತ್ತೀರೋ ಅದೇ ರೀತಿಯಲ್ಲಿ ಹರಿ ಜನರ ವೆಲ್‌ಫೇರ್ ವಿಷಯದಲ್ಲೂ ಯಾವ ರೀತಿ ಗಮನಕೊಡಬೇಕೆಂಬುದನ್ನು ಸಹ ಸರಕಾರ ನೋಡ ಬೇಕಾಗಿದೆಯೆಂದು ಮಾತ್ರ ಹೇಳುತ್ತೇನೆ. ಅದೇನೆಂದರೆ ಪಂಜಾಬಿನ ಮುಖ್ಯ ಮಂತ್ರಿ ಕೈರಾನ್ ಅವರು ಹರಿಜನರ ಅಭಿವೃದ್ಧಿ ಮಾಡಬೇಕೆಂದು ಹೆಚ್ಚು ಹೆಚ್ಚು ಟಾಕ್ಸ್ ಹಾಕಬೇಕೆಂದು ಹೇಳುತ್ತಾರೆ. ಅಷ್ಟೇ ಅಲ್ಲದೆ ಎಲ್ಲಾ ಪಾರ್ಟಿಗಳಲ್ಲೂ ವಿನಂತಿ ಮಾಡಿಕೊಂಡಿದ್ದಾರೆ. ಕಾಂಗ್ರೆಸ್ ಪಾರ್ಟಿಯೊಡನೆ ಹರಿಜನರ ವಿಷಯದಲ್ಲಿ ಇತರ ಪಾರ್ಟಿಗಳವರೂ ಸಹ ಕೈಕೂಡಿಸಬೇಕೆಂದು ವಿನಂತಿ ಮಾಡಿಕೊಂಡಿದ್ದಾರೆ. ಹಾಗೆಯೇ ನಮ್ಮ ಸರ್ಕಾರದವರೂ ಸಹಿತ ಹರಿಜನರ ಅಭಿವೃದ್ಧಿಗಾಗಿ, ಅವರ ಕಲ್ಯಾಣದಸಲುವಾಗಿ, ಅವರ ಉದ್ಯಮ ಬೆಳವಣಿಗೆ ಆಗುವ ಸಮವಾಗಿ ಚೈನಿ ವಸ್ತುಗಳ ಮೇಲೆ ಯಾವ ರೀತಿಯ ತೆರಿಗೆ ಹಾಕಿದರೂ ಪರವಾಗಿಲ್ಲ ಅವರಿಗೆ ಚರ್ಮಕಾರರಿಗೆ ಎಲ್ಲ ರೀತಿಯಿಂದಲೂ ಸೌಕರ್ಯ ಒದಗಿಸಬೇಕು ಮತ್ತು ಹರಿಜನರು ಕಾಬ್ಲರ್ಸ್ ಆಗಲಿ, ಟ್ಯಾನರ್ಸ್ ಆಗಲೀ ಮತ್ತೆ ಯಾವ ಕೆಲಸ ಮಾಡುವವರಾಗಲೀ ಅವರ ಮೇಲೆ ಹೆಚ್ಚು ತೆರಿಗೆಯು ಹೊರೆ ಬೀಳದಂತೆ ದಯವಿಟ್ಟು ಕೂಲಂಕಷವಾಗಿ ವಿಚಾರ ಮಾಡಿ ಹಾಕಿದ ಟ್ಯಾಕ್ಸ್ ತೆಗೆದು ಹಾಕಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಪಾನನಿರೋಧದ ವಿಷಯದಲ್ಲಿ ನಮ್ಮ ಸರ್ಕಾರದವರು ಕೈಕೊಂಡಿರುವ ಧೋರಣೆ ಬಹಳ ಆನಂದದ ಸಂಗತಿ. ಕೆಲವು ಮಾನ್ಯ ಸದಸ್ಯರು ವಿರೋಧ ಪಕ್ಷದವರು ಪಾನನಿರೋಧ ಜಾರಿಯಲ್ಲಿರುವುದರಿಂದ ಹೆಚ್ಚು ಹೆಚ್ಚಿನ ತೆರಿಗೆಗಳನ್ನು ಸರ್ಕಾರ ಜನರ ಮೇಲೆ ಹಾಕಬೇಕಾಗಿದೆ, ಆದ್ದರಿಂದ ಅದನ್ನು ತೆಗೆದುಹಾಕಬೇಕು, ಹಾಗೆ ಮಾಡುವುದರಿಂದ ನಮಗೆ ಹೆಚ್ಚು ಹಣ ಬರುತ್ತದೆ ಎಂದು ಹೇಳುತ್ತಾರೆ. ಇವತ್ತು ಹರಿಜನರ ಮನೆತನದಲ್ಲಿ ಹುಟ್ಟಿದ ನಾನು ಹೇಳುತ್ತೇನೆ. ಹರಿ ಜನರಿಗೆ ಯಾವ ತರಹದ ಕಷ್ಟ ಇದೆ ಎಂಬುದು ಅವರಿಗೇನು ಗೊತ್ತು ? ಈ ಕೆಟ್ಟ ಚಟದಿಂದ ಅವರು ಪಾರಾಗಿ ಅವರ ಜೀವನದಲ್ಲಿ ಏನಾಗಿದೆ ಎಂದು ಉದಾಹರಣೆ ಹೇಳ ಬೇಕಾದರೆ ಇವತ್ತು ಅವರ ಮನೆತನ ಎಷ್ಟೋ ಸುಖಮಯವಾಗಿ ಉತ್ತಮ ಜೀವನ ಸಾಗಿಸಿಕೊಂಡು ಹೋಗುತ್ತಾ ಇದ್ದಾರೆ. ಇದು ಅವರಿಗೆ ಗೊತ್ತಿಲ್ಲ. ನಮಗೆ ಗೊತ್ತು. ಆದ್ದರಿಂದ ಈ ಪಾನನಿರೋಧ ಯಾರಾದರೂ ಹೋಗ ಬೇಕೆಂದು ಹೇಳಿದರೆ ತಪ್ಪಾಗುತ್ತದೆ. ಅದಕ್ಕೆ ಸರ್ಕಾರದವರು ಲಕ್ಷ್ಯ ಕೊಡದೇ ಇನ್ನು ಕಠೋರವಾಗಿ ಜಾರಿಗೆ ತಂದು, ಯಶಸ್ವಿಯಾಗಿ ಮಾಡಬೇಕೆಂದು ಹೇಳಿ ಎರಡು ಮಾತುಗಳನ್ನು ಹೇಳಲು ಅಧ್ಯಕ್ಷರು ಅವಕಾಶ ಕೊಟ್ಟಿದ್ದಕ್ಕಾಗಿ ಅವರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಪಿ. ವೆಂಕಟಗಿರಿಯಪ್ಪ (ಕೋಲಾರ).—ಸ್ವಾಮಿ, ಈ ಸಭೆಯ ಮುಂದೆ ಇರುವ ಮಾರಾಟ ತೆರಿಗೆ, ವ್ಯವಸಾಯದ ಆದಾಯದ ತೆರಿಗೆ ಮತ್ತು ರಾಜ್ಯದ ಅಬ್ಕಾರಿ ತೆರಿಗೆ ಬೇಡಿಕೆಗಳನ್ನು ನಾನು ವಿರೋಧಿಸುತ್ತೇನೆ. ಈದಿನ ನನಗೆ ಮುಖ್ಯವಾಗಿ ಏನು ಅನಿಸುತ್ತದೆ ಎಂದರೆ ಈ ದೇಶಕ್ಕೆ ಪರಕೀಯರ ಆಕ್ರಮಣದಿಂದ ತುರ್ತುಪರಿಸ್ಥಿತಿ ಉಂಟಾಗಿದೆ. ಈ ಜರೂರು ಪರಿಸ್ಥಿತಿಯನ್ನು ಎದುರಿಸಲು ನಾವು ನಾನಾ ಕ್ರಮಗಳನ್ನು ದೇಶದಲ್ಲಿ ಕೈಕೊಳ್ಳಬೇಕು ; ಸರ್ಕಾರ ದುಂದುವೆಚ್ಚವನ್ನು ಕಡಮೆ ಮಾಡಬೇಕು ಎಂದು ರೇಡಿಯೋ ಮತ್ತು ಪತ್ರಿಕೆಗಳಲ್ಲಿ ಮಂತ್ರಿಗಳು ಪ್ರತಿದಿನವೂ ಕೂಡ ಜನಗಳಿಗೆ ಬುದ್ಧಿವಾದ ಹೇಳುತ್ತಾ ಇದ್ದಾರೆ, ಆದರೆ ವಾಸ್ತವವಾಗಿ ಈ ತುರ್ತುಪರಿಸ್ಥಿತಿಯ ಪರಿಣಾಮ ಸರ್ಕಾರದ ಮೇಲೆ ಯಾವ ರೀತಿಯಲ್ಲೂ ಆಗಿಲ್ಲ ಎಂದು ನನಗೆ ಅನಿಸುತ್ತದೆ. ಈದಿವಸ ಮಾನ್ಯ ಮಂತ್ರಿಗಳು ಮಾಡುವ ಖರ್ಚಾಗಲೀ ಅಥವಾ ನಮ್ಮ ಸರ್ಕಾರ ಮಾಡುವ ದುಂದುವೆಚ್ಚ ಹಿಂದೆ ಯಾವ ರೀತಿ ನಡೆಯುತ್ತಾ ಇತ್ತೋ ಅದೇ ರೀತಿಯಲ್ಲೇ ಎಲ್ಲಾ ಭಾಗದಲ್ಲೂ ಕೂಡ ನಡೆಸುತ್ತಾ ಇದ್ದಾರೆಯೇ ವಿನಾ ಯಾವ ರೀತಿಯ ಬದಲಾವಣೆಯೂ ಕಾಣುವುದಿಲ್ಲ. ಮಂತ್ರಿಗಳ ವಿಷಯ, ಸರ್ಕಾರದ ವಿಷಯ ನಾವು ಮಾತನಾಡಿದಾಗ ನಮ್ಮ ಮಂತ್ರಿಗಳು ಕೆಲವರಿಗೆ ಸಿಟ್ಟು ಬರುತ್ತದೆ. ಏಕೆಂದರೆ............

Mr. SPEAKER.—These points would have been relevant, the Demands which were passed yesterday. The Hon'ble member can only touch on those points but not develop them.

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ಇಷ್ಟೊಂದು ತೆರಿಗೆ ಹಾಕುವ ಪರಿಸ್ಥಿತಿ ಬಂದಿದೆಯಲ್ಲಾ ಎಂದು ಹೇಳುವುದಕ್ಕೆ ಹೇಳುತ್ತನೆ, ಅಷ್ಟೇ.

ಶ್ರೀ ಪಿ. ವೆಂಕಟಗಿರಿಯಪ್ಪ.—ತುರ್ತುಪರಿಸ್ಥಿತಿಗನುಗುಣವಾಗಿ ಏನು ಬದಲಾವಣೆಯಾಗಬೇಕೆಂದು ನಿರೀಕ್ಷಿಸಿತ್ತೋ ಅದು ಯಾವ ರೀತಿಯಲ್ಲೂ ಕಾಣುತ್ತಾ ಇಲ್ಲ. ಈ ದಿವಸ ಮಾರಾಟ ತೆರಿಗೆ

ಯಿಂದ ಹೆಚ್ಚಿನ ಹಣ ನಮ್ಮ ಸರ್ಕಾರಕ್ಕೆ ಬರುತ್ತಾ ಇದೆ. ಮಾರಾಟ ತೆರಿಗೆ ಸರ್ಕಾರದವರಿಗೆ ಬಹಳ ಮುಖ್ಯವಾದ ಆದಾಯದ ಬಾಬು. ಅದನ್ನು ಪೂರ್ಣವಾಗಿ ತೆಗೆದು ಹಾಕಬೇಕೆಂದು ಹೇಳುವುದಕ್ಕೆ ನಾನು ತಯಾರಾಗಿಲ್ಲ. ಆದರೂ ಸಹ ಈ ಒಂದು ಇಲಾಖೆಯವರು ಕಾನೂನನ್ನು ಜಾರಿಗೆ ತರುವ ರೀತಿಯನ್ನು ನೋಡಿದರೆ ಸಣ್ಣ ವರ್ತಕರು, ಸಣ್ಣ ಸಣ್ಣ ವ್ಯಾಪಾರಸ್ಥರಿಗೆ ಕಿರುಕುಳಕೊಡಲು ಒಂದು ಸಾಧನವಾಗಿ ಇದನ್ನು ಉಪಯೋಗಿಸುತ್ತಾ ಇದ್ದಾರೆ ಎಂದು ನನ್ನ ಮನಸ್ಸಿಗೆ ಕಾಣುತ್ತಾ ಇದೆ. ಸಣ್ಣ ನಗರಗಳಲ್ಲಿ, ಊರುಗಳಲ್ಲಿ ಸಣ್ಣ ಸಣ್ಣ ಅಂಗಡಿಗಳನ್ನಿಟ್ಟುಕೊಂಡಿರತಕ್ಕ ವ್ಯಾಪಾರಸ್ಥರು, ಅವರು ಅವಿದ್ಯಾವಂತರಾಗಿದ್ದು ಲೆಕ್ಕಪಕ್ಕಗಳನ್ನಿಡುವುದಕ್ಕೆ ಕಷ್ಟವಾಗುತ್ತಿದೆ. ಭಾರಿ ವ್ಯಾಪಾರಸ್ಥರು, ಭಾರಿ ಕೈಗಾರಿಕೋದ್ಯಮಿಗಳಿಗೆ ಸಿಬ್ಬಂದಿ ಇರುತ್ತದೆ ಬೇಕಾದಷ್ಟು ಲೆಕ್ಕ ಪತ್ರ ಇಟ್ಟು ಇಲಾಖೆಯ ಅಧಿಕಾರಿಗಳಿಗೆ, ಮಂತ್ರಿಗಳಿಗೆ ಕಣ್ಣಿಗೆ ಮಣ್ಣು ಎರಚಿ ಲೆಕ್ಕಗಳನ್ನು ತಲೆಕೆಳಗುಮಾಡಿ ತೆರಿಗೆಯನ್ನುಕೊಡಬೇಕಾದ ಸ್ಥಿತಿಯಲ್ಲೂ ಕೊಡದಂತೆ ಮಾಡಿಕೊಳ್ಳುವುದಕ್ಕೆ ಅವರಿಗೆ ಸಾಧ್ಯವಿದೆ. ಆದರೆ ಸಣ್ಣವ್ಯಾಪಾರಸ್ಥರು ಚಿಲ್ಲರೆ ಅಂಗಡಿ ಇಟ್ಟುಕೊಂಡು 300-500 ರೂಪಾಯಿ ಬಂಡವಾಳ ಹಾಕಿಕೊಂಡಿರುವವರಿಗೆ 'ನೋಟೀಸ್'ಕೊಟ್ಟು ಲೆಕ್ಕ ಪತ್ರ ಇಟ್ಟಿಲ್ಲ' ಆದ್ದರಿಂದ ಇಷ್ಟು ಹಣ ಕೊಡಲೇ ಬೇಕೆಂದು ಅವರಿಗೆ ಆದೇಶ ಕೊಡುವ ಸಂದರ್ಭ ಅನೇಕವು ನಮ್ಮಗಮನಕ್ಕೆ ಬಂದಿವೆ. ಅದರ ಬಗ್ಗೆ ಅಧಿಕಾರಿಗಳಲ್ಲಿ ಮನವಿಕೊಟ್ಟು ಅವನು ಬಡವ, ಅವನಲ್ಲಿ ಇಷ್ಟೇ ನಡೆಯುತ್ತಾ ಇರುವುದು, ಅವನ ಅಂಗಡಿ ನೋಡಿ ಎಂದರೆ ಅದೆಲ್ಲಾ ಕೇಳುವುದಿಲ್ಲ ಕಾನೂನು ಪ್ರಕಾರ ಲೆಕ್ಕ ಇಡಬೇಕು ಲೆಕ್ಕ ಇಡಲಿಲ್ಲ, ಆದ್ದರಿಂದ ಇಷ್ಟೇ ತೆರಿಗೆಕೊಡಬೇಕು ಎಂದು ಹೇಳುತ್ತಾರೆ. ಈ ರೀತಿ ಕಾನೂನಿನ ನೆಪದಲ್ಲಿ ಸಣ್ಣ ವ್ಯಾಪಾರಸ್ಥರು ಮತ್ತು ಸಾಮಾನ್ಯ ಜನರಿಗೆ ತೊಂದರೆಯಾಗದಂತೆ ಮಾರಾಟ ತೆರಿಗೆಯನ್ನು ವಸೂಲು ಮಾಡಬೇಕೆಂದು ಸರ್ಕಾರದವರಲ್ಲಿ ಪ್ರಾರ್ಥಿಸುತ್ತೇನೆ.

ಇದೇ ರೀತಿ ವ್ಯವಸಾಯದ ಆದಾಯದ ತೆರಿಗೆಯಲ್ಲೂ ಕೂಡ ಹಳ್ಳಿಗಾಡಿನಲ್ಲಿ ಕೆಲವು ಜಮೀನ್ದಾರರೆಂದು ಹೇಳುವವರು ಲೆಕ್ಕ ಪತ್ರ ಇಡುವುದಕ್ಕೆ ತುಂಬಾ ಕಷ್ಟ ಪರಿಸ್ಥಿತಿ ಇದೆ. ಒಂದು ವೇಳೆ ಲೆಕ್ಕ ಪತ್ರ ಇಲ್ಲದೇ ಇದ್ದರ ಜಮೀನು ಎಷ್ಟಿದೆ, ಆದಾಯ ಎಷ್ಟಿದೆ ಎಂಬುದನ್ನು ಗಣನೆಗೆ ತೆಗೆದುಕೊಂಡು ತೆರಿಗೆ ವಿಧಿಸಬೇಕೇ ಹೊರತು ಲೆಕ್ಕಪತ್ರ ಇಲ್ಲ ಎನ್ನುವುದರ ಮೇಲೆ ಎಷ್ಟುಬೇಕಾದರೂ ವಿಧಿಸಬಹುದು ಎನ್ನುವ ರೀತಿಯಲ್ಲಿ ಸರ್ಕಾರದ ಅಧಿಕಾರಿಗಳು ಸರ್ವಾಧಿಕಾರಿಗಳಂತೆ ವರ್ತಿಸಿ ಕಿರುಕುಳ ಕೊಡಬಾರದು. ಹೀಗೆ ವ್ಯವಸಾಯಗಾರರಿಗೆ ಕಿರುಕುಳ ಆಗದ ರೀತಿಯಲ್ಲಿ ಕಾನೂನನ್ನು ಜಾರಿಗೆ ತರಬೇಕೆಂದು ಸರ್ಕಾರದವರಲ್ಲಿ ಪ್ರಾರ್ಥಿಸುತ್ತೇನೆ.

ಈದಿವಸ ಈಗಾಗಲೆ ಈ ವಿಚಾರದಲ್ಲಿ ಅನೇಕ ಸ್ನೇಹಿತರು ಮಾತನಾಡಿದ್ದಾರೆ, ಇನ್ನೂ ಅನೇಕ ಜನ ಸ್ನೇಹಿತರು ಮಾತನಾಡುವವರಿದ್ದಾರೆ ಎಂದು ನಾನು ಅಂದುಕೊಂಡಿದ್ದೇನೆ.

ಈದಿವಸ ಪಾನನಿರೋಧದ ವಿಚಾರದಲ್ಲಿ ಬಹಳ ಜಿಜ್ಞಾಸೆಗಿಟ್ಟುಕೊಂಡಿದೆ. ಕೆಲವುದಿನಗಳ ಹಿಂದೆ ನಮ್ಮ ಮಾನ್ಯ ಮುಖ್ಯಮಂತ್ರಿಗಳು ಈಪಾನನಿರೋಧದ ವಿಚಾರದಲ್ಲಿ ಒಂದು ಹೇಳಿಕೆಯನ್ನು ಕೊಟ್ಟು ಇತ್ತೀಚೆಗೆ ಅವರ ಕೆಲವು ಸ್ನೇಹಿತರ ಪ್ರಭಾವಕ್ಕೊಳಗಾಗಿ ದೇಶದಲ್ಲಿ ಈ ಪಾನನಿರೋಧದ ಅಗತ್ಯ ಬಹಳವಾಗಿದೆ ಎಂದು ಅದಕ್ಕೆ ಒಂದು ಹೊಸ ರೂಪವನ್ನುಕೊಟ್ಟು ಹಿಂದೆ ತಾವು ಹೇಳಿದ್ದ ಹೇಳಿಕೆಗೆ ತದ್ವಿರುದ್ಧವಾದ ಹೇಳಿಕೆಯನ್ನುಕೊಟ್ಟು ನಮ್ಮ ರಾಜ್ಯದಲ್ಲಿ ಯಾವತ್ತೂ ಇದನ್ನು ರದ್ದುಪಡಿಸುವುದಕ್ಕೆ ಈ ಸರ್ಕಾರ ತಯಾರಾಗಿಲ್ಲ ಎಂದು ಹೇಳಿಕೆ ಕೊಟ್ಟಿದ್ದಾರೆ. ಅವರು ಇದು ಇಡೀ ರಾಷ್ಟ್ರಕ್ಕೆ ಸಂಬಂಧಪಟ್ಟ ಪ್ರಶ್ನೆ. ಇದನ್ನು ತಪ್ಪಿಸತಕ್ಕ ವಿಚಾರ ನಮ್ಮ ಕೈಯಲಿಲ್ಲ ಎಂದು ಅವರು ಹೇಳಿದ್ದಾರೆ. ಆದರೆ ಈದಿವಸ ಅವರನ್ನು ನಾನು ಕೇಳುತ್ತೇನೆ—ನಮ್ಮ ಮೈಸೂರು ರಾಜ್ಯದಂತೆ, ಯು. ಪಿ. ಪ್ರಾಂತ್ಯವೂ ಭಾರತ ಸರ್ಕಾರದ ಒಂದು ಭಾಗ. ಆದರೆ ಈದಿವಸ ಆ ಯು. ಪಿ. ಪ್ರಾಂತ್ಯದ ಮುಖ್ಯಮಂತ್ರಿಗಳಾದ ಶ್ರೀ ಸಿ. ಬಿ. ಗುಪ್ತ ಅವರು ಅಲ್ಲಿ ಈ ಪಾನನಿರೋಧ ಶಾಸನವನ್ನು ರದ್ದುಮಾಡಿದ್ದಾರೆ. ಇಡೀ ದೇಶಕ್ಕೇ ಮಾದರಿಯಾಗಿದ್ದಾರೆ. ಅದರಂತೆ ಈ ನಮ್ಮ ಮೈಸೂರು ರಾಜ್ಯದಲ್ಲಿಯೂ ಏಕೆ ಇದನ್ನು ರದ್ದು ಮಾಡಬಾರದು ಎಂದು ಕೇಳುತ್ತೇನೆ, ಆದರೆ ಈ ಕುಡಿತವನ್ನು ನಿಲ್ಲಿಸಿದ್ದರಿಂದ ನಮ್ಮ ದೇಶಕ್ಕೆ ಅದರಲ್ಲೂ ಆ ಹರಿಜನರ ಜೀವನದಲ್ಲಿ ಒಂದು ಮಹತ್ವ ಕ್ರಾಂತಿಕಾರಿಕ ಬದಲಾವಣೆಯನ್ನುಂಟುಮಾಡಿದೆ; ಆದಕಾರಣ ನಾವು ಇದನ್ನು ಇಲ್ಲಿ ತೆಗೆಯಬಾರದೆಂದು ಇದ್ದೇವೆಂದು ಹೇಳಿದರೆ ಇದಾದರೂ ಒಂದುರೀತಿಯಲ್ಲಿ ಡಿಫೆಂಡ್ ಮಾಡಿಕೊಳುವುದು ಸರಿ ಎನ್ನಬಹುದು, ಹಾಗಿಲ್ಲದೆ ಇದು ಇಡೀ ರಾಷ್ಟ್ರಕ್ಕೆ ಸಂಬಂಧಪಟ್ಟ ಪ್ರಶ್ನೆಯಾಗಿದೆ ಎಂದು ಹೇಳುವುದು ಅರ್ಥವಿಲ್ಲದವಾದ. ಈ ಪಾನನಿರೋಧ ಶಾಸನದಿಂದ ಈ ರಾಜ್ಯದಲ್ಲಿ ಬಹಳ ಕೆಟ್ಟ ಪರಿಣಾಮಗಳಾಗಿವೆ, ಸರ್ಕಾರದವರು ಮನಸ್ಸುಮಾಡಿದರೆ ಇದನ್ನು ಕಿತ್ತು ಹಾಕುವುದಕ್ಕೆ ಅವರಿಗೆ ಅಧಿಕಾರವಿದೆಯೆಂದು ನಾನು ತಿಳಿದುಕೊಂಡಿದ್ದೇನೆ. ಆದರೆ ಹಾಗೆ ಮಾಡದೆ ಇದರ ಹೊಣೆಯನ್ನು ಕೇಂದ್ರ ಸರ್ಕಾರದ ಮೇಲೆ ಹಾಕಿ ತಾವು ಹೇಗೋ ತಪ್ಪಿಸಿಕೊಂಡು ಬೆಂಗಳೂರಲ್ಲಾದರೆ ಈ ಕುಡಿತ ಇರಲಿ—ಕೋಲಾರದಲ್ಲಿ ಬೇಡ ಎನ್ನುವ ಸರ್ಕಾರದವರ ನಿಲುವು ಜನಗಳಿಗೆ ಅರ್ಥವಾಗುತ್ತಿಲ್ಲ, ಆದುದರಿಂದ ಸರ್ಕಾರದವರ

(ಶ್ರೀ ಪಿ. ವೆಂಕಟಗಿರಿಯಪ್ಪ)

ಖಚಿತವಾದ ಧೋರಣೆ ಏನೆಂಬುದನ್ನು ಜನಗಳಿಗೆ ವ್ಯಕ್ತಪಡಿಸಬೇಕಾದ್ದು ಆವಶ್ಯಕ. ನನ್ನ ಸ್ವಂತ ಅನುಭವಕ್ಕೆ ಬಂದಿರುವಂತೆ ಈ ಹಿಂದೆ ಕೇವಲ ನೂರಕ್ಕೆ ನಾಲ್ಕು ಜನ ಮಾತ್ರ ಕುಡಿಯುತ್ತಿದ್ದರು. ಆದರೆ ಈದಿವಸ ನಮ್ಮ ಜಿಲ್ಲೆ ಸಾರಾಯಿ ತಯಾರಿಸತಕ್ಕ ಒಂದು ಕೇಂದ್ರವೇ ಆಗಿದೆ. ಅಲ್ಲಿ ಈ ಕಳ್ಳ ಭಟ್ಟಿ ತಯಾರಾಗಿ ಸುತ್ತ ಮುತ್ತಲ ಪ್ರದೇಶಗಳಿಗೆ ಸಂಬರಾಯಿ ಆಗುತ್ತಿದೆ. ಹೀಗೆ ಕೋಲಾರ ಜಿಲ್ಲೆ ಈದಿವಸ ಒಂದು ದೊಡ್ಡ ಡಿಸ್ಟಿಲರಿ ಸೆಂಟರಾಗಿದೆ. ಹೀಗಾಗಿ ಈ ಜಿಲ್ಲೆಯಲ್ಲಿ ಈದಿವಸ ಸಾಮಾನ್ಯ ಜನರು ಜೀವನಮಾಡುವುದೇ ಬಹಳ ಕಷ್ಟವಾಗಿದೆ. ಇದನ್ನು ತಡೆಗಟ್ಟುವುದಕ್ಕೆ ದೊಡ್ಡ ಸಿಬಂದಿಯಿಂದೆ—ಪೋಲೀಸ್ ಇದೆ ಎಂದು ಸರ್ಕಾರದವರು ಹೇಳಬಹುದು. ಆದರೆ ಸರ್ಕಾರದವರು ವಿಫಲರಾಗಿದ್ದಾರೆಂಬುದನ್ನು ನಾನೀಗ ಮತ್ತೊಮ್ಮೆ ಹೇಳಬೇಕಾದ್ದಿಲ್ಲ. ಈ ವಿಚಾರ ಮಂತ್ರಿಗಳಿಗೂ ಗೊತ್ತಿರುವುದೇ ಆಗಿದೆ. ಈ ಹಿಂದೆ ಮಂತ್ರಿಗಳಾಗಿದ್ದ ಶ್ರೀ ಎಚ್. ಎಂ. ಚನ್ನಬಸಪ್ಪನವರು ಈ ಬಗ್ಗೆ ಅವರೇ ಸ್ವತಃ ಮುತವರ್ಜಿವಹಿಸಿ ಅನೇಕ ಕಡೆ ಹೋಗಿ ಅನೇಕ ಕೇಸುಗಳನ್ನೂ ಹಾಕಲಾಗಿತ್ತು. ಆದರೆ ಅದೆಲ್ಲವೂ ವಿಫಲವಾಗಿದೆ. ಈದಿವಸ ದೇಶದಲ್ಲಿ ಈ ಪಾನನಿರೋಧದ ಶಾಸನ ಜಾರಿಯಲ್ಲಿರುವುದರಿಂದ ಜನರ ನೈತಿಕ ಮಟ್ಟ ಕೆಡುತ್ತಿದೆ. ಮನೆ ಮನೆಯಲ್ಲೂ ಕಳ್ಳ ಭಟ್ಟಿ ಸಾರಾಯಿ ತಯಾರಾಗುತ್ತಿರುವುದರಿಂದ ಇಲ್ಲಿಯ ತನಕ ಈ ಕುಡಿತವೆಲ್ಲ ಗಂಡಸರಿಗೇ ಇದ್ದುದು ಈಗ ಹೆಂಗಸರು—ಗಂಡಸರು, ಮನೆಮಕ್ಕಳಿಗೆಲ್ಲ ಹರಡಿ ಅವರೂ ಕುಡಿಯಲು ಪ್ರಾರಂಭಮಾಡಿದ್ದಾರೆ. ಆದ್ದರಿಂದ ಮುಂದೆ ದೇಶದಲ್ಲಿ ಇದರಿಂದ ಕೆಟ್ಟ ಪರಿಣಾಮಗಳು ಬಹಳವಾಗಿ ಆಗುತ್ತವೆಂದು ನಾನೀಗ ಹೇಳಬಯಸುತ್ತೇನೆ. ಈ ಹಿಂದೆ ಒಂದೂರಿಗೆ ಎಲ್ಲೋ ನಾಲ್ಕಾರು ಜನರು ಜೈಲಿಗೆ ಹೋಗೋ ಅಥವ ಜುಲ್ಮಾನೆ ಕೊಟ್ಟೋ ಬರುತ್ತಿದ್ದ ಪ್ರಸಂಗ ತೀರಾ ಕಡಮೆಯಾಗಿತ್ತು. ಈಗ ಹಳ್ಳಿ ಹಳ್ಳಿಯಲ್ಲೂ ಈ ಜೈಲಿಗೆ ಹೋಗತಕ್ಕ—ಜುಲ್ಮಾನೆಕೊಡತಕ್ಕ ಜನರ ಸಂಖ್ಯೆ ಏರುತ್ತದೆ. ಈ ಪರಿಣಾಮ ಮುಂದೆ ದೇಶಕ್ಕೆ ಬಹಳ ಕೆಡುಕನ್ನುಂಟುಮಾಡುತ್ತದೆ. ಮುಂದೆ ದೇಶದಲ್ಲಿ ಶಾಂತಿ ಪಾಲನೆಮಾಡುವುದು ಬಹಳ ಕಷ್ಟಕ್ಕೆ ಬರುತ್ತೆ. ಆದ್ದರಿಂದ ಈ ಪಾನನಿರೋಧ ಶಾಸನವನ್ನು ಸರ್ಕಾರ ತೀವ್ರವಾಗಿ ಇನ್ನೊಮ್ಮೆ ಪರಿಶೀಲನೆ ಮಾಡಿ ಈಗಿನ ಜರೂರು ಪರಿಸ್ಥಿತಿಯಲ್ಲಿ ಈ ಬಾಬಿನಿಂದ ಕಳೆದುಕೊಂಡಿರುವ 8 ಕೋಟಿ ರೂಪಾಯಿಗಳ ಪರಿಣಾಮವೆಷ್ಟಾಗುತ್ತದೆ ಎಂಬುದನ್ನೆಲ್ಲ ಆಲೋಚನೆಮಾಡಿ ಇದನ್ನು ಕೂಡಲೆ ರದ್ದುಮಾಡಲು ಸರ್ಕಾರ ದಿಟ್ಟತನದಿಂದ ಒಂದು ನಿಲುವನ್ನು ಕೈಗೊಂಡು ಶ್ರೀ ಸಿ. ಬಿ. ಗುಪ್ತರು ಮಾದರಿಯಾದಂತೆ ನಮ್ಮ ಶ್ರೀ ನಿಜಲಿಂಗಪ್ಪನವರೂ ರಾಷ್ಟ್ರಕ್ಕೆ ಮಾದರಿಯವರಾಗಬೇಕೆಂದು ಹೇಳಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

[Sri L. B. BIRJE (Khanapur).—Spoke in Marathi].

†ಶ್ರೀ ಕೆ. ದೇವಯ್ಯ (ಮಲ್ಲೇಶ್ವರಂ).—ಸ್ವಾಮಿ, ಅಧ್ಯಕ್ಷರೇ, ನಾನು ಆಬ್ಕಾರಿ ವಿಚಾರದಲ್ಲಿ ಎರಡು ಮಾತುಗಳನ್ನು ಆಡುತ್ತಾ ಪ್ರಾಯಶಃ ಪಾನನಿರೋಧವೇನಿದೆ ಅದರ ವಿಚಾರದಲ್ಲಿ ತಮ್ಮ ಗಮನವನ್ನು ಸ್ವಲ್ಪ ಎಳೆಯಬೇಕೆಂದು ಪ್ರಯತ್ನಿಸುತ್ತೇನೆ. ಮಹಾತ್ಮ ಗಾಂಧಿಯವರು ನಮ್ಮ ದೇಶದ ಹಿತದೃಷ್ಟಿಯಿಂದ, ಬಡತನದ ಗೋಳಿನಲ್ಲಿ ಬಾಳುವ ಜನತೆಯನ್ನು ಮುಂದೆತರುವ ಉದ್ದೇಶದಿಂದ, ಅಹಿಂಸಾ ತತ್ವದಿಂದ ಕೂಡಿದ ಪಾನನಿರೋಧವನ್ನು ಜಾರಿಗೆ ತರುವುದಕ್ಕಾಗಿ ನಮ್ಮ ಸರ್ಕಾರಕ್ಕೆ ಆದೇಶವನ್ನು ಕೊಟ್ಟರು. ಅದು ಇಂದಿನವರೆಗೂ ನಡೆದುಕೊಂಡು ಬಂದಿದೆ. ಸರ್ಕಾರದ ಅಧಿಕಾರಿಗಳ ಆಲಸ್ಯ ಮನೋಭಾವದಿಂದಲೋ, ಜನತೆಯಲ್ಲಿ ಅಲ್ಲಲ್ಲಿ ಕಂಡು ಬರುವ ಮುಖಂಡರುಗಳ ಪ್ರಭಾವಕ್ಕೊಳಗಾಗಿಯೋ ಪಾನನಿರೋಧವು ಯಶಸ್ವಿಯಾಗಿ ಜಾರಿಗೆ ಬಾರದೆ ಇರಬಹುದು. ನಾನು ಅತ್ಯಧಿಕವಾಗಿ ಬೆಂಗಳೂರು ಪಟ್ಟಣದಲ್ಲಿ ಕೆಲಸಗಾರರು ವಾಸಮಾಡುವ ಜಾಗದಿಂದ ಬಂದವನು. ಪ್ರತಿದಿನ ಅಲ್ಲಿ ಏನುನಡೆಯುತ್ತದೆ, ಯಾವ ರೀತಿ ಅಲ್ಲಿ ಬಡಜನರು ಹಾಗೂ ಸಂಸಾರಿಕರು ಬಾಳಬಹುದೆಂಬ ವಿಷಯವನ್ನು ತಿಳಿದುಕೊಂಡಿದ್ದೇ ಆದರೆ, ಈ ಬಡ್ಜೆಟ್ಟಿನಲ್ಲಿ ಏನು ಹಣವನ್ನು ಒದಗಿಸುತ್ತಿದ್ದೀರಿ ಅದನ್ನು ಸಂಪೂರ್ಣವಾಗಿ ಹೊಡೆದು ಹಾಕಿ ಡಿಫೆನ್ಸ್ ಫಂಡಿಗೆ ಉಪಯೋಗ ಮಾಡಬಹುದು ಎಂದು ನನ್ನ ಮನಸ್ಸಿಗೆ ತೋರುತ್ತದೆ. ನಮ್ಮ ಈಗಿನ ಆರ್ಥಿಕ ಮಂತ್ರಿಗಳು ಯಾರಿದ್ದಾರೆ ಅವರು ಆಗ ಮುಖ್ಯ ಮಂತ್ರಿಗಳಾಗಿದ್ದರು. ಬಿ. ಟಿ. ಎಸ್. ಬಸ್ ಲಕ್ಷ್ಮಿನಾರಾಯಣಪುರದ ಮಾರ್ಗವಾಗಿ ಹೋಗುತ್ತಿತ್ತು. ಅಲ್ಲಿನ ಗೂಂಡಾಗಳು ಕುಡಿದು ಬಸ್ ಡ್ರೈವರ್ ಮತ್ತು ಕಂಡಕ್ಟರ್ ಇವರೊಡನೆ ಹೊಡೆದಾಡಿ, ಬಿ. ಟಿ. ಎಸ್. ಆಫೀಸಿಗೆ ರಿಪೋರ್ಟ್ ಹೋಗಿ ಅವರು ಆ ಮಾರ್ಗದಲ್ಲಿ ಬಸ್ ಸಂಚಾರವನ್ನು ಕಿತ್ತುಹಾಕಿದ್ದಾರೆ. ಸಾವಿರಾರು ಜನಗಳು ಸಣ್ಣ ಸಣ್ಣ ಮಕ್ಕಳನ್ನು ಹಾಕಿಕೊಂಡು ತಮ್ಮ ತಮ್ಮ ಕಾರ್ಯಗಳಿಗೋಸ್ಕರ ಕಾರ್ಖಾನೆಗಳಿಗೆ ಹೋಗುವ ಸೌಲಭ್ಯವೇನಿತ್ತೋ ಆ ಒಂದು ಸೌಕರ್ಯವೂ ಹೊರಟುಹೋಯಿತು. ಬಸ್ಸುಗಳಲ್ಲಿ ಹತ್ತಿಕೊಂಡು, ಟಿಕೆಟ್‌ಗಳನ್ನೂ ಹರಿಸಿಕೊಂಡು

ಇಳಿಯುವಾಗ ಕೊಡುತ್ತೇವೆಂದು ಹೇಳಿ, ಕೊನೆಯಲ್ಲಿ ತನ್ನ ಪಾಡಿಗೆ ತಾನು ಇಳಿದು ಹೋಗುತ್ತಾನೆ. ಹಣ ಕೇಳಿದರೆ ಹೊಡೆಯಲು ಹೋಗುತ್ತಾರೆ. ಮಧ್ಯೆ ಕೇಳಿದರೆ ಮಾತನಾಡುವುದೇ ಇಲ್ಲ. ರೂಟ್ ನಂಬರ್ 8 ಮತ್ತು 9A ಈ ಬಸ್‌ಗಳಲ್ಲಿ ಯಾರು ಯಾರು ಪ್ರಯಾಣ ಮಾಡಿದ್ದಾರೆಯೋ ಅವರಿಗೆ ಇದೆಲ್ಲ ಪ್ರತಿದಿನ ಆಗುವ ಅನುಭವ. ಹೆಣ್ಣು ಮಕ್ಕಳಂತೂ ರಾತ್ರಿ ಎಂಟುಗಂಟೆಯನಂತರ ಆ ಬಸ್‌ಗಳಲ್ಲಿ ತಿರುಗಾಡುವಹಾಗಿಲ್ಲ. ಇಷ್ಟು ಕಷ್ಟಕರವಾದ ಪರಿಸ್ಥಿತಿ ಇದೆ. ನಾನು ಒಂದು ಅಲ್ಪ ಕಾಲಾವಧಿ ಪ್ರಶ್ನೆ ಕೊಟ್ಟಿದ್ದೇನೆ. ಇದೂ ಕೂಡ ಅದರಂತೆಯೇ ಪರಿಣಾಮವಾಗಿದೆ. ಒಂದು ಮರಣ ಕೂಡ ಸಂಭವಿಸಿರುವುದು ಇವೊತ್ತಿನ ಪತ್ರಿಕೆಗಳಲ್ಲಿ ವರದಿಯಾಗಿದೆ.

ಅಧ್ಯಕ್ಷರು.—ಇದನ್ನು ಮುಂಚೆ ಸಹ ಹೇಳಿದ್ದೀರಿ.

ಶ್ರೀ ಕೆ. ದೇವಯ್ಯ.—ಇದು ಪ್ರತಿದಿವಸ ನಡೆಯುತ್ತಿದೆ. ಈಗಲೂಕೂಡ ಒಂದು ಕಾಗದವನ್ನು ಕೊಡುತ್ತಿದ್ದೇನೆ.

ಶ್ರೀ ಬಿ. ಡಿ. ಜತ್ತಿ.—ಪಾನನಿರೋಧದ ವಿಚಾರ ಇವೊತ್ತು ಚರ್ಚೆಗೆ ಇಲ್ಲ. ಟ್ರಾನ್ಸ್‌ಪೋರ್ಟ್ ವಿಚಾರವೂ ಇಲ್ಲ. ಇವೆರಡನ್ನೂ ಬಿಟ್ಟು ಮಾತನಾಡಿದರೆ ಸರಿಹೋಗುವುದಲ್ಲವೆ?

ಶ್ರೀ ಕೆ. ದೇವಯ್ಯ.—State Excise Duties ಗಾಗಿ ಸ್ವಲ್ಪ ಹಣವನ್ನು ಒದಗಿಸಿದ್ದಾರೆ. ಈ ವಿಚಾರವಲ್ಲಿ ಸ್ವಲ್ಪ ಮಟ್ಟಿಗಾದರೂ ಸಂಬಂಧವಿದ್ದುದರಿಂದ ಹೇಳುತ್ತಿದ್ದೇನೆ.

ನಮ್ಮ ದೇಶದ ಜನತೆಗೆ ಪ್ರತಿದಿನ ಅನುಭವಕ್ಕೆ ಬರುವ ವಿಷಯವಾದುದರಿಂದ ಆ ವಿಚಾರದಲ್ಲಿ ಮಾತನಾಡಲೇಬೇಕಾಗಿದೆ. ಈ ಹಣವನ್ನು ಒದಗಿಸಬೇಕಾಗಿಲ್ಲವೆಂದು ಕಾಣುತ್ತದೆ. ಸಿಬ್ಬಂದಿಯನ್ನು ಹೆಚ್ಚಿಗೆಮಾಡದೆ ಪಾನನಿರೋಧವನ್ನು ದೇಶಾದ್ಯಂತ ಜಾರಿಗೆ ತರುವುದಕ್ಕೆ ಎಷ್ಟು ಸಿಬ್ಬಂದಿ ಬೇಕೋ ಅಷ್ಟನ್ನು ಮಾತ್ರವಿಟ್ಟುಕೊಂಡು ಬೆಂಗಳೂರಿನಲ್ಲಿ ಪೂರ್ಣ ಪಾನನಿರೋಧವನ್ನು ತಂದು, ಕುಡಿಯುವುದಕ್ಕೆ ಅವಕಾಶವಿಲ್ಲದ ಹಾಗೆ ಮಾಡಿದರೆ ಬಹಳ ಉತ್ತಮವಾಗುತ್ತದೆ. ನನ್ನ ಹತ್ತಿರ ಸಹ ಅನೇಕ ಜನರು ಬಂದು ಶ್ರೀರಾಮಪುರದಲ್ಲಿ ಒಂದು ಬೀರ್ ಷಾಪ್ ಕೊಡಿಸಿ, ಅದಕ್ಕಾಗಿ ನಾಲ್ಕು ಸಾವಿರ ರೂಪಾಯಿ, ಆರು ಸಾವಿರ ರೂಪಾಯಿ ಕೊಡುತ್ತೇವೆಂದು ಹೇಳಿದರು.

ಅಧ್ಯಕ್ಷರು.—ನೀವೆಲ್ಲ ಅದನ್ನು ಮಾಡಬೇಡಿ.

ಶ್ರೀ ಕೆ. ದೇವಯ.—ನಮ್ಮಲ್ಲಿ ಅನೇಕರು ಬೇರೆಯವರ ಹೆಸರಿನಲ್ಲಿ ಬೀರ್ ಷಾಪ್‌ಗಳನ್ನು ನಡೆಸುತ್ತ ಇರುವುದರಿಂದ ಪಾನನಿರೋಧ ಜಾರಿಗೆ ಬರುವುದಕ್ಕೆ ಅಡ್ಡಿಯಾಗಿದೆ.

ಈ ಸಂದರ್ಭದಲ್ಲಿ ನಾನು ಹೆಚ್ಚು ಹೇಳಬಯಸುವುದಿಲ್ಲ. ಬಡ ಜನರ ನಮ್ಮ ದೇಶ ಉದ್ಧಾರವಾಗಬೇಕಾದರೆ, ನಮ್ಮ ಬಡಜನ ಚೆನ್ನಾಗಿರಬೇಕಾದರೆ, ಬೆಂಗಳೂರು ನಗರದಲ್ಲಿ ಹಾಗೂ ಇಡೀ ಮೈಸೂರು ದೇಶದಲ್ಲಿ ಪಾನನಿರೋಧವನ್ನು ಜಾರಿಗೆ ತರಬೇಕು ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಸಿ. ಜೆ. ಮುಕ್ಕಣ್ಣಪ್ಪ (ಸಿರಾ).—ಸ್ವಾಮಿ, ಮಾರಾಟತೆರಿಗೆ, ಕಾರ್ಪೊರೇಷನ್ ತೆರಿಗೆ ಹೊರತಾಗಿ ಆದಾಯದ ಮೇಲಿನ ತೆರಿಗೆಗಳು, ರಾಜ್ಯದ ಅಬಕಾರಿ ತೆರಿಗೆಗಳು, ಇತರ ತೆರಿಗೆಗಳು ಮತ್ತು ದುಸುಮುಗಳು ಈ ಬೇಡಿಕೆಗಳ ಬಗ್ಗೆ ಮಾತನಾಡುತ್ತೇನೆ.

ಸ್ವಾಮಿ, ನಮ್ಮ ರಾಜ್ಯದಲ್ಲಿ ಸುಖೀರಾಜ್ಯ ಸ್ಥಾಪನೆಯಾಗಬೇಕು, ಸುಖೀ ರಾಜ್ಯ ಸ್ಥಾಪನೆ ಗೋಸ್ಕರವಾಗಿ ಎಲ್ಲರೂ ತೆರಿಗೆಗಳನ್ನು ಕೊಡಬೇಕು, ಈ ತೆರಿಗೆ ಜನತೆಯ ಅಭಿವೃದ್ಧಿಗೋಸ್ಕರವಾಗಿ ಉಪಯೋಗವಾಗಬೇಕು ಎನ್ನುತಕ್ಕದ್ದನ್ನು 15 ವರ್ಷಗಳಿಂದ ಆಡಳಿತ ನಡೆಸತಕ್ಕ ನಮ್ಮ ಸ್ನೇಹಿತರು ಸಾರಿ ಸಾರಿ ಹೇಳಿಕೊಂಡು ಬಂದಿದ್ದಾರೆ. ಹೀಗೆ ಇವರು ಜನತೆಯ ಮೇಲೆ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ತೆರಿಗೆಗಳನ್ನು ಹಾಕಿ ಆ ತೆರಿಗೆಗಳಿಂದ ಬಂದಂಥ ಹಣದಿಂದ ಏನೇನು ಕಾರ್ಯಗಳನ್ನು ಮಾಡಿದ್ದಾರೆ? ತೆರಿಗೆಯನ್ನು ಹಾಕಿದ ಮೇಲೆ ಅದನ್ನು ವಸೂಲ್ಮಾಡತಕ್ಕ ದಾರಿಯಾವುದು, ಯಾವ ರೀತಿ ಮಾಡುತ್ತಾರೆ, ಅದರಿಂದ ಬಂದ ಹಣವನ್ನು ಹೇಗೆ ಖರ್ಚು ಮಾಡುಬೇಕು ಎನ್ನುವ ಮಾರ್ಗದಲ್ಲಿ ಹೋಗಿದ್ದಾರೆಯೇ? ಎಂದರೆ ಅವರು ಹೇಳುವುದನ್ನು ಹೇಳಿಕೊಂಡು ಹೋಗಲಿ, ನಾವು ಮಾಡುವುದನ್ನು ಮಾಡಿಕೊಂಡು ಹೋಗುತ್ತೇವೆಂದು ಮಾಡುತ್ತಿದ್ದಾರೆ. ಎಲ್ಲಿಯವರೆಗೆ ನೀವು ಮಾಡುವುದನ್ನು ನಾವು ಇಷ್ಟು ಕಟುವಾಗಿ ಟೀಕೆಮಾಡುತ್ತೇವೆಯೋ, ನಾವು ಹೇಳುವುದನ್ನು ಎಲ್ಲಿಯವರೆಗೆ ಇಷ್ಟು ಲಘುವಾಗಿ ನೋಡುತ್ತೀರೋ ಅಲ್ಲಿಯವರೆಗೆ ಈ ರಾಜ್ಯದಲ್ಲಿ ಒಂದು ಒಳ್ಳೆಯ ಸಮಾಜ ಸ್ಥಾಪನೆಯಾಗಬೇಕೆಂದು ನಾವೂ ನೀವೂ ಏನು ಯೋಚನೆ ಮಾಡಿದ್ದೇವೆಯೋ ಅದು ಬರೀ ಕನಸಾಗುತ್ತದೆ. ಅದಕ್ಕೋಸ್ಕರ ತಾವು ಇದನ್ನು ದೀರ್ಘವಾಗಿ ಯೋಚನೆ ಮಾಡಬೇಕು ಸರ್ಕಾರ ನಡೆಸತಕ್ಕವರು........

Mr. SPEAKER.—The House will now rise and meet after half an hour.

The House adjourned for recess at Three of the Clock and re-assembled at Thirty Minutes past Three of the Clock.

[MR. SPEAKER in the Chair]

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸ್ವಾಮಿ, ಸೇಲ್ಸ್ ಟ್ಯಾಕ್ಸ್ ವಸೂಲ, ಸೇಲ್ಸ್ ಟ್ಯಾಕ್ಸಿಗೆ ಇರತಕ್ಕ ಜುರಿಸ್‌ಡಿಕ್ಷನ್ನು, ಸೇಲ್ಸ್ ಟ್ಯಾಕ್ಸ್ ಆಫೀಸುಗಳಿಗೆ ಹಾಕಿರತಕ್ಕ ಏರಿಯಾ ಇದನ್ನೆಲ್ಲಾ ನೋಡಿದರೆ, ಈಗ ನಲವತ್ತು ಸಾವಿರ ರೂಪಾಯಿಗಳಿಗೆ ಮೇಲ್ಪಟ್ಟು ವ್ಯವಹಾರ ಇಟ್ಟುಕೊಂಡಿರುವವರು, ಸಿರಾ, ಮಧುಗಿರಿ, ಇಲ್ಲಿರುವವರು ಚಿತ್ರದುರ್ಗಕ್ಕೆ ಅವರ ಲೆಕ್ಕಪತ್ರಗಳನ್ನು ತೆಗೆದುಕೊಂಡು ಹೋಗಬೇಕಾಗಿದೆ. ತುಮಕೂರು ಕೇವಲ ಮೂವತ್ತು ಮೈಲಿಗಳಷ್ಟು ದೂರದಲ್ಲಿರುವುದರಿಂದ ಇಲ್ಲಿಗೆ ಈ ಭಾಗದ ಜನರು ಅವರ ಲೆಕ್ಕಪತ್ರಗಳನ್ನು ತಂದರೆ ಅನುಕೂಲವಾಗುವುದಿಲ್ಲವೇ ? ಇದನ್ನು ರೀಆರ್ಗನೈಜು ಮಾಡುವಾಗ ಸರಿಮಾಡದೇ ಇರುವುದರಿಂದ ನಮ್ಮ ಭಾಗದ ವರ್ತಕರು ಚಿತ್ರದುರ್ಗಜಿಲ್ಲೆಯಲ್ಲಿರುವ ಸೇಲ್ಸ್‌ಟ್ಯಾಕ್ಸ್ ಆಫೀಸರ ಬಳಿಗೆ, ನಲವತ್ತು ಸಾವಿರ ರೂಪಾಯಿಗಳಿಗಿಂತ ಮೇಲ್ಪಟ್ಟು ವ್ಯವಹಾರ ಮಾಡುವವರು ಇಷ್ಟು ದೂರ ಹೋಗಬೇಕೆಂದರೆ ಎಷ್ಟು ಕಷ್ಟವಾಗುತ್ತದೆ ಎನ್ನುವುದನ್ನು ತಾವು ಸ್ವಲ್ಪ ಯೋಚನೆ ಮಾಡಬೇಕು. ಅಲ್ಲದೇ ಸೇಲ್ಸ್‌ಟ್ಯಾಕ್ಸ್‌ನಿಂದ ಎಷ್ಟು ಹಣ ಬರುತ್ತೆ ಎಂದು ನಿರೀಕ್ಷೆ ಮಾಡುತ್ತಿದ್ದೀರೋ ಅದರಂತೆ ವಸೂಲು ಮಾಡುವ ಅಧಿಕಾರಿಗಳು ಈಗ ವಸೂಲಿ ಮಾಡುತ್ತಿರುವುದು ಕ್ರಮಬದ್ಧವಾಗಿಲ್ಲ. ಇದನ್ನು ಸ್ವಲ್ಪ tighten ಮಾಡಬೇಕು. ತಾವು ಹಿಂದೆ ಮುಖ್ಯಮಂತ್ರಿಗಳಾಗಿದ್ದಾಗ ಕೆಲವು ಸಮಯದಲ್ಲಿ ನೀವೇ ಈ ಸಭೆಯಲ್ಲಿ ಮಾರಾಟ ತೆರಿಗೆಯನ್ನು ಕೊಡುವುದರಲ್ಲಿ ಯಾರಾದರೂ ತಪ್ಪಿಸಿಕೊಳ್ಳುತ್ತಿದ್ದರೆ, ಮಾರಾಟ ತೆರಿಗೆ ಕೊಡದೇ ಹೋದರೆ, ಅವರಿಂದ ಸರಿಯಾಗಿ ವಸೂಲುಮಾಡಲು ತಕ್ಕಂತಹ ಇನ್ಸ್‌ಪೆಕ್ಟರುಗಳನ್ನು ನೇಮಿಸಿದ್ದೇವೆ, ಹಾಗೆ ಮಾಡುತ್ತೇವೆ ಇದಕ್ಕೆ ತಕ್ಕಂತೆ ಉಸ್ತುವಾರಿ ನೋಡಿಕೊಳ್ಳಲು ಅಧಿಕಾರಿಗಳಿಗೆ ಜವಾಬುದಾರಿ ಕೊಟ್ಟು ಈ ಸೇಲ್ಸ್ ಟ್ಯಾಕ್ಸನ್ನು ವಸೂಲುಮಾಡುತ್ತೇವೆಂದು ಹೇಳಿದ್ದಿರಿ. ಅದರಂತೆ ಯಾರು ಯಾರಿಂದ ಎಷ್ಟು ಹಣವನ್ನು ವಸೂಲಿ ಮಾಡಲು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ. ಒಬ್ಬೊಬ್ಬ ಅಧಿಕಾರಿಗಳಿಗೆ ಏನೇನು ಅಧಿಕಾರ ಕೊಟ್ಟಿದ್ದೇವೆ ಎನ್ನುವುದರ ವಿವರಗಳನ್ನು ಒಂದು ಸಾರಿ ಇಲ್ಲಿ ಹಿಂದೆ ಆರ್ಥಿಕ ಮಂತ್ರಿಗಳಾಗಿದ್ದ ಶ್ರೀಮಾನ್ ಟಿ. ಮರಿಯಪ್ಪನವರು ಅಪ್ಪಣೆ ಕೊಡಿಸಿದ್ದರು. ಅವರು ಧಾನ್ಯದ ಹರಕಲು ಚೀಲಕ್ಕೆ ಬಾಯಿಕಟ್ಟುವುದು ಕಷ್ಟ, ಹಾಗೆ ಈಗ ಸೋರಿಹೋಗುತ್ತಿರುವ ಹಣ, ಯಾವ ಯಾವ ಸೇಲ್ಸ್‌ಟ್ಯಾಕ್ಸ್ ಅಧಿಕಾರಿಗಳಿಗೆ ವಸೂಲಿ ಮಾಡಲು ಹೇಳಿದ್ದೀರಿ. ಅವರ ಕೆಲಸವೇನು ಅದನ್ನು ಎಷ್ಟುಮಟ್ಟಿಗೆ ಕಾರ್ಯಗತ ಮಾಡಬೇಕು ಎನ್ನುವುದಕ್ಕೆ ಸ್ವಲ್ಪ Decentralisation of Power ಮಾಡುವುದು ಒಳ್ಳೆಯದು. ಬೆಂಗಳೂರಿನಲ್ಲಿ ಒಂದು ಕಡೆ, ತಾವು ಉತ್ತರ ಕೊಡುವುದರಲ್ಲಿ ನಿಪುಣರು, ಮೂರ್ತಿ ಚಿಕ್ಕದಾಗಿದ್ದರೂ ಬಹಳ ಚೆನ್ನಾಗಿ ಉತ್ತರ ಕೊಡುತ್ತಾರೆ ಎಂದು.....

Mr. SPEAKER.—There should be no reference to the size of one Minister.

Sri C. J. MUCKANNAPPA.—It will not affect the decorum or vedeclency of any particular individual ಈ ಇಲಾಖೆಯಲ್ಲಿ ಏನು ನಡೆಯುತ್ತದೆ ಎಂದರೆ ಇಲ್ಲಿ ಸೇಲ್ಸ್ ಟ್ಯಾಕ್ಸ್ ಡೆಪ್ಯುಟಿ ಕಮಿಷನರ ಕೈಕೆಳಗೆ ಅಸಿಸ್ಟೆಂಟ್ ಕಮಿಷನರುಗಳಿರುತ್ತಾರೆ. ಇವರ ಕೈಕೆಳಗೆ ಇನ್ಸ್‌ಪೆಕ್ಟರವರು ಇರುತ್ತಾರೆ. ಇವರುಗಳು ಸಿಟಿಗಳಲ್ಲಿ ಇರುವ ಎರಡು ಭಾರಿ ಹೋಟಲುಗಳಲ್ಲೇ ವ್ಯವಹಾರ ಮಾಡುತ್ತಿರುತ್ತಾರೆ. ಯಾವ ರೀತಿ ವ್ಯವಹಾರ ಮಾಡಬೇಕು ಎನ್ನುವುದನ್ನೆಲ್ಲಾ ನೋಡಿಕೊಂಡು ಮಾಡುತ್ತಾರೆ. ಈ ಕಡೆ ಸರಕಾರ, ಸ್ವಲ್ಪ ನಮ್ಮ ಮುಖ್ಯಮಂತ್ರಿಗಳು ಗಮನ ಕೊಟ್ಟರೆ ಸರಕಾರಕ್ಕೆ ನ್ಯಾಯವಾಗಿ ಏನು ಬರಬೇಕೋ ಅದು ಬರುತ್ತಿಲ್ಲವೆನ್ನುವುದು ತಿಳಿಯುತ್ತದೆ. ಅದು ಯಾರಿಂದ ಸಂಪಾದನೆ ಮಾಡಬಹುದು. ಈ ಹಣ ವಸೂಲು ಮಾಡುವಾಗ ಯಾವ ರೀತಿ ಮಾಡುತ್ತಾರೆ, ಯಾವಕಿಂಡಿಯೊಳಗೆ ಸೋರಿಹೋಗುತ್ತದೆ. ಎನ್ನುವುದನ್ನು ನೋಡಿ ತಕ್ಕ ಕ್ರಮ ತೆಗೆದುಕೊಂಡರೆ ಸರಕಾರದ ಬೊಕ್ಕಸಕ್ಕೆ ಅನುಕೂಲವಾಗುತ್ತದೆ ಎಂದು ನಾನು ಇಲ್ಲಿ ಹೇಳುತ್ತೇನೆ.

ಇನ್ನೊಂದು ಏನಾಗಿದೆ ಎಂದರೆ ದೊಡ್ಡ ದೊಡ್ಡ ವರ್ತಕರುಗಳ ಬಳಿ ನಿಮ್ಮ ಅಧಿಕಾರಿಗಳು ವಸೂಲಿಗೆ ಹೋದಾಗ ಅವರು ಸರಕಾರ ನನಗೆ ಗೊತ್ತಿದೆ ಎಂದು ಹೇಳುತ್ತಾ ಒಂದು ಲೆಕ್ಕಪತ್ರಗಳನ್ನು ಒದಗಿಸದೆ ಇರತಕ್ಕ ಒಂದೆರಡು ಸಂದರ್ಭಗಳನ್ನು ನಾನು ನೋಡಿದ್ದೇನೆ. ನಾವು ಕಮರ್ಷಿಯಲ್ ಟ್ಯಾಕ್ಸ್ ಕಮಿಷನರವರ ಗಮನಕ್ಕೆ ತರುತ್ತೇವೆ, ಸರಕಾರದಲ್ಲಿ ಹೋಗಿ ನೋಡುತ್ತೇವೆ ಎಂದು ಹೇಳಿದ ಮೂರು ನಾಲ್ಕು ಸಂದರ್ಭಗಳನ್ನೂ ಕಂಡಿದ್ದೇನೆ. ಕಮರ್ಷಿಯಲ್ ಟ್ಯಾಕ್ಸ್ ಅಧಿಕಾರಿಗಳಿಗೆ ಏನು ಅಧಿಕಾರ ಕೊಟ್ಟಿದ್ದೀರೋ ಅದನ್ನು ನಿರ್ವಹಣೆ ಮಾಡುವಾಗ ನೀವು ಯಾರೂ interfere ಮಾಡಬಾರದು. ಯಾರಾದರೂ ಇರಲಿ ಅವರು ಬೇಕಾದರೆ ಅಪೀಲು ಹೋಗಿ ಸರಿಪಡಿಸಿಕೊಳ್ಳಲಿ. ಅವರು influences ತರುತ್ತೇವೆ, ನಮಗೆ ಸರಕಾರ ಗೊತ್ತಿದೆ, ಮಿನಿಸ್ಟರು ಗೊತ್ತಿದ್ದಾರೆ ಎಂದು ಹೋಗುವಂತೆ ಮಾಡಿದರೆ ನಿಮ್ಮ ಉದ್ದೇಶ ಸಾಧಿಸಿದಂತಾಗುವುದಿಲ್ಲ. ಶ್ರೀಮಂತರ ಬೊಕ್ಕಸಕ್ಕೆ ಕೆಲವು ಅಧಿಕಾರಿಗಳು ಕಾರಣರಾಗಿರುತ್ತಾರೆ. ಅದು ನಿಜವಾಗಿಯೂ ಮಹಾಪಾಪಕಾರವಾದ ಅಪರಾಧ. ತಾವು ಸ್ವಲ್ಪ ನಮ್ಮ ದೇಶದಹಣ ಸೋರಿಹೋಗದಂತೆ ವಸೂಲಿಯನ್ನು ಮಾಡಬೇಕೆಂದು ಹೇಳುತ್ತೇನೆ.

ಮೊನ್ನೆ ತಾನೇ ಸೇಲ್ಸ್‌ಟ್ಯಾಕ್ಸನ್ನು ಸ್ವಲ್ಪ ಹೆಚ್ಚು ಮಾಡಿದರು. ಈ ರೀತಿ ಹೆಚ್ಚಿಗೆ ಮಾಡಿದುದರಿಂದ ಎಷ್ಟು ಹಣ ವಸೂಲಾಯಿತು ? ಕೆಲವು ಪದಾರ್ಥಗಳಮೇಲೆ ಸೇಲ್ಸ್‌ಟ್ಯಾಕ್ಸು ಸ್ವಲ್ಪ ಜಾಸ್ತಿ ಮಾಡಲಾಗಿದೆ. ಹೋದ ಸಾರಿಗಿಂತ ಇದರಲ್ಲಿ ಎಷ್ಟು ಹಣ ಬಂದಿದೆ ? ಇದನ್ನು ಯಾವ ರೀತಿ ವಸೂಲು ಮಾಡಿದ್ದೀರಿ ಎನ್ನುವುದನ್ನು ತಾವು ಯೋಚನೆ ಮಾಡಬೇಕು. ಬೊಂಬಾಯಿ ಕಡೆಯಿಂದ ಎಷ್ಟೋ ಲಾರಿಗಳಲ್ಲಿ ಸಾಮಾನುಗಳನ್ನು ತರುತ್ತಿದ್ದಾರೆ. ಇದರ ಲೆಕ್ಕಪತ್ರಗಳು ಸರಿಯಾಗಿ ಬರುತ್ತಿವೆಯೇ? ಅದರಂತೆ ಸೇಲ್ಸ್ ಟ್ಯಾಕ್ಸು ವಸೂಲು ಮಾಡುತ್ತಿದ್ದಾರೆಯೇ? ಇವೆಲ್ಲಾ ನಿಮಗೆ ಎಲ್ಲಿ, ಹೇಗೆ ದೊರೆಯುತ್ತದೆ ? ಎನ್ನುವುದಕ್ಕೆ ಏನಾದರೂ ಬೆಂಗಳೂರಿನ ಟೋಲುಗೇಟುಗಳನ್ನು ಪರೀಕ್ಷೆ ಮಾಡಲು ಏನಾದರೂ ಏರ್ಪಾಡುಗಳನ್ನು ಮಾಡಿದ್ದೀರಾ, ಹಾಗೆ ಮಾಡಿಲ್ಲದಿದ್ದರೆ ಏತಕ್ಕೆ ಮಾಡಲಿಲ್ಲ? ಇದರಿಂದ ಸರಕಾರಕ್ಕೆ ಟ್ಯಾಕ್ಸು ಬರುವ ಹಾಗೆ ತಾವು ಸ್ವಲ್ಪ ಯೋಚನೆ ಮಾಡಬೇಕು. ಎಲ್ಲ ತೆರಿಗೆಗಳನ್ನು ಹಾಕಿದಂತೆ ಈಗ ಅಗ್ರಿಕಲ್‌ಚರಲ್ ಇನ್‌ಕಂಟ್ಯಾಕ್ಸನ್ನೂ ಹಾಕಿದ್ದಾರೆ. ಮಳೆರಾಯನ ಕರುಣೆಯಿಂದ ಮಳೆ ಬಂದರೆ ಏನೋ ಬೆಳೆಯುವವರಿಗೆ ಸೌಕರ್ಯವಾಗಿ ಬೆಳೆಯನ್ನು ಬೆಳೆಯಬಹುದು. ಇಲ್ಲದೇ ಹೋದರೆ ಇಲ್ಲ. ಈ ವರ್ಷ 400 ರೂಪಾಯಿಗಳಷ್ಟು ಅಗ್ರಿಕಲ್‌ಚರಲ್ ಇನ್‌ಕಂ ಟ್ಯಾಕ್ಸು ಇದ್ದರೆ, ಮುಂದಿನ ವರ್ಷದಲ್ಲಿ 200 ರೂ.ನಷ್ಟು ಜಾಸ್ತಿ ಕೊಡಬೇಕು? ಮಳೆಯಿಲ್ಲದೆ ಸರಿಯಾದ ಬೆಳೆಯಿಲ್ಲದೇ ಹೋದರೆ ಅವರುಹೇಗೆ ಕೊಡಬೇಕು. ಬೆಳೆಗಳು ಏನೂ ಆಗದೆ ಇರುವಾಗ ಈ ರೀತಿ ಅಗ್ರಿಕಲ್‌ಚರ್ ಇನ್‌ಕಂಟ್ಯಾಕ್ಸನ್ನು ವಸೂಲು ಮಾಡಬೇಡಿ. ನಾಲ್ಕು ಎಕರೆ ತಂಗಿನ ತೋಟಕ್ಕೆ 400 ಎಂದು ಈ ವರ್ಷ ಹಾಕಿದರೆ ಮುಂದಿನ ವರ್ಷ 800 ಅದಕ್ಕೆ ಮುಂದಿನ ವರ್ಷ 960 ಎಂದು ಹಾಕುತ್ತಾರೆ. ಇಲ್ಲಿ ಬೆಳೆಯಾಗಿ ಫಸಲಾಗಿದೆಯೇ ಎನ್ನುವುದೊಂದನ್ನು ನೋಡಿದೆ ಶೇಕದಾರರು, ಶ್ಯಾನುಬೋಗರು ಕೊಡುವ ರಿಪೋರ್ಟಿನ ಮೇಲೆ ಹಾಕದೆ ಸ್ಥಳ ಅಜಮಾಯಿಸಿ ಮಾಡದೆ, ಈ ರೀತಿ ರೈತರಿಗೆ ತೊಂದರೆ ಮಾಡತಕ್ಕದ್ದು ಸರಿಯಲ್ಲ. ಇದಕ್ಕೋಸ್ಕರ ತಾವು ಈ ವಿಚಾರದಲ್ಲಿ ತಮ್ಮ ಅಧಿಕಾರಿಗಳಿಗೆ, ಖಚಿತವಾಗಿರಬೇಕೆಂದು, ಸರಳವಾಗಿರಬೇಕು ಮತ್ತು ಯಾವುದೇ ರೀತಿಯಲ್ಲಿ ರೈತರಿಗೆ ಬಾಧೆ ಇಲ್ಲದ ರೀತಿಯಲ್ಲಿ ವಸೂಲುಮಾಡಬೇಕೆಂದು ತಿಳಿಸಬೇಕೆಂದು ನಾನು ಸರಕಾರಕ್ಕೆ ಹೇಳುತ್ತೇನೆ

ಈ ಸ್ಟೇಟ್ ಎಕ್ಸೈಜ್ ಬಾಬಿನ ಬಗ್ಗೆ ನಾವು ಹೇಳುತ್ತಲೇ ಇದ್ದೇವೆ. ನೀವು ಕೇಳುತ್ತಲೇ ಇದ್ದೀರಿ. ಹೆಂಡದ ಬಾಬಿನಲ್ಲಿ ಸರಕಾರಕ್ಕೆ ಬರಬೇಕಾದ ಆದಾಯ ಹಾಳಾಗುತ್ತಿದೆ. ಒಂದು ಕಡೆ ಹೆಂಡ ಕುಡಿಯುವುದು ತಪ್ಪು ಎಂದು ಪ್ರಚಾರ ಮಾಡುತ್ತೀರಿ. ಇನ್ನೊಂದು ಕಡೆ ಬೆಂಗಳೂರಿನಂಥ ದೊಡ್ಡ ಪಟ್ಟಣದಲ್ಲಿ ಹೆಂಡದ ಅಂಗಡಿ ಇಡುವುದಕ್ಕೆ ಲೈಸನ್ಸ್ ಕೊಡುತ್ತೀರಿ. ಮಹಾತ್ಮಾ ಗಾಂಧಿಯವರ ಹೆಸರು ಹೇಳತಕ್ಕಂಥ ನೀವು, ಅವರ ಆಶೀರ್ವಾದ ಪಡೆದು ಇಂದು ರಾಜ್ಯಭಾರ ಮಾಡುವ ನೀವು ಈ ಬಾಬಿನಿಂದ ಹಣ ದೊರೆಯುವುದು ಬೇಡ ಅಂದರೆ ದೇಶದ ಕಲ್ಯಾಣವಾಗುವುದು ಬೇಡವೆ ? ಹೆಂಡ ಕುಡಿಯುವುದು ತಪ್ಪು, ಎಂದು ಹೇಳಿ ಹೆಂಡದ ಅಂಗಡಿ ಮುಂದೆ ಪಿಕೇಟಿಂಗ್ ಮಾಡಿ ಕಲ್ಲು ಹೊಡೆಸಿಕೊಂಡವರಲ್ಲಿ ನಾನೊಬ್ಬನು. ಪ್ರೊಹಿಬಿಷನ್ ಸ್ಕ್ರಾಪ್ ಮಾಡಿ ಎಂದು ಹೇಳತಕ್ಕವನು ನಾನಲ್ಲ. ಹೆಂಡ ಕುಡಿಯಬಾರದು, ಹೆಂಡದಿಂದ ದೇಶದ ಖಜಾನೆ ತುಂಬಬಾರದು ಎಂದು ಹೇಳತಕ್ಕಂಥವನು. ಸರಕಾರ ತಪ್ಪು ಹೆಜ್ಜೆ ಇಡುತ್ತಿದೆ. ಎಲ್ಲ ಜಿಲ್ಲೆಗಳಲ್ಲಿ ಪಾನನಿರೋಧ ಜಾರಿಗೆ ತರುತ್ತೇವೆಂದು ಹೇಳಿದಿರಿ. ಆದರೆ ಈಗಲೂ ಕೆಲವು ಕಡೆ ಹೆಂಡದ ಅಂಗಡಿಗಳನ್ನು ಇಟ್ಟಿದ್ದೀರಿ. ಈ ತಪ್ಪು ನೀತಿಯಿಂದ ನಿಜವಾಗಿಯೂ ನಿಮಗೆ ಒಳ್ಳೆಯದಾಗುವದಿಲ್ಲ. ನಮ್ಮ ದೇಶದಲ್ಲಿ ಯಾರೂ ಮದ್ಯಪಾನ ಮಾಡಬಾರದು. ದೇಶಾದ್ಯಂತ ಇದು ಅನ್ವಯಿಸುವ ಹಾಗೆ ಧೈರ್ಯದಿಂದ ಹೆಜ್ಜೆ ಇಡಬೇಕು. ಗಾಂಧೀಜಿಯವರ ತತ್ವವನ್ನು ಅನುಸರಿಸುತ್ತೀರಿ. ಆದರೆ ನಿಮ್ಮ ನೀತಿ ಅಕ್ಕಿಯಮೇಲೆ ಆಶೆ ನೆಂಟರಮೇಲೆ ಪ್ರೀತಿ ಎನ್ನುವ ಹಾಗೆ ಆಗಿದೆ. ಇದು ಸರಿಯಲ್ಲ, ಮಹಾತ್ಮಾ ಗಾಂಧಿಯವರು

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ಹೇಳಿದ ಹಾಗೆ ಸುಖೀರಾಜ್ಯ ಸ್ಥಾಪನೆ ಮಾಡುವುದಕ್ಕೆ ರಾಮರಾಜ್ಯ ಸ್ಥಾಪನೆ ಮಾಡುವುದಕ್ಕೆ ಪ್ರಯತ್ನಪಡುತ್ತಿದ್ದೀರಿ. ಆದ್ದರಿಂದ ಶ್ರೀಮಂತರು ದುಡ್ಡು ಸಂಪಾದನೆ ಮಾಡುವುದು ಒಳ್ಳೆಯದಲ್ಲ. ಸರಕಾರ ಇದನ್ನು ಯೋಚನೆ ಮಾಡುವುದು ಅಗತ್ಯ ಎಂದು ಹೇಳುತ್ತೇನೆ.

ಸ್ವಾಮಿ, ಈ ಎಕ್ಸೈಜ್ ಇಲಾಖೆಯಲ್ಲಿ ಇನ್ನೊಂದು ವಿಷಯ ಇದೆ. ಮಾರಾಟದಿಂದ ಬರತಕ್ಕ ಹಣ ಸರಿಯಾಗಿ ವಸೂಲ್ಮಾಡುತ್ತಿದ್ದೀರಾ? ಮೊದಲು ಚಿಕ್ಕ ಚಿಕ್ಕ ಪ್ರದೇಶಗಳ ಹರಾಜು ಮಾಡುತ್ತಿದ್ದರು. ಈಗ ಒಂದು ಜಿಲ್ಲೆಯ ಪ್ರದೇಶ ಹರಾಜು ಮಾಡಿದರೆ ಶ್ರೀಮಂತರಲ್ಲದವರು ಅಷ್ಟು ಹಣ ತಂದು ಬೀಟ್ ಮಾಡುವುದು ಸಾಧ್ಯವಿದೆಯೇ? ಶ್ರೀಮಂತರು ಲಕ್ಷಾಂತರ ರೂಪಾಯಿ ತೆಗೆದುಕೊಂಡು ಹೋಗಿ ಹರಾಜು ಹಾಕಿದರೆ ತೆಗೆದುಕೊಂಡುಬಿಡುತ್ತಾರೆ. ಎಲ್ಲವೂ ಶ್ರೀಮಂತರ ಕಿಸೆಗೆ ಬೀಳುತ್ತಿದೆ. ಇದು ಸರಿಯಲ್ಲ. ಅಂಗಡಿಗಳ ಮಾರಾಟದ ನೀತಿ ಸಮಂಜಸವಾಗಿಲ್ಲ. ಇದನ್ನು ಪುನರಾಲೋಚನೆ ಮಾಡಬೇಕು ಎಂದು ತಿಳಿಸುತ್ತೇನೆ. ಬ್ರೀವರೀಜ್‌ದಿಂದ ಬರತಕ್ಕ ಲಕ್ಷಾಂತರ ರೂಪಾಯಿ ಮೋಸಕಾಗಿದೆ. ಎಕ್ಸೈಜ್ ಕಂಟ್ರಾಕ್ಟರರಿಂದ ಒಂದು ಕೋಟಿ ರೂಪಾಯಿ ಬರಬೇಕಾಗಿದೆ ಎಂದು ಕೇಳಿದ್ದೇನೆ. ಸರಕಾರದ ಖಜಾನೆಗೆ ಬರಬೇಕಾದ ಹಣವನ್ನು ಧೈರ್ಯದಿಂದ ವಸೂಲ್ಮಾಡಬೇಕು. ಯಾವ ವಶೀಲಿಬಾಜಿಗೆ ಬಲಿ ಬೀಳಬಾರದು. ತೆರಿಗೆಯಿಂದ ಬರತಕ್ಕ ಹಣವನ್ನು ಜನತೆಯ ಕಲ್ಯಾಣಕ್ಕೆ ಉಪಯೋಗಿಸಬೇಕು, ಹಣದ ದುರ್ವಿನಿಯೋಗವಾಗಬಾರದು ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಬಿ. ಮರುಳಪ್ಪ (ಕಡೂರು).—ಸ್ವಾಮಿ, ಇವತ್ತಿನ ದಿವಸ ನಾನು ಮಾತನಾಡಬಾರದು ಎಂದು ಅಂದುಕೊಂಡಿದ್ದೆ. ಆದರೆ ಪ್ರೊಹಿಬಿಷನ್‌ಮೇಲೆ ಬಹಳ ಜನ ಮಾತನಾಡಿದ್ದಾರೆ. ನಾನು ಕೆಲವು ಅಂಶಗಳ ಬಗ್ಗೆ ಮಾತನಾಡಬೇಕೆಂದಿದ್ದೇನೆ. ಪಾನನಿರೋಧ ಯಶಸ್ವಿಯಾಗಿಲ್ಲ, ಪಾನನಿರೋಧ ಜಾರಿ ಮಾಡುವುದು ಸರಿಯಲ್ಲ, ಅದನ್ನು ಸ್ಕ್ರಾಪ್ ಮಾಡಬೇಕು ಎಂದು ಕೆಲವು ಸ್ನೇಹಿತರು ಹೇಳಿದರು. ಆದರೆ ಕೆಲವು ಸ್ನೇಹಿತರು ಪಾನನಿರೋಧ ಯಶಸ್ವಿಯಾಗಿದೆ, ಅದನ್ನು ಕಟ್ಟುನಿಟ್ಟಾಗಿ ಆಚರಣೆ ತರಬೇಕು ಎಂದು. ಇರತಕ್ಕಂಥ ಕಾಲದಲ್ಲಿ ತೆಗೆದುಹಾಕಬೇಕು ಎಂದು ಹೇಳುವುದು ಸರಿಯಲ್ಲ, ಎಂದು ಹೇಳಿದರು. ಆದರೆ ನಮ್ಮ ದೇಶದಲ್ಲಿ ಪಾನನಿರೋಧ ಜಯಪ್ರದವಾಗಿಲ್ಲ ಎಂಬ ವಿಷಯ ಪ್ರತಿಯೊಬ್ಬರೂ ಮನಗಂಡಿದ್ದಾರೆ; ಆಳುವ ಪಕ್ಷಕ್ಕೂ ಗೊತ್ತಿದೆ, ವಿರೋಧ ಪಕ್ಷದವರಿಗೂ ಗೊತ್ತಿದೆ. ಇದು ದೇಶದ ಎಲ್ಲ ಜನತೆಗೆ ಗೊತ್ತಿದೆ. ಜನರ ಹಿತದೃಷ್ಟಿಯಿಂದ ಪಾನನಿರೋಧ ಜಾರಿಗೆ ತರಲು ಮಹಾತ್ಮಾ ಗಾಂಧಿಯವರು ಹೇಳಿದರು. ಆದರೆ ಕುಡಿಯುವುದು ಮನೆಮನೆಯಲ್ಲಿ ವ್ಯವಸ್ಥೆಯಾಗಬೇಕೆಂಬ ಉದ್ದೇಶವಿರಲಿಲ್ಲ. ಇದೊಂದು ಕೆಟ್ಟ ಪದ್ಧತಿ. ಈ ಕೆಟ್ಟ ಪದ್ಧತಿಯಿಂದ ಸರಕಾರದ ಖಜಾನೆಗೆ ದುಡ್ಡು ಬರುವುದು ಬೇಡ. ಹಣ ಬರುವುದು ಲುಕ್ಸಾನಾದರೂ ಅಡ್ಡಿಯಿಲ್ಲ ಪಾನನಿರೋಧ ಜಾರಿಗೆ ತರಬೇಕೆಂದು ಮಹಾತ್ಮರು ಮಹಾತ್ಮರ ಉನ್ನತ ದೃಷ್ಟಿಯಿಂದ ಯೋಚನೆ ಮಾಡಿ ಹೇಳಿದರು. ಆದರೆ ಈಗ ಮನೆಮನೆಯಲ್ಲಿ ಡಿಸ್ಟಿಲೇಷನ್ ಪ್ರಾರಂಭವಾಗಿದೆ. ಇದರಿಂದ ಜನರ ಕಲ್ಯಾಣವಾಗುತ್ತದೆಯೆ? ಒಳ್ಳೆಯದು ಆಗುತ್ತದೆಯೆ? ಇದರಿಂದ ದೇಶದ ಜನ ಮುಂದುವರಿಯುತ್ತಾರೆಯೇ? ಕೆಲವು ಸ್ನೇಹಿತರು ಹೇಳಿದ ಹಾಗೆ ಮಹಾತ್ಮಾ ಗಾಂಧಿಯವರು ಇಂದು ಬದುಕಿದ್ದರೆ ಪ್ರೊಹಿಬಿಷನ್ ಮೊದಲು ತೆಗೆದುಹಾಕಿ ಎಂದು ಸತ್ಯಾಗ್ರಹ ಮಾಡುತ್ತಿದ್ದರು. ಈ ಪಾನನಿರೋಧದಿಂದ ಜನರ ಕಲ್ಯಾಣವಾಗುವದಿಲ್ಲ. ಎಂದು ಮನಗಾಣುತ್ತಿದ್ದರು.

ಸ್ವಾಮಿ, ಹಿಂದುಳಿದ ಜನಾಂಗಕ್ಕೆ ಪ್ರೊಹಿಬಿಷನ್ ಒಳ್ಳೆಯದನ್ನು ಮಾಡಿದೆ. ಅವರಿಗೆ ಬಹಳ ಕಲ್ಯಾಣಮಾಡಿದೆ. ಪುನಃ ಕುಡಿಯುವುದನ್ನು ಜಾರಿಗೆ ತಂದರೆ ಹಿಂದುಳಿದ ಜನಾಂಗಕ್ಕೆ ಬಹಳ ಅನ್ಯಾಯ ಮಾಡಿದಂತಾಗುತ್ತದೆಂದು ವಾದಿಸುತ್ತಾರೆ ಬಹಳ ಸಂತೋಷ. ಆದರೆ ಪ್ರೊಹಿಬಿಷನ್‌ನಿಂದ ಹಿಂದುಳಿದ ಜನಾಂಗಕ್ಕೆ ನಿಜವಾಗಿಯೂ ಕಲ್ಯಾಣವಾಗಿಲ್ಲ. ನಿಜವಾಗಿಯೂ ಒಳ್ಳೆಯದು ಆಗಿಲ್ಲ.

ಕೆಲವರು ಯಾವ ದೃಷ್ಟಿಯಿಂದ ವಾದಿಸುತ್ತಾರೆಯೋ ನನಗೆ ಅರ್ಥವಾಗಿಲ್ಲ. ನಮ್ಮ ತಾಲ್ಲೂಕಿನಲ್ಲಿ ಮತ್ತು ನಮ್ಮ ಜಿಲ್ಲಾದಲ್ಲಿ ಹಿಂದುಳಿದ ಜನಾಂಗವನ್ನು ಮೊದಲಿನಿಂದಲೂ ನೋಡಿದ್ದೇನೆ, ಈವಾಗಲೂ ನೋಡುತ್ತಾ ಇದ್ದೇನೆ, ಅವರಿಗೆ ಯಾವ ತರಹ ಒಳ್ಳೆಯದೂ ಆಗಲಿ, ಕಲ್ಯಾಣವಾಗಲಿ, ಅಭಿವೃದ್ಧಿಯಾಗಲಿ ಆಗಿರುವುದು ಕಂಡಿಲ್ಲ. ಒಂದೇ ಒಂದು ಆಗಿದೆ! ಹಿಂದುಳಿದ ಜನಾಂಗ ಪ್ರೊಹಿಬಿಷನ್ ಬರುವುದಕ್ಕಿಂತ ಮೊದಲು ಒಂದು ಸುವ್ಯವಸ್ಥಿತವಾದ ಜಾಗಕ್ಕೆ ಹೋಗಿ ಪಾನ ಮಾಡುತ್ತಾ ಇದ್ದರು. ಈವಾಗ ಏನು ಕಲ್ಯಾಣವಾಗಿದೆಯೆಂದರೆ ಅವರು ಮನಮನೆಯಲ್ಲಿಯೇ ವ್ಯವಸ್ಥೆ ಮಾಡಿಕೊಂಡು, ಮಾಡದೆ ಇರತಕ್ಕಂಥವರನ್ನೂ ತಮ್ಮ ಮನೆಗೆ ಆಹ್ವಾನಿಸಿ ಅವರಿಗೂ ಪಾನಮಾಡಿಸುತ್ತಾರೆ, ಇಷ್ಟು ಕಲ್ಯಾಣವಾಗಿರಬಹುದು. ಈ ಪಾನ ನಿರೋಧವನ್ನು ಮತ್ತೊಂದು

ದೃಷ್ಟಿಯಿಂದ ಯೋಚಿಸಬೇಕು ಇದು ಒಂದು ಪಾಲಿಸಿ ಅಥವಾ ಯಾರೋ ಹೇಳಿದರು ಅಂತ ನಾವು ಮಾಡಬೇಕಾಗಿದೆ. ಇದನ್ನು ಮುಂದುವರಿಸುವುದರಿಂದ ದೇಶಕ್ಕೆ ಏನೇನು ಅನ್ಯಾಯವಾಗುತ್ತಿದೆ ಅನ್ನುವುದನ್ನು ನೋಡಬೇಕು. ಮೊದಲನೆಯದಾಗಿ ದೇಶದಲ್ಲಿ ಲಾ ಲೆಸ್‌ನೆಸ್ ಬರುತ್ತಿದೆ. ನಮ್ಮ ಕಾನೂನಿಗೆ ಯಾರೂ ಬೆಲೆ ಕೊಡುವುದಿಲ್ಲ. ಕಳ್ಳಭಟ್ಟಿ ಇಳಿಸುವವರು ಏನು ಕೇಳುತ್ತಾರೆಂದರೆ, ನಾವು ತಯಾರು ಮಾಡುವುದರಿಂದ ಸಾವಿರಾರು ರೂಪಾಯಿ ಉತ್ಪತ್ತಿ ಬರುತ್ತದೆ, ಕೇಸು ಹಾಕಿದರೆ ಕೋರ್ಟಿನಲ್ಲಿ 20 ರೂಪಾಯಿ ಜುಲ್ಮಾನೆ ಹಾಕುತ್ತಾರೆ, ಇದರಲ್ಲಿ ಲಾಭವೋ ಲುಕ್ಸಾನೋ! ಪ್ರೊಹಿಬಿಷನ್ ಕೇಸುಗಳನ್ನು ಯೋಚನೆ ಮಾಡಿನೋಡಿ, ದಿನದಿನಕ್ಕೆ ಕಾನೂನಿಗೆ ಗೌರವ ಕೊಡುವುದು ಕಡಮೆಯಾಗುತ್ತಾ ಬಂದಿದೆ. ಕಾನೂನಿಗೆ ಒಂದು ಕಟ್ಟಳೆಗೆ ದೇಶದಲ್ಲಿ ಮಾನ್ಯತೆ ಇದೆಯೇ ಎಂದು ಯೋಚಿಸಬೇಕು. ಪ್ರತಿದಿನವೂ, ಪ್ರತಿ ತಿಂಗಳೂ ಕೂಡ ಈ ಕಟ್ಟಳೆ ಕೇಸುಗಳು ಜಾಸ್ತಿಯಾಗುತ್ತಾ ಇವೆ, ದೇಶದಲ್ಲಿ ಲಾ ಲೆಸ್‌ನೆಸ್ ಜಾಸ್ತಿಯಾಗುತ್ತಾ ಇದೆ. ಜನಗಳ ಈ ದುರಭ್ಯಾಸದಿಂದ, ಕೆಟ್ಟ ಪ್ರಾಕ್ಟೀಸಿನಿಂದ ಮುಂದಿನ ಪೀಳಿಗೆಯನ್ನು ಆರೋಗ್ಯವಂತರನ್ನಾಗಿ ಮಾಡುವುದಕ್ಕಾಗುವುದಿಲ್ಲ. ಮುಂದಿನ ಪೀಳಿಗೆಗೆ ಸುಖವನ್ನು ಯೋಚನೆ ಮಾಡಬೇಕಾಗಿದೆ. ಅದನ್ನು ಯೋಚಿಸದೆ ಈ ಪಾನನಿರೋಧವನ್ನು ಪ್ರೆಸ್ ಮಾಡುವುದರಲ್ಲಿ ಏನು ಅರ್ಥ? ಪಾನನಿರೋಧದ ಅಂಕಿ ಅಂಶಗಳನ್ನು ವಿಮರ್ಶಿಸಿದರೆ ಈ ವರ್ಷ 4 ಸಾವಿರ ಕೇಸು, ಮುಂದಿನ ವರ್ಷ 6 ಸಾವಿರ ಕೇಸು, 8 ಸಾವಿರ ಕೇಸು ಹೀಗೆ ಆಗಿ ಕುಡಿಯುವವರ ಸಂಖ್ಯೆ ಜಾಸ್ತಿಯಾಗಿದೆ, ಫೈನು ಅಮೌಂಟು ಅಷ್ಟೇ 2 ಲಕ್ಷ ಈ ವರ್ಷ ಇದ್ದರೆ, 8-10 ಲಕ್ಷಕ್ಕೆ ಏರಿದೆ. ಇದು ದೇಶದಲ್ಲಿ ಅಕ್ರಮ ಜಾಸ್ತಿಯಾಗುತ್ತಿದೆಯೆಂದು ತೋರಿಸುವುದಿಲ್ಲವೇ? ಇಂಥ ಅಕ್ರಮಕ್ಕೆ ಬೆಂಬಲ ಕೊಡುವುದರಿಂದ, ಅಕ್ರಮವಾಗಿ ನಡೆಯುವುದನ್ನು ಜಾಸ್ತಿ ಮಾಡುವುದರಿಂದ, ದೇಶದ ಕಲ್ಯಾಣವಾಗಿ ಮುಂದಿನ ಪೀಳಿಗೆಗೆ ಒಳ್ಳೆಯದಾಗುತ್ತದೆಯೇ ಅನ್ನುವುದನ್ನು ಆಳುವ ಪಕ್ಷದವರು ಮತ್ತು ಸರ್ಕಾರ ನಿಧಾನವಾಗಿ ಆಲೋಚನೆ ಮಾಡಬೇಕು. ಆರೋಗ್ಯ ದೃಷ್ಟಿಯಿಂದಲೂ ಇದರಿಂದ ಬಹಳ ಅನರ್ಥಕಾರಿಯಾಗಿದೆ ಎಂದು ಪ್ರವೀಣರು ಹೇಳುತ್ತಾರೆ. ಒಂದು ಕಡೆ ದೇಶದಲ್ಲಿ ಕಟ್ಟಳೆಯನ್ನು ಕಾಪಾಡುವುದಕ್ಕಾಗುತ್ತಿಲ್ಲ. ಇನ್ನೊಂದು ಕಡೆ ದೇಶದ ಆರೋಗ್ಯ ಹಾಳಾಗುತ್ತಿದೆ. ನೀತಿಭ್ರಷ್ಟರಾದ ಕ್ಷೀಣಿಸಿದ ಪೀಳಿಗೆಯಲ್ಲಿ ಹುಟ್ಟಿದರೆ ದೇಶ ಎಂತಹ ಅಭಿವೃದ್ಧಿಗೆ ಬಂದೀತು? ಏನೇ ಆಗಿರಲಿ ಪುನಃ ಪಾನನಿರೋಧದ ಸಾಧಕ ಬಾಧಕಗಳನ್ನು, ವಿವೇಚಿಸಲು ಉತ್ಕೃಷ್ಟರೂ ಬುದ್ಧಿವಂತರೂ ಆದ ಜನರ ಒಂದು ಕಮಿಟಿಯನ್ನು ಮಾಡಿ, ಅವರು ಇದರ ಗುಣದೋಷಗಳನ್ನು ಪುನಃ ಯೋಚನೆ ಮಾಡಿ ಬೆಲೆ ಕಟ್ಟಲಿ. ಅವರು ಇದರಿಂದ ಉಪಯೋಗವಿಲ್ಲ, ಬೇಡವೆಂದಾದರೂ ನಿಶ್ಚಯಿಸಲಿ. ಇಲ್ಲ ಇದರಿಂದ ದೇಶಕ್ಕೆ ಒಳ್ಳೆಯದಾಗುತ್ತದೆ, ದೇಶದ ಕಲ್ಯಾಣವಾಗುತ್ತದೆ ಎಂದು ಹೇಳಿದರೆ ಮುಂದುವರಿಸಿ. ಹಿಂದಿನ ಕಥೆ ಬೇಡ. ಪಾನನಿರೋಧದಿಂದ ಅನೀತಿ, ಅಕ್ರಮ ಹೆಚ್ಚಿ, ಅನ್ಯಾಯ ಅನರ್ಥವಾಗುತ್ತಿದೆ ಎಂದು ಸರ್ಕಾರದ ಗಮನಕ್ಕೆ ಆಳುವ ಪಕ್ಷದ ಗಮನಕ್ಕೆ ಬಂದರೆ, ಅವರ ರೀತಿ ನೀತಿ ಬದಲಾಯಿಸಿಕೊಳ್ಳುವುದಕ್ಕೆ ಪ್ರಯತ್ನ ಪಡುವುದು ಒಳ್ಳೆಯದು ಎಂದು ಹೇಳಬಯಸುತ್ತೇನೆ.

ಸ್ವಾಮಿ, ಈ sales tax ಮತ್ತು agricultural tax ವಿಚಾರ ಹೇಳಬೇಕಾದರೆ, ನಾನು sales tax ನ್ನೂ ಕೊಡುತ್ತಾ ಇಲ್ಲ, agricultural tax ನ್ನೂ ಕೊಡುತ್ತಾ ಇಲ್ಲ. ಆದ್ದರಿಂದ ನನಗೆ ಅನುಭವ ಕಡಿಮೆ. ಆದರೆ ನನ್ನ ಸ್ನೇಹಿತರಿಗೆ ಮತ್ತು ಬೇರೆಯವರಿಗೆ ಏನೇನು ಅನುಭವ ಆಗಿದೆಯೋ, ಅವರ ಅನುಭವ ನನಗೆ ಹೇಳಿದ್ದನ್ನು ಕೇಳಿ ಅದರಮೇಲೆ ಒಂದೆರಡು ವಿಷಯಗಳನ್ನು ಹೇಳ ಬಯಸುತ್ತೇನೆ. ಈ ಸೇಲ್ಸ್ ಟ್ಯಾಕ್ಸನ್ನು ಈಚೆಗೆ, ಪ್ರೊಹಿಬಿಷನ್ ಇಂಟ್ರಡ್ಯೂಸ್ ಮಾಡುವುದರಿಂದ ನಮಗೆ ಎಕ್ಸ್‌ಟ್ರಾ ದುಡ್ಡು ಬೇಕಾಗುತ್ತದೆಂದು ಹಾಕಿದರು ಎಂದು ಮೊದಲು ಮಾತನಾಡಿದವರು ಹೇಳಿದರು. ಅದು ಏನೇ ಇರಲಿ, ಸರ್ಕಾರಕ್ಕೆ ಹೆಚ್ಚು ದುಡ್ಡು ಬೇಕು, ಹೆಚ್ಚಿಗೆ ಯೋಜನೆಗಳಿಗಾಗಿ ಬೇಕು, ಅವರು ಒಳ್ಳೆಯ ಕೆಲಸ ಮಾಡಬೇಕು, ಒಪ್ಪುತ್ತೇನೆ. ಈ ಸೇಲ್ಸ್ ಟ್ಯಾಕ್ಸಿನಲ್ಲಿ ವೈಶಿಷ್ಟ್ಯವೇನೆಂದರೆ ನೀವು ಹಾಕಿರತಕ್ಕಂಥ ಎಲ್ಲಾ ಇಲಾಖೆಗಳ ಸುಂಕದಲ್ಲಿ, ಸೇಲ್ಸ್ ಟಾಕ್ಸ್ ಇಲಾಖೆ 80-90 ಪರ್ಸೆಂಟು ವಸೂಲು ಮಾಡುತ್ತಿದೆ, ಕೆಲವು ಕಡೆ cent per cent ಕೂಡ ವಸೂಲಾಗಿದೆ ಎಂದು ಹೇಳುತ್ತಾರೆ, ಇದು ನಿಜವೋ ಸುಳ್ಳೋ ಗೊತ್ತಿಲ್ಲ. ಇದಕ್ಕೆ ಇಲಾಖೆಯನ್ನು ಅಭಿನಂದಿಸಬೇಕಾಗಿದೆ. ಆದರೆ ಅಭಿನಂದನೆ ಮಾಡುವ ಸಂಧರ್ಭದಲ್ಲಿ, ಇಷ್ಟು ದುಡ್ಡನ್ನು ವಸೂಲು ಮಾಡುವಾಗ ಬೇರೆ ಇಲಾಖೆಗಳಲ್ಲಿ ಖರ್ಚಾಗತಕ್ಕಂಥ ದುಡ್ಡಿಗಿಂತ ಕಮ್ಮಿ ವೆಚ್ಚದಲ್ಲಿ, ಹೆಚ್ಚಾದ ದುಡ್ಡನ್ನು ವಸೂಲು ಮಾಡುತ್ತಾ ಇದ್ದರೆ ಬಹಳ ಒಳ್ಳೆಯದು. ಆದರೆ ವಸೂಲಿ ಕ್ರಮದಲ್ಲಿ ಅನ್ಯಾಯ ಅನೀತಿ ಇದ್ದು ಹಣ ದುರುಪಯೋಗವಾಗುತ್ತಿದೆಯೇ ನೋಡಬೇಕು. ಸಕ್‌ಸಸ್‌ಫುಲ್ಲಾಗಿ ನಿಮ್ಮ ಹಣ ವಸೂಲಾಗಬಹುದು. ಹೆಚ್ಚಾದ ಸುಂಕ ನಿಮಗೆ ಬರಬಹುದು. ಆದರೆ ಈ ಇಲಾಖೆಯಲ್ಲಿ ಲಂಚಾವತಾರ ಬಹಳ ಹೆಚ್ಚಾಗಿದೆ. ಈ ಸಂಧರ್ಭದಲ್ಲಿ ಒಂದು ವಿಷಯವನ್ನು ಹೇಳಬಯಸುತ್ತೇನೆ. ಈ ಇಲಾಖೆಯ ಮುಖ್ಯಾಧಿಕಾರಿಗಳು ನಿಜವಾಗಿಯೂ ಬಹಳ ಸತ್ಯವಂತರು ಬಹು ವರ್ಷಗಳಿಂದ

(ಶ್ರೀ ಜಿ. ಮರುಳಪ್ಪ)

ಅವರನ್ನು ನಾನು ನೋಡಿದ್ದೇವೆ, ದಕ್ಷರೂ ಹೌದು. ಆದರೆ ಅವರೊಬ್ಬರೇ ಸರ್ಕಾರಕ್ಕೆ ಆಗುತ್ತಿರುವ ನಷ್ಟವನ್ನು ತಪ್ಪಿಸುವುದಕ್ಕೆ ಸಾಧ್ಯವೇ ಎನ್ನತಕ್ಕಂಥಾದ್ದನ್ನು ಯೋಚಿಸಬೇಕಾಗಿದೆ. ಐದು ವರ್ಷದ ಅಂದಾಜಿಗೆ ಸೇಲ್ಸ್ ಟ್ಯಾಕ್ಸ್ ಹಾಕಿಬಿಡಿ. ಹೀಗೆ ವರ್ಷಗಳ ಅಂದಾಜಿನ ಮೇಲೆ ಫಿಕ್ಸ್ ಮಾಡಿಬಿಟ್ಟು ಸರಿಯಾಗಿ ಕೊಡುತ್ತಾ ಬಂದರೆ ನಿಮ್ಮ ಮೇಲೆ ವ್ಯವಹಾರವನ್ನು ಲೆಕ್ಕಪತ್ರ ನೋಡುವುದಿಲ್ಲ ಎಂದು ವರ್ತಕರಿಗೆ ಹೇಳಿದರೆ, ಒಪ್ಪಿಕೊಳ್ಳುತ್ತಾರೆ. ಹೇಗಾದರೂ ಸರ್ಕಾರಕ್ಕೆ ತೊಂದರೆಯಾಗುತ್ತದೆ. ಕಳೆದ ವರ್ಷಗಳ ಲೆಕ್ಕಗಳನ್ನು ತೆಗೆದುಕೊಂಡು ಮೊದಲನೆ ಟಾಕ್ಸ್ ಅದರಮೇಲೆ ಫಿಕ್ಸ್ ಮಾಡಿಬಿಡಿ. minimum ಬೇಡ, maximum fix ಮಾಡಿ ಅವರಿಂದ ಕೊಡುತ್ತೇವೆಂದು ಅಗ್ರಿಮೆಂಟ್ ಮಾಡಿ ಕೊಳ್ಳಿ. ಬಿಸಿನೆಸಿನಲ್ಲಿ ಲಾಭವಾಗಲಿ, ಲುಕ್ಸಾನಾಗಲಿ ಪ್ರತಿ ವರ್ಷ ಆ ರೀತಿ ಟ್ಯಾಕ್ಸ್ ಕೊಡ ಬೇಕೆಂದು ಬರೆಸಿಕೊಳ್ಳಿ ನಿಮಗೆ ತೊಂದರೆ ತಪ್ಪುತ್ತದೆ. ಈ ಸೇಲ್ಸ್ ಟ್ಯಾಕ್ಸ್ ಡಿಪಾರ್ಟ್‌ಮೆಂಟ್ ಮುಖಾಂತರ ಎಷ್ಟೇ ಯಶಸ್ವಿಯಾಗಿ ನೀವು ವಸೂಲುಮಾಡಿಸಿದರೂ ಅಷ್ಟು ಹಣ ನಿಮ್ಮ ಖಜಾನೆಗೆ ಬಂದೀತೆ ? ಈ ಡಿಪಾರ್ಟ್‌ಮೆಂಟಿನಲ್ಲಿ ಲಂಚ ಇದೆ ಎನ್ನುವುದನ್ನು ನೀವು ಒಪ್ಪಿಕೊಳ್ಳಲೇಬೇಕು ಈ ಇಲಾಖೆಯೂ ನೌಕರರಿಂದ ವರ್ತಕರಿಗೆ ಬಹಳ ಹೆರಾಸ್‌ಮೆಂಟೂ ಇದೆ. ದೊಡ್ಡ ವರ್ತಕರು, ಬಹಳ ಮರ್ಯಾದಸ್ಥರು, ಗೌರವಸ್ಥರು ಆಗಿರುತ್ತಾರೆ. ಅಂಥವರಿಗೆ ಲೆಕ್ಕ ತೆಗೆದುಕೊಂಡು ಇಂಥ ತಾರೀಖು T. B. ಗೆ ಬರಬೇಕೆಂದು ನೋಟೀಸ್ ಕೊಡುತ್ತಾರೆ. ಒಂದು ದಿವಸ ಕೆಲಸ ಮುಗಿಸದೆ "ನಿಮ್ಮ ಕೇಸು ಅಡ್‌ಜರ್ನ್ ಮಾಡಿದೆ, ಇನ್ನೊಂದು T. B.ಗೆ ಬನ್ನಿ" ಎಂದು ಹೇಳುತ್ತಾರೆ. ಅಲ್ಲಿಗೆ ಹೋದರೂ ಪುನಃ ಅಡ್‌ಜರ್ನ್ ಮಾಡುತ್ತಾರೆ. ಇದು ಪ್ರಜಾಪ್ರಭುತ್ವದಲ್ಲಿ ಆಗಬಾರದು ಈ ಅಗ್ರಿ ಕಲ್ಚರ್ ಟ್ಯಾಕ್ಸ್ ಹಾಕುವಾಗಲೂ ಇದೇ ಉಪದ್ರವ ವ್ಯವಸಾಯಗಾರರಿಗೆ ಇದೆ. ಈ ಇಲಾಖೆಯ ಗುಮಾಸ್ತರು ಯಾರಿಗಾದರೂ ನೋಟೀಸ್ ಕೊಡಬೇಕಾಗಿದ್ದರೆ, ಅಗ್ರಿಕಲ್‌ಚರ್ ಟ್ಯಾಕ್ಸ್ ಅವನಿಗೆ ಉಂಟೇ ಇಲ್ಲವೇ ಅನ್ನುವುದನ್ನು ನೋಡದೆ ಹಾಜರಾಗಿ ಎಂದು ನೋಟೀಸ್ ಕೊಡುತ್ತಾರೆ. ನೋಟೀಸ್ ಕೊಟ್ಟದಿವಸಕ್ಕೆ ಹಾಜರಾದರೆ, ಯಥಾ ಪ್ರಕಾರ "ನಿಮ್ಮ ಕೇಸು ಅಡಜರ್ನ್ ಮಾಡಿದೆ ಇಂಥಾ ಊರಿಗೆ ಪುನಃ ಬನ್ನಿ ಎಂದು ಹೇಳುತ್ತಾರೆ. ವ್ಯವಸಾಯಗಾರರಿಗೆ ಪ್ರತಿ ನಿಮಿಷವೂ ಬಹಳ valuable. ಮಳೆ ಕಾಣದ ಕಾಲದಲ್ಲಿ ಮಳೆ ಕಂಡೇನೇ ಎಂದು ಇರುತ್ತಾರೆ. ಮಳೆ ಬಿದ್ದ ಕೂಡಲೆ ಉಳಿಮೆ ಕೆಲಸವಿರುತ್ತದೆ. ಇಂಥ ಕಾಲದಲ್ಲಿ ವ್ಯವಸಾಯಗಾರರು ಆಫೀಸಿಗೆ ಹೋಗುತ್ತಾರೆ. ಅದಕ್ಕಿಂತ ಅವಮಾನ ಮತ್ತೊಂದಿಲ್ಲ. ನಾನು ತಿಳಿದಿದ್ದ ಹಿಂದಿನ ಕಾಲದ ಅಧಿಕಾರಿ ಗಳಿಗಿಂತ ಈವಾಗ ಪ್ರಜಾಪ್ರಭುತ್ವದಲ್ಲಿ ಅಧಿಕಾರಿಗಳು ಅವರ ಜವಾಬ್ದಾರಿಯನ್ನು ಸ್ವಲ್ಪ ಅರಿತು, ವರ್ತಕರಾಗಲಿ, ಕೂಲಿಗಾರರಾಗಲಿ, ವ್ಯವಸಾಯಗಾರರಾಗಲಿ, ಅವರೊಂದಿಗೆ ಮಿಳಿತವಾಗಿ ಚೆನ್ನಾಗಿ ವರ್ತಿಸುತ್ತಾರೆಂದು. ಆದರೆ ಹಿಂದಿಗಿಂತ ಈಗಿನ ಅಧಿಕಾರಿಗಳು ಸ್ವಲ್ಪ ಹೆಚ್ಚಾಗಿ ಬಿಗಿಯಾಗಿದ್ದಾರೆ. ಅವರು ವಸೂಲಿಯಲ್ಲಿ ಬಿಗಿಮಾಡಲಿ, ಕಾನೂನಿನಲ್ಲಿ ಬಿಗಿಮಾಡಲಿ, ಆದರೆ ಅವರು ಜನಗಳನ್ನು ಗೌರವಯುತವಾಗಿ ಕಂಡುಕೊಳ್ಳುವಂತೆ ವ್ಯವಸ್ಥೆ ಮಾಡಬೇಕು. ದೇಶದ ಬೊಕ್ಕಸ ವನ್ನು ತುಂಬಿಸತಕ್ಕಂಥವರಿಂದ ದೇಶಕ್ಕೆ ಕಲ್ಯಾಣಮಾಡತಕ್ಕಂಥವರಿಂದ, ಈಗಿರುವ ಹಣ ವಸೂಲಿ ಮಾಡುವ ಕ್ರಮ ಅಷ್ಟು ಚೆನ್ನಾಗಿಲ್ಲ ಈ sales tax ಮತ್ತು agricultural tax ವಸೂಲು ಮಾಡುತ್ತಿರುವ ಕ್ರಮದಲ್ಲಿರುವ ಅನ್ಯಾಯ, ಅವಮಾನ, ಹೆರ್ರಾಸ್‌ಮೆಂಟ್ ತಪ್ಪಿಸಲು ಬೇರೆ ಯಾವುದಾದರೂ ಕ್ರಮ ತೆಗೆದುಕೊಳ್ಳಬೇಕು. ಈ ವಸೂಲಿ ಮಾಡತಕ್ಕಂಥ ಕ್ರಮವನ್ನು ರಿಎಕ್ಸಾಮಿನ್ ಮಾಡಲು ಒಂದು ಕಮಿಟಿ ಮಾಡಿ, ಬೇರೆ ವ್ಯವಸ್ಥೆ ಮಾಡುವುದನ್ನು ಆಲೋಚನೆ ಮಾಡಬೇಕು, ಒಂದು ಸುವ್ಯವಸ್ಥಿತವಾದ ಏರ್ಪಾಡು ಮಾಡಬೇಕು ಒಂದು ಕಮಿಟಿಮಾಡಿ, ಹಗಲು ರಾತ್ರಿ ಕಷ್ಟಪಟ್ಟು ಸರ್ಕಾರ ಬೊಕ್ಕಸವನ್ನು ತುಂಬಿಸುತ್ತಾರೋ, ಅವರಿಗೆ ಅವಮಾನವಾಗಲಿ, ಹೆರ್ರಾಸ್‌ಮೆಂಟಾಗಲಿ, ಅಪಮಾನವಾಗಲಿ ಆಗದ ರೀತಿಯಲ್ಲಿ ಟ್ಯಾಕ್ಸ್ ವಸೂಲು ಮಾಡುವ ಮಾರ್ಗ ವನ್ನು ಹುಡುಕಿಸಿ, ಮಾಡಿ ನಮಗೆ ಬರತಕ್ಕಂಥ ಟ್ಯಾಕ್ಸ್ ವ್ಯವಸ್ಥಿತ ರೀತಿಯಲ್ಲಿ ಬರುವಂತೆ ಮಾಡಿ ಎಂದು ಹೇಳಬಯಸುತ್ತೇನೆ.

4-00 P. M.

†ಶ್ರೀ ಎಚ್. ಆರ್. ಕೇಶವಮೂರ್ತಿ (ಗಂಡಸಿ).—ಸಭಾಪತಿಗಳೇ, ಈ ದಿವಸ ವ್ಯವಸಾಯದ ತೆರಿಗೆ ವಿಷಯದಲ್ಲಿ ಮಾನ್ಯ ಸ್ನೇಹಿತರು ಹೇಳಿದ್ದಾರೆ, ನಾನು ಒಂದೆರಡು ವಿಷಯಗಳನ್ನು ಮಾತ್ರ ಹೇಳುತ್ತೇನೆ. ಈ ವ್ಯವಸಾಯದ ವರಮಾನದ ತೆರಿಗೆಯೊಳಗೆ ಇದನ್ನು ಸೆಕ್ಷನ್ (3) ರ ಪ್ರಕಾರ ವಸೂಲು ಮಾಡಬೇಕೆಂದು ಇದೆ. ಅದರ ಪ್ರಕಾರ No agricultural income tax shall be leviable on the total agricultural income which does not exceed

Rs. 3,500 ಎಂದು ಇದೆ. ಮುಂದೆ 3,501 ರೂಪಾಯಿಗೆ ಟಾಕ್ಸ್ ಬೀಳುತ್ತದೆ. ಇದನ್ನು ಏಕೆ ಹೇಳುತ್ತೇನೆ ಎಂದರೆ ರೈತರಿಗೆ ತಿಳಿವಳಿಕೆಯ ಮಟ್ಟ ಕಡಿಮೆ ಇರುವುದರಿಂದ ವಸೂಲಿ ಕ್ರಮದಲ್ಲಿ ಇನ್‌ಕಂಟ್ಯಾಕ್ಸ್ ಕಲೆಕ್ಷನ್ ಅಧಿಕಾರಿಗಳಿಂದ ಕೆಲವು ಅಪಚಾರಗಳು ನಡೆದಿವೆ. ಅದನ್ನು ತಡಗಟ್ಟಬೇಕು ಎಂಬ ಉದ್ದೇಶದಿಂದ ಹೇಳುತ್ತಿದ್ದೇನೆ. ಇಲ್ಲಿ total agricultural income ಎಂಬುದು ಮುಖ್ಯವಾದ ಪದ. ಅದರಲ್ಲೂ the agricultural income of the person shall be comperted after making the following deductions ಎಂದು ಇದೆ. ಇದು ಬಹಳ ಮುಖ್ಯವಾದದ್ದು. ಒಟ್ಟು ವ್ಯವಸಾಯದ ವರಮಾನದಲ್ಲಿ ಕೆಲವು ಬಾಬುಗಳಿಗೆ ಕಳೆದು ನಂತರ ತೆರಿಗೆ ಕೊಡಬೇಕೆಂದು ಇದೆ. ಈ ಇನ್‌ಕಂ ಟ್ಯಾಕ್ಸ್ ಯಾವ ರೀತಿ ವಸೂಲು ಮಾಡುತ್ತಾರೆ ಎಂದರೆ ಯಾವುದೋ ಒಂದು ಅಂದಾಜಿನ ಮೇಲೆ ರೈತರಿಗೆ ನೋಟೀಸು ಕೊಟ್ಟು, ಆದಾಯ ಕಡಿಮೆ ಇದ್ದರೂ ಕೂಡ, ಇಷ್ಟು ತೆರಿಗೆ ಕೊಡಬೇಕೆಂದು ಹೇಳುತ್ತಾರೆ. ಆದಾಯ ಎಷ್ಟಿದೆ ಎಂದು ನೋಡಿ ಕಾನೂನು ಬದ್ಧವಾಗಿ ನಿರ್ದಿಷ್ಟವಾಗಿ ನಿಷ್ಕರ್ಷೆ ಮಾಡುವುದಿಲ್ಲ. ಹಾಗೆ ಮಾಡದೇ ಅಂದಾಜಿನ ಮೇಲೆ ನಿಷ್ಕರ್ಷೆ ಮಾಡಿ ಅವರನ್ನು ಹೆದರಿಸಿ ತೆರಿಗೆ ತೆಗೆದುಕೊಳ್ಳುತ್ತಾ ಇದ್ದಾರೆ. ಇದನ್ನು ತಪ್ಪಿಸುವುದಕ್ಕೆ ರೈತರನ್ನು ಯಾವ ರೀತಿ ಈ ತೆರಿಗೆಯನ್ನು ವಸೂಲು ಮಾಡುವುದಕ್ಕೆ ಒತ್ತಾಯ ಮಾಡುತ್ತಾರೆಯೋ ಅದೇ ರೀತಿ ತಿಳಿವಳಿಕೆ ಕಡಿಮೆ ಇರತಕ್ಕ ರೈತರಿಗೆ ಅಗ್ರಿಕಲ್ಚರಲ್ ಇನ್‌ಕಂ ಟ್ಯಾಕ್ಸ್ ಎಂದರೆ ಈ ತರಹ, ಯಾವ ಯಾವುದಕ್ಕೆ ರಿಯಾಯಿತಿ ಸಿಕ್ಕುತ್ತದೆ, ಯಾವ ಯಾವುದು ಕೊಟ್ಟ ನಂತರ 3,500 ರೂಪಾಯಿಗೆ ಮೇಲೆ ಆಗುತ್ತದೆ ಎಂಬ ಒಂದು ತಿಳಿವಳಿಕೆಯ ಪತ್ರವನ್ನು ಹಂಚಬೇಕು. ಅವರಿಗೆ ತಿಳಿವಳಿಕೆ ಇಲ್ಲದೇ ಇರುವುದರಿಂದ ಅವರು ನ್ಯಾಯಸ್ಥಾನಗಳಿಗೆ ಹೋಗಬೇಕಾಗುತ್ತದೆ. ಆಗ ಲಾಯರು ಅಥವಾ ಅಡ್ವೊಕೇಟರ ಸಹಾಯ ತೆಗೆದುಕೊಳ್ಳಬೇಕಾಗುತ್ತದೆ, ಖರ್ಚಿಗೆ ಒಂದು ದಾರಿ ಆಗುತ್ತದೆ. ಅಂತಹ ಅನಾವಶ್ಯಕವಾದ ಖರ್ಚನ್ನು ತಪ್ಪಿಸುವುದಕ್ಕೆ ಸರ್ಕಾರದವರು ದಯವಿಟ್ಟು ಅಗ್ರಿಕಲ್ಚರಲ್ ಇನ್‌ಕಂ ಟ್ಯಾಕ್ಸ್ ಯಾವ ರೀತಿ ಕೊಡಬೇಕು ಎಂಬ ತಿಳಿವಳಿಕೆಯ ಪತ್ರವನ್ನು ಹೊರಡಿಸಿ ರೈತರ ಗಮನಕ್ಕೆ ತಂದು ಅವರಿಗೆ ಅನುಕೂಲ ಮಾಡಿಕೊಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ. ಅಗ್ರಿಕಲ್ಚರಲ್ ಟ್ಯಾಕ್ಸ್ ಆಗಲಿ, ಸೇಲ್ಸ್ ಟ್ಯಾಕ್ಸ್ ಆಗಲೀ ಯಾವುದೇ ಆದರೂ ಕೂಡ ಸಾಮಾನ್ಯವಾಗಿ ಈ ತೆರಿಗೆಯ ಹೊರೆ ಬೀಳುವುದು ಪ್ರಾಮಾಣಿಕನಾದ ಮನುಷ್ಯನ ಮೇಲೆ. ಅವನು ಈ ತೆರಿಗೆ ತರುತ್ತಾನೆ ಎಂಬುದು ಎಲ್ಲರಿಗೂ ಗೊತ್ತು. ಅಪ್ರಾಮಾಣಿಕನಾದ ಮನುಷ್ಯನಿಗೆ ಈ ತೆರಿಗೆಯನ್ನು ತಪ್ಪಿಸಿಕೊಳ್ಳುವುದೇ ಒಂದು ಕಸುಬನ್ನಾಗಿಟ್ಟುಕೊಂಡಿರುವವನಿಗೆ ಈ ತೆರಿಗೆ ಬೀಳುವುದೇ ಇಲ್ಲ. ಅವರು ಟ್ಯಾಕ್ಸ್ ಹಾಕತಕ್ಕವರೊಂದಿಗೆ ಸೇರಿಕೊಂಡು ಸರ್ಕಾರಕೆ ಬರತಕ್ಕ ಒಂದು ಆದಾಯವನ್ನು ತಪ್ಪಿಸುತ್ತಾರೆ. ಅದನ್ನು ತಡೆಗಟ್ಟುವುದಕ್ಕೆ ನನ್ನ ಸಲಹೆ ಇಷ್ಟೆ. ಯಾರು ಸಾಮಾನ್ಯವಾಗಿ ಟ್ಯಾಕ್ಸ್ ಕೊಡದೇ ತಪ್ಪಿಸಿಕೊಳ್ಳುತ್ತಾರೆ ಅಂಥವರನ್ನು ಕಂಡುಹಿಡಿದು ಶಿಕ್ಷೆಮಾಡುವುದಕ್ಕೆ ಒಂದು ಕಮಿಟಿ ಅಥವಾ ಸೂಪರ್‌ವೈಸರಿ ಶಿಬ್ಬಂದಿ ನೇಮಕ ಮಾಡಿದರೆ ಬಹಳ ಅನುಕೂಲವಾಗುತ್ತದೆ. ಈ ರೀತಿ ತೆರಿಗೆ ಕೊಡದೇ ತಪ್ಪಿಸಿಕೊಳ್ಳುವವರ ಸಂಖ್ಯೆ ಕಡಿಮೆಯಾಗುತ್ತದೆ. ಪ್ರಮಾಣಿಕನಾದವನಿಗೆ ಪ್ರೋತ್ಸಾಹ ಕೊಟ್ಟಂತಾಗುತ್ತದೆ.

State excise duties ವಿಚಾರದಲ್ಲಿ ನಮ್ಮ ಮಾನ್ಯ ಸ್ನೇಹಿತರು ಹೇಳಿದಂತೆ ಬೆಂಗಳೂರನ್ನು ಬಿಟ್ಟು ದೇಶಾದ್ಯಂತ ತಾವು ಪಾನನಿರೋಧವನ್ನು ಜಾರಿಗೆ ತಂದಿದ್ದೀರಿ. ನಮ್ಮ ಕಡೆಯಲ್ಲಿ "ಮೈಯ್ಯೆಲ್ಲಾ ಚಿನ್ನ ಕಿವಿ ಮಾತ್ರ ಹಿತ್ತಾಳೆ" ಎಂದು ಒಂದು ಗಾದೆ ಹೇಳುತ್ತಾರೆ ಹಿಂದಿನ ಕಾಲದವರು. ಆ ರೀತಿ ಆಗಿದೆ ನೀವು ಮಾಡಿರುವುದು.

ಶ್ರೀ ಬಿ ಡಿ. ಜತ್ತಿ.—ಆ ಗಾದೆ ಈಗಿನ ಕಾಲಕ್ಕೆ ಅನ್ವಯಿಸುತ್ತದೆಯೇ ?

ಶ್ರೀ ಎಚ್. ಆರ್. ಕೇಶವಮೂರ್ತಿ.—ಪೂರ್ವದ ಪದ್ಧತಿಯನ್ನು ಅನೂಚಾನವಾಗಿ ಜಾರಿಗೆ ತರುತ್ತಿರುವಾಗ ಇದಕ್ಕೂ ಕೂಡ ಅನ್ವಯಿಸುತ್ತದೆಂದು ನನ್ನ ಭಾವನೆ. ಪಾನನಿರೋಧವನ್ನು ಜಾರಿಗೆ ತರುವುದಾದರೆ ತಮ್ಮ ಸಾಧ್ಯವಿಲ್ಲದೇ ಇದ್ದರೆ ದಯವಿಟ್ಟು ತೆಗೆದುಹಾಕಿಬಿಡಿ. ಕಾರಣ ಇಷ್ಟೆ. ಜಾರಿಗೆ ತರಬೇಕಾದರೆ, ಶಾಸ್ತ್ರೋಕ್ತವಾಗಿ, ತೊಂದರೆ ಏನಾಗುತ್ತದೆ ಎಂಬುದನ್ನು ದೀರ್ಘವಾಗಿ ಹೇಳಬೇಕಾಗುತ್ತದೆ. ಮೆಡಿಕಲ್ ಎಕ್ಸ್‌ಪರ್ಟ್‌ಸನ್ನು ವಿಚಾರಮಾಡಿ, ತೊಂದರೆ ಅನಾನುಕೂಲ ಏನು ಎಂಬುದನ್ನು ವಿಮರ್ಶೆಮಾಡಿ ತರಬೇಕಾಗುತ್ತದೆ. ಉದಾಹರಣೆಗೆ ನಮ್ಮ ಮಲೆಸೀಮೆಯಲ್ಲಿ ಶೇಂದಿ ಕುಡಿಯದಿದ್ದರೆ ಆನೆ‌ಕಾಲು ರೋಗ ಬರುತ್ತದೆ, ಕುಡಿದರೆ ಬರುವುದಿಲ್ಲ.

ಶ್ರೀ ಬಿ. ಡಿ. ಜತ್ತಿ.—ನಿಮಗೆ ಹೇಗೆ ಗೊತ್ತು ?

ಶ್ರೀ ಎಚ್. ಆರ್. ಕೇಶವಮೂರ್ತಿ.—ಸರ್ವಜ್ಞಮೂರ್ತಿ 'ಕೆಲವಂ ಬಲ್ಲವರಿಂದ ಕಲ್ತು' ಎಂದು ಹೇಳಿರುವಂತೆ, ಕೆಲವರಿಂದ ಕೇಳಿ ತಿಳಿದುಕೊಂಡಿದ್ದೇನೆ. ಸಾಂಕ್ರಾಮಿಕ ರೋಗಗಳು, ಕಾಲರಾ ಮುಂತಾದುವುಗಳನ್ನು ಶೇಂದಿ ಕುಡಿಯುವುದರ ಮೂಲಕ ತಡೆಗಟ್ಟಬಹುದು. ತಮಾಷೆಗೆ ನಾನು ಹೇಳುತ್ತಿಲ್ಲ. ನಾಟಕದ ದೃಶ್ಯ ನೋಡಿ ನೀವು ಇದನ್ನು ಜಾರಿಗೆ ತಂದಿದ್ದೀರೇ ಹೊರತು. ಇದರಲ್ಲಿ

(ಶ್ರೀ ಹೆಚ್. ಆರ್. ಕೇಶವಮೂರ್ತಿ)

ಬಹಳ ಒಳ್ಳೆಯ ಗುಣ ಇದೆ. ಕುಡಿಯುವ ಪದ್ಧತಿ ಬದಲಾವಣೆ ಮಾಡಬೇಕು. ತಿಳಿವಳಿಕಸ್ತರು ಎಷ್ಟು ಕುಡಿಯಬೇಕೋ ಅಷ್ಟು ಕುಡಿಯುತ್ತಾರೆ. ಡಿಸ್ಟಿಲ್ಡ್ ವಾಟರ್ ಕೊಟ್ಟಹಾಗೆ ಶೇಂದಿಯನ್ನು ನಿಷ್‌ಪ್ರಯೋಜಕವಾದ ಕುಡಿತಮಾಡಿ, ಯಾರಿಗೆ ಬೇಕೋ ಅವರಿಗೆ ಕುಡಿಯಲು ಕೊಡುತ್ತಿದ್ದರು. ಯಾವುದಾದರೂ ಒಂದು ಕಾನೂನು ಜಾರಿಗೆ ತಂದರೆ ದೇಶದಲ್ಲಿ ಹೆಚ್ಚು ಜನರು ಅದನ್ನು ಸ್ವಾಗತಿಸಬೇಕು. ಸ್ವಾಗತಿಸದಿದ್ದರೆ ಅಂಥಾ ಕಾನೂನನ್ನು ಜಾರಿಗೆ ತಂದರೂ ಜನರಿಗೆ ಪ್ರಯೋಜನವಾಗುವುದಿಲ್ಲ. ದೇಶಕ್ಕೆ ಬರತಕ್ಕ ಆದಾಯ ಕೂಡ ಕಡಿಮೆಯಾಗುತ್ತದೆ. ಹಾಸನ ಡಿಸ್ಟ್ರಿಕ್ಟಿನ ಉದಾಹರಣೆ ಕೊಡುವುದಾದರೆ ಬೆಲ್ಲ ಮಾಡುವುದಕ್ಕೆ 150 ಜನಕ್ಕಿಂತ ಹೆಚ್ಚು ಜನರಿಗೆ ಲೈಸೆನ್ಸ್ ಕೊಟ್ಟಿದ್ದೀರಿ. ಒಂದು ಅಚ್ಚು ಬೆಲ್ಲ ಕೂಡ ಯಾರೂ ಮಾಡಿಲ್ಲ. ಈಚಲು ಮರದಿಂದ ಶೇಂದಿ ಇಳಿಸಿ ಪಬ್ಲಿಕ್ ಆಗಿ ಮಾರಾಟ ಮಾಡಿದ್ದಾರೆ. ನಾಮಾಕಾವಾಸ್ತೆ ಪಾನನಿರೋಧ ಇದೆ, ಯಾರೂ ಕುಡಿಯುವುದನ್ನು ಬಿಟ್ಟಿಲ್ಲ. ಅದು ಇನ್ನು ಜಾಸ್ತಿಯಾಗುತ್ತಾ ಇದೆ. ಡಿ.ಐ.ಜಿ.ಯವರು ಹಾಸನಕ್ಕೆ ಹೋಗಿ ಬೇಕಾದಷ್ಟು ಗಲಾಟೆಯಾಗಿರುವುದು, ಆ ಜಿಲ್ಲೆಯ ಒಬ್ಬ ಎಂ.ಎಲ್.ಎ. ಸ್ಟೇಟುಮೆಂಟು ಕೊಟ್ಟಿರುವುದು ನನಗೆಲ್ಲಾ ಗೊತ್ತಿದೆ. ಅವರನ್ನೇ ಕೇಳಿಕೊಳ್ಳಬಹುದು. ಇದು ಯಶಸ್ವಿಯಾಗಿಲ್ಲ. ಇದರಿಂದ ತುಂಬಾ ಅನ್ಯಾಯ ಅನಾಹುತವಾಗುತ್ತಾ ಇದೆ. ಆದಷ್ಟು ಬೇಗ ಇದನ್ನು ತಡೆಗಟ್ಟಬೇಕೆಂದು ಅವರು ಹೇಳಿಕೊಟ್ಟಿದ್ದಾರೆ. ಅವರು ಕೊಟ್ಟ ಹೇಳಿಕೆಯನ್ನು ವಿರೋಧ ಪಕ್ಷದ ಸದಸ್ಯರೂ ಕೂಡ ಸಮರ್ಥಿಸಿದ್ದಾರೆ. ಅರಸೀಕೆರೆ ತಾಲ್ಲೂಕಿನಲ್ಲಿ ನೀರಾ ಕೇಂದ್ರಗಳನ್ನು ಮಾಡಿ, ಲೈಸೆನ್ಸ್ ಕೊಟ್ಟಿದ್ದೀರಿ. ನೀರಾ ಅಂತ ಹೆಸರು; ರಾಜಾರೋಷವಾಗಿ ಹೆಂಡ ಮಾರಾಟ ಮಾಡುತ್ತಾರೆ. ಬಹಳ ಅನಾಹುತವಾಗುತ್ತಿದೆ. ಆದ್ದರಿಂದ ಮುಂದಿನ ವರ್ಷವಾದರೂ ದಯವಿಟ್ಟು ಈ ನೀರಾ ಲೈಸೆನ್ಸ್ ಮತ್ತು ಬೆಲ್ಲ ಮಾಡತಕ್ಕ ಲೈಸೆನ್ಸು ಇವೆರಡನ್ನು ಮನ್ನಾ ಮಾಡಬೇಕು, ಅನುಮತಿ ಕೊಡಬಾರದು ಎಂದು ಪ್ರಾರ್ಥಿಸುತ್ತೇನೆ.

ಪ್ರಿವೆಂಟೀವ್ ಎಸ್ಟ್ಯಾಬ್ಲಿಷ್‌ಮೆಂಟ್ ಎಂದು ಪ್ರತಿಯೊಂದು ಡಿಸ್ಟ್ರಿಕ್ಟ್‌ನಲ್ಲೂ ಹಾಕಿದ್ದೀರಿ. ದುಡ್ಡು ಖರ್ಚು ಮಾಡುವ ಅವರು ಅಕ್ರಮ ತಡೆಗಟ್ಟುವುದಕ್ಕೆ ಏನು ಮಾಡಿದ್ದಾರೆ, ಏನು ಕಾರ್ಯಕ್ರಮ ತೆಗೆದುಕೊಂಡಿದ್ದಾರೆ ಎಂಬುದನ್ನು ತಿಳಿಸಬೇಕು.

ಟರ್ಮಿನಲ್ಲಿ ಲಕ್ಷುರಿ ಟ್ಯಾಕ್ಸ್, ಬೆಟಿಂಗ್ ಟ್ಯಾಕ್ಸ್, ಎಂಟರ್‌ಟೇನ್‌ಮೆಂಟ್ ಟ್ಯಾಕ್ಸ್ ಅಂತ ಹಾಕಿದ್ದೀರಿ. ಎಂಟರ್‌ಟೇನ್‌ಮೆಂಟ್ ಟ್ಯಾಕ್ಸನ್ನು ಸರ್ಕಾರದವರೇ ವಸೂಲುಮಾಡಿ 10% ತಾವು ಇಟ್ಟುಕೊಳ್ಳುತ್ತೀರಿ, ಬಾಕಿಯದು ಲೋಕಲ್ ಬಾಡೀಸ್‌ಗೆ ಕೊಡುತ್ತೀರಿ.

ನನ್ನ ಸಲಹೆ ಇಷ್ಟೆ. ಈ ಎಂಟರ್‌ಟೈನ್‌ಮೆಂಟ್ ಟ್ಯಾಕ್ಸನ್ನು ಇನ್ನೂ ಸ್ವಲ್ಪ ಜಾಸ್ತಿಮಾಡಿ' ಹಾಗೇ ಈ ಬೆಟ್ಟಿಂಗ್ ಟಾಕ್ಸನ್ನು ಸ್ವಲ್ಪ ಇನ್ನೂ ಜಾಸ್ತಿಮಾಡಿ; ಈ ಟ್ಯಾಕ್ಸಗಳಿಂದ ಬರತಕ್ಕ ಹಣದಲ್ಲಿ 25% ಸರ್ಕಾರದವರಿಟ್ಟುಕೊಂಡು ಇನ್ನುಳಿದ 75%ನ್ನು ಲೋಕಲ್ ಬಾಡೀಸ್‌ಗಳಿಗೆ ಕೊಡುವಂತೆ ವ್ಯವಸ್ಥೆಮಾಡಬೇಕೆಂದು ನನ್ನ ಪ್ರಾರ್ಥನೆ.

ಇದೇ ರೀತಿ ಈಗ ಷುಗರ್‌ಕೇನ್ ಸೆಸ್‌ಟ್ಯಾಕ್ಸ್ ಎಂದು ಇದೆ. ಈ ದಿವಸ ಈ ಟ್ಯಾಕ್ಸನ್ನು ವಸೂಲ್ಮಾಡಿ ಕಬ್ಬನ್ನು ರೈತರ ಜಮೀನಿನಿಂದ ಕಂಪನಿಗೆ ಸಾಗಿಸತಕ್ಕ ರಸ್ತೆಗಳೇನಿವೆ ಅವುಗಳಿಗೆ ಖರ್ಚು ಮಾಡಲಾಗುತ್ತಿವೆ. ಆದರೆ ಈ ಬಾಬಿನಲ್ಲಿ ವಸೂಲಾಗತಕ್ಕ ಟ್ಯಾಕ್ಸ್ ಹಣವೇನಿದೆ ಅದಕ್ಕೆ ಎರಡರಷ್ಟು ಖರ್ಚಾಗುತ್ತಿದೆ. ಆದ ಕಾರಣ ಈ ಕೆಲಸವನ್ನು ಆ ಷುಗರ್ ಫ್ಯಾಕ್ಟರಿಯವರಿಗೇನೇ ವಹಿಸಿ ಇಲ್ಲವೇ ಈ ಟಾಕ್ಸನ್ನು ಇನ್ನೂ ಜಾಸ್ತಿ ಮಾಡಬೇಕೆಂದು ನನ್ನ ಪ್ರಾರ್ಥನೆ.

ಈ ಪ್ರೈಜ್ ಕಾಂಪಿಟಿಷನ್ ಬಾಬಿನಿಂದ ಬರತಕ್ಕ ಟ್ಯಾಕ್ಸೆಲ್ಲ ಸೆಂಟರಿಗೆ ಸೇರತಕ್ಕ ಟ್ಯಾಕ್ಸಾಗಿರುತ್ತೆಂದು ಭಾವಿಸಿದ್ದೇನೆ. ಇದು ಸೆಂಟರಿಗೆ ಸೇರತಕ್ಕ ಬಾಬಾಗಿದ್ದರೂ ಇದರಿಂದ ನಮಗೇನೂ ಭಾಗ ಬರುವುದಿಲ್ಲವೇ? ಬಂದರೆ ಆ ಹಣ ಯಾವ ಹೆಡ್ಡಿಗೆ ಹೋಗುತ್ತದೆ ಎಂಬುವುದನ್ನು ತಿಳಿಸಬೇಕು.

ಇನ್ನು ಈ ಎಂಟರ್‌ಟೈನ್‌ಮೆಂಟ್ ಬಾಬಿನಲ್ಲಿ ಡ್ರಾಮ ರಿಸ್ಟೈಟಿಂಗ್ ಅಸೋಸಿಯೇಷನ್ ಎಂದು ಒಂದು ಬಾಬು ಸೇರಿದೆ. Drama conducted by recognised associations. wrestling conducted by recognised assoiation. Musical performances is etc, conducted by recognised assosiations. ಆದರೆ ಈ ಟರ್ಮ್ ಏನಿದೆ ಇದು ಕ್ಲಿಯರ್ ಟರ್ಮ್ ಅಲ್ಲ. ಈ ದಿವಸ ಏನು ಕೆಲವರು ಈ ಕೋ-ಆಪರೇಟೀವ್ ಸೊಸೈಟಿ ಎಂದು ಮಾಡಿಕೊಂಡು ದುಡ್ಡನ್ನುಹೇಗೆ ಹೊಡೆದು ತಿನ್ನುತ್ತಿದ್ದರೋ ಹಾಗೇಇಲ್ಲಿಯೂ ಈ ಒಂದು ಹೆಸರಿನಲ್ಲಿ ಸರ್ಕಾರಕ್ಕೆ ಬರುವ ಟ್ಯಾಕ್ಸನ್ನು ತಪ್ಪಿಸಿಕೊಳ್ಳಲು ಹೀಗೆ ಮಾಡುತ್ತಾರೆ. ಆದರೆ ಇವರಿಗೆ ಸರ್ಕಾರ ಒಂದು ಪ್ರೋತ್ಸಾಹ ನೀಡಬೇಕೆಂಬ ಅಭಿಲಾಷೆಯಿದ್ದರೆ 50% ಟ್ಯಾಕ್ಸನ್ನು ಬಿಟ್ಟು 50% ಟಾಕ್ಸನ್ನು ಸರ್ಕಾರಕ್ಕೆ ವಸೂಲ್ಮಾಡಿಕೊಳ್ಳಬೇಕುಎಂದು ಹೇಳುತ್ತೇನೆ. ಈ ಸಲಹೆಗೆ ಸರ್ಕಾರದವರು ಗಮನಕೊಡುತ್ತಾರೆಂದು ನಂಬಿದ್ದೇನೆ.

ಇನ್ನು ಸೇಲ್ಸ್ ಟ್ಯಾಕ್ಸ್ ವಿಚಾರಕ್ಕೆ ಬಂದರೆ—ಇದು ಕಾಸಿಗೆ ಕಾಸನ್ನು ಸೇರಿಸಿ ಸರ್ಕಾರಕ್ಕೆ ಒಳ್ಳೆಯ ವರಮಾನ ತರತಕ್ಕ ಬಾಬಾಗಿದೆ. ಆದರೆ ಈ ದಿವಸ ಈ ಟ್ಯಾಕ್ಸನ್ನು ಯಾರು ಸಾಹುಕಾರರಿಂದ ವಸೂಲ್ಮಾಡುತ್ತಿದ್ದಾರೋ ಅವರು ಸಾಹುಕಾರರಾಗುತ್ತಿದ್ದಾರೆ. ಹೀಗೆ ಈ ದಿವಸ ಈ ಟ್ಯಾಕ್ಸ್ ಬಾಬು ಸಾಹುಕಾರರನ್ನು ಸೃಷ್ಟಿಸುವಂಥ ಬಾಬಾಗಿದೆ, ಆದರೆ ಈ ಟ್ಯಾಕ್ಸ್ ಪೂರ್ತಿಯಾಗಿ ಬಳಸತಕ್ಕ ಜನಗಳ ಮೇಲೆ ಬೀಳತಕ್ಕದ್ದಾಗಿದೆ. ಇದರಿಂದ ಒಂದು ರೀತಿಯಲ್ಲಿ ಸಾಹುಕಾರರಿಗೂ ಅನುಕೂಲವಾಗಿದೆ ಎಂದು ಹೇಳಬಹುದು. ಆದರೆ ಬಡವರಿಗೆ ತುಂಬಾ ತೊಂದರೆ ಆಗುತ್ತಿದೆ. ಆದ್ದರಿಂದ ಈ ತೆರಿಗೆಯನ್ನು ಯಾರಿಗೆ ಏಳುವರೆ ಸಾವಿರ ರೂಪಾಯಿಗಳ ವರಮಾನವಿರುತ್ತೋ ಅಂಥವರಿಗೆ ಅನ್ವಯಿಸಿ ಅದಕ್ಕೆ ಕೆಳಗಿರತಕ್ಕವರಿಗೆ ಬೀಳದಂತೆ ನೋಡಿಕೊಳ್ಳಬೇಕು.

ಪಾನನಿರೋಧದ ವಿಚಾರದಲ್ಲಿ ಟ್ಯಾಕ್ಸಿಗೆ ಸಂಬಂಧವಿದೆ. ಈ ಪಾನನಿರೋಧದ ವಿಚಾರದಲ್ಲಿ ಒಂದು ಮಾತನ್ನು ಹೇಳಬೇಕಾಗಿದೆ.

British Parliamentary Democracy :

"The highest conduct of democracy means more than mere counting of heads. It means that the Government has not only got to think what are the trends of public opinion on this side or the other side on a particular issue. It must think also of what is right not merely what the nation wants to do but what the nation will want the day-after-tomorrow because when a nation goes on growing it must get what is in the best interest of the nation, what the people would in the end like to be done" ಹೀಗೆಂದು ಹೇಳಿದ್ದಾರೆ. ಸರ್ಕಾರದವರು ದಯವಿಟ್ಟು ಇದನ್ನು ತಿಳಿದುಕೊಂಡು ಇದರಂತೆ ಅನುಸರಿಸಬೇಕೆಂದು ಹೇಳುತ್ತೇನೆ. ಆದರೆ ಯಾವತ್ತೂ ಸರ್ಕಾರ ಜನರಿಗೆ ಬೇಕಿಲ್ಲದ ಕಾನೂನನ್ನು ಮಾಡಬೇಡಿ ಎಂದು ತಿಳಿಸಿ ನನಗಿಷ್ಟು ಮಾತನಾಡಲು ಅವಕಾಶ ಕಲ್ಪಿಸಿಕೊಟ್ಟ ಅಧ್ಯಕ್ಷರಿಗೆ ನನ್ನ ವಂದನೆಗಳನ್ನರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಗೋಪಾಲ ಸಾಲೆನ್ನ (ಮೂಡಬಿದ್ರೆ ಅನುಸೂಚಿತ ಜಾತಿಗಳು).—

ಸ್ವಾಮಿ, ಅಧ್ಯಕ್ಷರೇ : ಈ ಡಿಮ್ಯಾಂಡಿನ ಮೇಲೆ ನನಗೆ ಮಾತನಾಡಬೇಕೆಂಬ ಕುತೂಹಲ ಮೊದಲೇನೂ ಇರಲಿಲ್ಲ. ಆದರೆ ಇಲ್ಲಿಗೆ ನಾನು 5-6 ದಿವಸಗಳಿಂದಲೂ ಕಾದು ಮಾತಾಡುವ ಅವಕಾಶಕ್ಕಾಗಿ ನೋಡಿದೆ, ನನಗೆ ಅವಕಾಶವು ದೊರೆಯಲಿಲ್ಲ. ಆದರೆ ಈ ದಿವಸ ಇಲ್ಲಿ ಈ ಡಿಮ್ಯಾಂಡಿನ ಮೇಲೆ ಚರ್ಚೆ ನಡೆಯುತ್ತಿರುವುದನ್ನು ನೋಡಿ ನನಗೂ ಕೂಡ ಎರಡು ಮಾತನ್ನಾಡಬೇಕೆಂದೆನಿಸಿತು.

ಈ ದಿವಸ ನಾವು ಪ್ರೊಹಿಬಿಷನ್ ಬಾಬಿನಿಂದ ಜನಗಳಿಗೆ ಆಗುತ್ತಿರುವ ಲುಕ್ಸಾನೇನು ಮತ್ತು ಇದರಿಂದ ಅವರಿಗಾಗಿರತಕ್ಕ ಆದಾಯವೇನು ಎಂಬುದನ್ನು ಗಮನಕ್ಕೆ ತೆಗೆದುಕೊಳ್ಳಬೇಕಾದುದು ಅವಶ್ಯಕ. ಆದರೆ ಇಲ್ಲಿಯ ತನಕ ಮಾತನಾಡಿರತಕ್ಕವರು ಹೇಳಿರುವ ಹಾಗೆ ಇದರಲ್ಲಿ ಒಂದು ಒಳ್ಳೆಯದಕ್ಕೂ ಅವಕಾಶವಿದೆ, ಕೆಟ್ಟದ್ದಾಗಲಿಕ್ಕೂ ಅವಕಾಶವಿದೆ. ಈ ಪ್ರೊಹಿಬಿಷನ್ನನ್ನು ದೇಶಾದ್ಯಂತ ಎಲ್ಲ ಕಡೆಗೂ ಜಾರಿಗೆ ತರುತ್ತೇವೆಂದು ಹೇಳುತ್ತ ಎಲ್ಲಿ ಇದನ್ನು ಜಾರಿಗೆ ತರಲಾಗಿದೆಯೋ ಅಂಥಾ ಪ್ರದೇಶದಲ್ಲಿ ಕುಡಿಯುವ ಚಟವಿದ್ದ ಪ್ರಭಾವಶಾಲಿಗಳಿಗೆ ಅಲ್ಲಿ ಪ್ರೊಹಿಬಿಷನ್ ಜಾರೀಲಿದ್ದರೂ ಅಂಥವರಿಗೆ ಈ ಪರ್ಮಿಟ್ ವಗೈರೆಗಳನ್ನು ಕೊಡುವುದರ ಮೂಲಕ ಅವರಿಗೆ ಎಲ್ಲ ಅನುಕೂಲತೆಗಳನ್ನೂ ಒಂದಿಲ್ಲೊಂದು ರೂಪದಲ್ಲಿ ದೊರೆಯುವಂತೆ ವ್ಯವಸ್ಥೆಗಳನ್ನು ಮಾಡಲಾಗಿದೆ. ಆದರೆ ಈ ಸೌಲತ್ತುಗಳು ಆ ಪ್ರದೇಶದಲ್ಲಿರತಕ್ಕ ಕೆಳಮಟ್ಟದ ಜನರಿಗೆ ಮಾತ್ರ ಪಡೆಯಲು ಶಕ್ಯವಾಗಿಲ್ಲ. ಅಂದರೆ ಕೆಳಮಟ್ಟದ ವಿಭಾಗದವರಿಗೆ ಈ ಸೌಲತ್ತುಗಳನ್ನು ಪಡೆಯಲು ಸಾಧ್ಯವಾಗಿ—ಅವರಿಗೆ ಅಂಥಾ ಸಾಮರ್ಥ್ಯವೂ ಇಲ್ಲ. ಹೀಗೆ ಈ ಬಾಬು ಒಬ್ಬರಿಗೆ ಅನುಕೂಲವನ್ನುಂಟುಮಾಡಿದ್ದರೆ ಇನ್ನೊಬ್ಬರಿಗೆ ಅನಾನುಕೂಲವನ್ನುಂಟುಮಾಡಿದೆ. ಆದರೆ ಈ ಎರಡು ವಿಭಾಗದ ಜನರಿಗೂ ಒಪ್ಪಿಗೆಯಾಗುವಂತೆ ಹೇಗೆ ಮಾಡಬೇಕೆಂಬುದೊಂದು ಸಮಸ್ಯೆ. ಈ ಸಮಸ್ಯೆಯನ್ನು ಹೇಗೆ ಬಗೆಹರಿಸಬೇಕೆಂಬುದು ಈಗ ಈ ಸಭೆ ಮತ್ತು ಸರ್ಕಾರ ಒಟ್ಟಾಗಿ ಪರಿಶೀಲನೆ ಮಾಡಬೇಕಾಗಿದೆ. ಇದಕ್ಕೆ ಈಗ ಪ್ರತ್ಯೇಕ ಒಂದು ಯೋಜನೆಯನ್ನು ತಯಾರಿಸಬೇಕಾಗಿದೆ. ನಮಗೆ ಈಗ ಈ ಪ್ರೊಹಿಬಿಷನ್ ಎಷ್ಟರಮಟ್ಟಿಗಿರಬೇಕು, ಎಷ್ಟರ ಮಟ್ಟಿಗೆ ಇದನ್ನು ತೆಗೆಯಬಹುದು, ಇದನ್ನೆಲ್ಲಾ ಪೂರೈಸುವುದು ಹೇಗೆ? ಇದರಿಂದ ಸರ್ಕಾರಕ್ಕೆ ಯಾವ ರೀತಿ ಹಣ ಬರುವಂತೆ ಮಾಡಬಹುದು ಎಂದು ನೋಡಬೇಕು. ಆದರೆ ಈ ಕುಡಿತನವೇನೋ ಕೆಟ್ಟದ್ದೇ—ಆದರೆ ಕುಡಿಯತಕ್ಕವರ ದೃಷ್ಟಿಯಿಂದ ಹೇಳುವುದಾದರೆ ಈ ದುಶ್ಚಟಕ್ಕೆ ತುತ್ತಾಗಿದ್ದ ಜನರು ಪ್ರೊಹಿಬಿಷನ್ ಜಾರಿಗೆ ಬಂದಮೇಲೆ ಬೇಡಾದ ಸಾಮಗ್ರಿಗಳನ್ನೆಲ್ಲಾ ಸೇವಿಸುತ್ತಿರುವುದರಿಂದ ರಾಷ್ಟ್ರಕ್ಕೇ ಒಂದು ದೊಡ್ಡ ಗಂಡಾಂತರ ಉಂಟಾಗಿದೆ, ಆದುದರಿಂದ ಇದನ್ನೆಲ್ಲ ತಪ್ಪಿಸಲು ಏನು ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೋ ಅವುಗಳನ್ನು ಕೈಗೊಳ್ಳಲು ಸರ್ಕಾರಕ್ಕೆ ಇದೇನೂ ಅಂಥಾ

(ಶ್ರೀ ಗೋಪಾಲ ಸಾಲೆನ್ನ)

ರಷ್ಟದ ಕೆಲಸ ಆಗಲಾರದು. ಸರ್ಕಾರ ಇದಕ್ಕಾಗಿ ಸರಿಯಾದ ಯೋಜನೆಯನ್ನು ತಯಾರುಮಾಡಿ ಕ್ರಮ ಕೈಗೊಳ್ಳಲು ಅಷ್ಟೇನೂ ಕಷ್ಟವಾಗಲಾರದು.

ಈಗ ಕೆಲವರು ಸೇಂದಿ ವಿಚಾರ ಹೇಳಿದರು—ಹೌದು ಅದು ಒಂದು ಆಹಾರ ವಸ್ತುವೂ ಆಗಿದೆ. ಇದನ್ನು ಪ್ರೊಹಿಬಿಷನ್ ಕಾನೂನಿನ ವ್ಯಾಪ್ತಿಯಿಂದ ಹೊರಪಡಿಸಿ ಇದನ್ನೊಂದು ಗುಡಿ ಕೈಗಾರಿಕೆಯಂತೆ ಪರಿಗಣಿಸಲು ಸರ್ಕಾರದವರಿಗೆ ಇದರಲ್ಲಿ ತೊಂದರೆಯೇನಿದೆ? ಈ ದಿವಸ ಸೇಂದಿಯನ್ನು ನೀರಾ ಯೋಜನೆಯಂತೆ ಸೇಂದಿಯಾಗಿ ಉಪಯೋಗಿಸುತ್ತಿದ್ದಾರೆ ಲ್ಲಬೆ ತಯಾರಿಸಲು ಉಪಯೋಗಿಸುತ್ತಿದ್ದಾರೆ. ಕೆಲವು ಕಾಯಿಲೆಗಳಿಗೆ ಇದನ್ನು ಔಷಧಿಯಾಗಿ ಉಪಯೋಗಿಸುತ್ತಿದ್ದಾರೆ. ಹಾಗೆಯೇ ಆಹಾರವಾಗಿಯೂ ಉಪಯೋಗಿಸುತ್ತಿದ್ದಾರೆ. ಆದುದರಿಂದ ಇದನ್ನು ನ್ಯಾಯವಾದ ಕಾಟೇಜ್ ಇಂಡಸ್ಟ್ರಿಯಾಗಿಡಬೇಕೆಂಬ ಅಭಿಪ್ರಾಯವನ್ನು ನಾವೀಗ ಸರ್ಕಾರದವರ ಮುಂದೆ ಇಡುತ್ತಿದ್ದೇನೆ. ಇದನ್ನು ಅಂಗೀಕಾರ ಮಾಡಿದರೆ ಸರ್ಕಾರಕ್ಕೆ ಇದರಿಂದ ಲುಕ್ಸಾನೇನೂ ಆಗುವುದಿಲ್ಲ. ಆದರೆ ಈಗ ಜಾರಿಗೆ ತಂದಿರತಕ್ಕ ಪ್ರೊಹಿಬಿಷನ್ ಪಾಲಿಸಿಯಲ್ಲಿ ಕೆಲವರಿಗೆ ಎಲ್ಲ ಸೌಲತ್ತುಗಳೂ ಸಿಕ್ಕಿ ಇನ್ನು ಕೆಲವರಿಗೆ ಮುಖ್ಯವಾಗಿ ಬಡವರಾದ ಬೇರೆಯವರಿಗೆ ಅವು ದೊರೆಯದಿರುವುದರಿಂದ ಅವರು ವಿಷಪದಾರ್ಥಗಳ ಸೇವನೆಗೆ ಪ್ರಾರಂಭಿಸಿದ್ದಾರೆ. ಆ ಕಾರಣದಿಂದಲೂ ನಾನೀಗ ಹೇಳತಕ್ಕ ಸಲಹೆಯನ್ನು ಸರ್ಕಾರದವರು ಸಹಾನುಭೂತಿಯಿಂದ ಪರಿಶೀಲಿಸಿದರೆ ನಮ್ಮ ಜನಾಂಗಕ್ಕೆ ಇದರಿಂದ ಬಹಳ ಅನುಕೂಲವಾಗುತ್ತದೆ.

ಈ ಸಭೆಯ ಕೆಲವು ಸದಸ್ಯರು ಮಾತಾಡಿದಾಗ ಹೇಳಿರುವಂತೆ ಆದಿಕರ್ಣಾಟಕರು ಹೆಚ್ಚು ಕುಡಿಯುತ್ತಾರೆ ಅಥವಾ ತಯಾರುಮಾಡುತ್ತಾರೆ ಎಂಬ ವಿಚಾರವನ್ನು ನಾನು ತೀವ್ರವಾಗಿ ವಿರೋಧಿಸುತ್ತೇನೆ. ಕುಡಿಯುವವರಲ್ಲಾಗಲೀ, ತಯಾರುಮಾಡುವವರಲ್ಲಾಗಲೀ ಆದಿಕರ್ಣಾಟಕರು ಅಥವ ಇತರ ದಲಿತ ಜನರು ಬಹಳ ಕಡಮೆ ಸಂಖ್ಯೆಯಲ್ಲಿದ್ದಾರೆಂಬುದು ಅಕ್ಷರಶಃ ಸತ್ಯ. ಇವರಿಗಿಂತಲೂ ಇವತ್ತು ಸಮಾಜದಲ್ಲಿ ಯಾವುದಕ್ಕೂ ಬೇಕಾಗಿರದೆ ಇದ್ದು, ಸಮಾಜದಲ್ಲಿ ಎಲ್ಲಾ ಗೌರವವನ್ನು ಕೆಡಿಸಿಕೊಂಡ ಸಮಾಜ ದ್ರೋಹಿಗಳ ಸಂಖ್ಯೆ ಈ ಉದ್ಯಮದಲ್ಲಿ ಬೆಳೆಯುತ್ತಿದೆ. ಇಂಥ ಜನರು ಇದರಿಂದ ಈಗ ಧಾರಾಳವಾಗಿ ಹಣ ಸಂಗ್ರಹಮಾಡಿ ಮನೆ ಕೈಗಾರಿಕೆಯನ್ನಾಗಿ ಬೆಳೆಸಿಕೊಂಡು ಬಂದಿದ್ದಾರೆ. ಅಲ್ಲದೆ ಇದರಿಂದಾಗಿ ಗಳಿಸಿದ ಹಣದಿಂದಾಗಿ ಗೌರವವನ್ನು ಗಳಿಸುವಂಥ ಒಂದು ಅವಕಾಶವನ್ನು ಕಲ್ಪಿಸಿಕೊಟ್ಟು ಪ್ರಭಾವಶಾಲಿಗಳನ್ನಾಗಿ ಈ ಪಾನನಿರೋಧವು ಮಾಡಿದೆ. ಆದರೆ ಆದಿಕರ್ಣಾಟಕರು ಇದರಲ್ಲಿ ಹೆಚ್ಚಾಗಿ ಸೇರಿದ್ದಾರೆನ್ನುವುದು ಸರಿಯಲ್ಲ. ಅವರಿಗೆ ಸುಲಭದಲ್ಲಿ ಕಾಯಿದೆಯ ರಕ್ಷಣೆಗೆ ಸಿಕ್ಕುವುದೂ ಕಷ್ಟ ಮತ್ತು ಅವರು ಸುಲಭವಾಗಿ ಅಧಿಕಾರಿಗಳಿಗೆ ಸಿಕ್ಕಿ ದಾವೆ ಹಾಕಿಕೊಳ್ಳಲಿಕ್ಕೆ ಅವಕಾಶವಿರುವದಾಗಿ ಅವರು ಕಡಮೆ ರಕ್ಷಣೆ ಇರುವ ಜನರಾದರೂ ನ್ಯಾಯಾಲಯಗಳಲ್ಲಿ ತಕ್ಸೀರುಗಳಿಗೊಳಗಾಗಿ ಶಿಕ್ಷೆಯಾದವರ ಸಂಖ್ಯೆ ಬಹಳ ಕಡಿಮೆಯೆಂಬುದು ಸತ್ಯ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮುನಿಸಿಪಲ್ ನೌಕರರು ಚೆನ್ನಾಗಿ ಕುಡಿಯುತ್ತಾರೆಂದು ಹೇಳುತ್ತಿದ್ದಾರೆ, ಹೌದು ಇತರೆಡೆಗಳಂತೆಯೇ ಕೆಲವರು ಕುಡಿಯುತ್ತಿದ್ದಾರೆ. ಪಾನನಿರೋಧವನ್ನು ಪೂರ್ತಿಯಾಗಿ ತೆಗೆದುಬಿಟ್ಟರೆ ಅದರ ಪರಿಣಾಮವೇನೆಂದರೆ, ನಗರಸಭೆ, ಜಿಲ್ಲಾ ಮತ್ತು ತಾಲ್ಲೂಕು ಬೋರ್ಡುಗಳ ಸಭೆಗಳಿಗೆ ಹೋಗಿ ಧಾಳಿ ನಡೆಸಲು ಹಿಂಜರಿಯಲಿಕ್ಕೂ ಇಲ್ಲ. ಆದುದರಿಂದ ಕಾಯಿದೆಯಲ್ಲಿಯೇ ರಕ್ಷಣೆಕೊಟ್ಟು ಆಯಾಯ ತಾಲ್ಲೂಕುಗಳಲ್ಲಿ ಕುಡುಕರು ಎಷ್ಟಿದ್ದಾರೆ ಎಂದು ರಿಜಿಸ್ಟರ್ ಮಾಡಿಸಿ ಅಂಥವರಿಗೆ ಪರ್ಮಿಟು ಮೂಲಕ ಸರಾಬುವಗೈರೆ ಕುಡಿಯುವ ಸವಲತ್ತು ಒದಗಿಸಲೇ ಬೇಕು ಮತ್ತು ಅವರಿಂದ ಅಧಕ್ಕಾಗಿ ಯೋಗ್ಯವಾದ ಸಂಪಾದನೆಯನ್ನು ಸರ್ಕಾರ ಪಡೆದುಕೊಂಡು ಉತ್ಪನ್ನವನ್ನು ಹೆಚ್ಚಿಸಿ ಸದ್ವಿನಿಯೋಗ ಮಾಡುವುದು ಅವಶ್ಯಕ. ಹಾಗಾದಲ್ಲಿ ಅನಾರೋಗ್ಯಕರವಾದ ವಿಷಮಿಶ್ರಿತ ಪಾನೀಯಗಳ ಭಾದೆಯಿಂದ ಅಂಥಾ ಜನರನ್ನು ತಪ್ಪಿಸಿದಂತಾಗುತ್ತದೆ.

ತೆರಿಗೆಗಳ ವಿಚಾರದಲ್ಲಿ ಹೇಳಬೇಕಾದರೆ ಸಣ್ಣ ಸಣ್ಣ ಬೀಡಿ ಅಂಗಡಿಗಳವರು, ಚಿಕ್ಕಪುಟ್ಟ ವ್ಯಾಪಾರಸ್ಥರು ಇವರಿಗೆಲ್ಲ ತೆರಿಗೆಯನ್ನು ಹಾಕಿ ಅವರು ಸರಕಾರದ ಕ್ರಮದಲ್ಲಿ ಲೆಕ್ಕ ಪತ್ರಗಳನ್ನು ಇಡಲು ಕಷ್ಟವಾಗಿದೆ. ಇದಕ್ಕಾಗಿಯೇ ಅಂಥವರು ಪ್ರತ್ಯೇಕ ಒಬ್ಬ ಗುಮಾಸ್ತನನ್ನೂ ಇಡಬೇಕೆಂದರೆ ಅವರಿಗೆ ಬರುವ ವರಮಾನದಲ್ಲಿ ಅದೂ ಸಾಧ್ಯವೇ? ಇದರಿಂದ ಅಂಥವರಿಗೆಲ್ಲಾ ಮಾನಸಿಕವಾಗಿಯೂ, ವ್ಯವಹಾರಿಕವಾಗಿಯೂ ಬಹಳ ಗಂಡಾಂತರ ಪರಿಸ್ಥಿತಿಯುಂಟುಮಾಡಿದೆ. ಸಣ್ಣ ಪುಟ್ಟ ವ್ಯಾಪಾರಿಗಳಿಗೆ ಆಗುತ್ತಿರುವ ಈ ತೊಂದರೆಯನ್ನು ತಪ್ಪಿಸಿ ಅಂಥವರಿಗೆ ಮಾನಸಿಕ ಹೆದರಿಕೆಯಿಂದ ದೂರವಾಗುವಂತೆ ಮಾಡಿ ಯೋಗ್ಯ ನಿರ್ದಿಷ್ಟ ರೀತಿಯಲ್ಲಿ ಸುಲಭದಲ್ಲಿ ಪಾವತಿ ಮಾಡುವಷ್ಟು ತೆರಿಗೆಯನ್ನು ಹಾಕಬೇಕು ಎಂದು ಹೇಳುತ್ತೇನೆ.

ವಿಪರೀತ ತೆರಿಗೆಗಳಿಂದ ಮಧ್ಯಮ ಹಾಗೂ ಬಡಜನರಿಗೆ ಬಹಳ ಕಷ್ಟವಾಗಿದೆ. ಅದನ್ನು ಅವರು ಸುಲಭವಾಗಿ ಕೊಡಬಹುದಾದ ಪರಿಮಿತಿಯಲ್ಲಿ ಆದಷ್ಟು ಕಡಮೆ ಮಾಡುವಂಥಾದ್ದು ಎಲ್ಲಾ ಯೋಗ್ಯ ಸರ್ಕಾರದ ಕರ್ತವ್ಯ ಹಾಗೆ ಈ ಸರಕಾರ ಮಾಡಿಲ್ಲ. ದಿನದಿಂದ ದಿನಕ್ಕೆ ಒಂದಲ್ಲ ಒಂದು ರೀತಿಯ ತೆರಿಗೆ ಹೆಚ್ಚಿಕೊಂಡು ಹೋಗುತ್ತಿದೆ. ಅದು ಕಡಮೆಯಾಗುವಂಥ ಯಾವ ಯೋಚನೆಯನ್ನು ಈ ಸರ್ಕಾರ ಮಾಡಿಲ್ಲ. ಎಷ್ಟೋ ಫಲದಾಯಿಕವಾದ, ಉತ್ಪನ್ನ ಬರತಕ್ಕ ಯೋಜನೆಗಳನ್ನು ಕೈಬಿಟ್ಟು ಕೇವಲ ಸಾಮಾನ್ಯ ಜನರ ಮೇಲೆ ತೆರಿಗೆಯನ್ನು ಹೊರಿಸಿ ಈ ಸರಕಾರದ ರೀತಿ ನೀತಿಗಳು ಜನತೆ ಯನ್ನು ಸುಲಿಗೆಗೆ ಒಳಪಡಿಸುವಂಥ ಪರಿಸ್ಥಿತಿ ಇವೊತ್ತು ಬಂದಿದೆ. ಇದನ್ನೆಲ್ಲ ಸರ್ಕಾರ ಮನಗಂಡು ಇನ್ನು ಮುಂದಕ್ಕಾದರೂ ಒಂದು ನಿಶ್ಚಿತ ಧೋರಣೆಯನ್ನು ಕೈಕೊಳ್ಳದೆ ಇದ್ದರೆ ಮುಂದಕ್ಕೆ ಇದೇ ರೀತಿ ಮನಬಂದಂತೆ ವರ್ತಿಸಲಿಕ್ಕೆ ಜನರು ಈ ಇಂದಿನ ಸರ್ಕಾರವನ್ನು ಬಿಡಲಿಕ್ಕಿಲ್ಲ ಮತ್ತು ಜನತೆ ಅದಕ್ಕೆ ತಕ್ಕ ಮಾರ್ಗವನ್ನು ಕಂಡುಹಿಡಿಯುವುದಂತೂ ಖಂಡಿತ. ಅಲ್ಲವಾದರೆ ರಾಜ್ಯದಲ್ಲಿ ಮಹಾ ತ್ತಾದ ಕ್ರಾಂತಿಯಾಗಿ ರಾಷ್ಟ್ರವು ಗಂಡಾಂತರವನ್ನೆದುರಿಸಬೇಕೆಂಬ ಎಚ್ಚರಿಕೆಯನ್ನು ಸರ್ಕಾರ ಗಮನದಲ್ಲಿಟ್ಟುಕೊಳ್ಳಬೇಕು. ನಾನು ಇನ್ನೂ ಹೆಚ್ಚು ಮಾತನಾಡುವುದಿಲ್ಲ. ಈ ಸರ್ಕಾರ ನಾನು ಹೇಳಿದಂತೆ ಪಾನನಿರೋಧದ ಬಗ್ಗೆ ನೂತನವಾದ ತೀವ್ರ ಕಾರ್ಯಕ್ರಮವನ್ನು ಪರಿಪಾಲಿಸಬೇಕೆಂದು ಪುನಃ ಒತ್ತಿ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ. ಎಚ್. ಲಕ್ಷ್ಮಣಯ್ಯ (ಬೇಲೂರು).—ಸ್ವಾಮಿ, ಈ ದಿವಸ ನಮ್ಮ ಮುಂದೆ ಮಂಡಿ ಸಿರತಕ್ಕ ಬೇಡಿಕೆಗಳನ್ನೂ ಸ್ವಾಗತಿಸುತ್ತ ಒಂದೆರಡು ಮಾತುಗಳನ್ನು ಹೇಳ ಬಯಸುತ್ತೇನೆ.

ಈಚೆಗೆ ಮಾರಾಟತೆರಿಗೆ ಚೆಕ್ ಪೋಸ್ಟ್‌ಗಳನ್ನು ಹಾಕಿರುವುದರಿಂದ ರೈತರು ಬೆಳೆಯತಕ್ಕ ಪಧಾರ್ಥಗಳನ್ನು ಸಂತೆಗಳಲ್ಲಿ ತಂದು ಮಾರುವುದಕ್ಕೆ ತುಂಬ ತೊಂದರೆಯಾಗಿದೆ. ರೈತರು ಅವರು ಬೆಳೆದಂಥ ಮಾಲನ್ನು ತರುವುದಕ್ಕೆ ಹಿಂಜರಿಯುತ್ತಿದ್ದಾರೆ. ಅವರಿಗೆ ಲೆಕ್ಕ ಪತ್ರಗಳನ್ನು ಕೇಳುವುದ ರಿಂದ ಅದನ್ನೆಲ್ಲ ಒದಗಿಸುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ಅವರು ಈಗ ಮಂಡಿವರ್ತಕರಿಗೆ ದಳ್ಳಾಳಿಕೊಟ್ಟು ಅವರ ಮಾಲುಗಳನ್ನು ಮಾರುತ್ತಿದ್ದಾರೆ. ಇದರಿಂದ ಬಹಳ ನಷ್ಟ ಹೊಂದು ತ್ತಿದ್ದಾರೆ. ಇದನ್ನು ತಪ್ಪಿಸಲು ಒಂದು ವ್ಯವಸ್ಥೆಯನ್ನು ಮಾಡಬೇಕು ಮತ್ತು ರೈತರು ಬೆಳೆಯು ತಕ್ಕ ಪದಾರ್ಥಗಳು ಮಾರ್ಕೆಟ್ಟಿನಲ್ಲಿ ಮಾರಾಟವಾಗುವುದಕ್ಕೆ ತೆರಿಗೆಯ ವಿನಾಯಿತಿ ಕೊಡಬೇಕೆಂದು ಈ ಸಂದರ್ಭದಲ್ಲಿ ಪ್ರಾರ್ಥಿಸುತ್ತೇನೆ.

ಮೈಸೂರು ರಾಜ್ಯದಲ್ಲಿ ಏಲಕ್ಕಿಬೆಳೆ ರೋಗದಿಂದ ನಷ್ಟವಾಗುತ್ತಿದೆ. ಇದರ ಜೊತೆಗೆ ಅದರ ಬೆಲೆಯೂ ಇಳಿದಿರುವುದರಿಂದ ಏಲಕ್ಕಿ ಬೆಳೆಗಾರರು ತುಂಬ ನಷ್ಟದಲ್ಲಿದ್ದಾರೆ. ಅದು ಸರ್ಕಾರದ ಗಮನಕ್ಕೆ ಕೂಡ ಬಂದಿದೆ. ಆರ್ಥಿಕ ಮಂತ್ರಿಗಳು ತಮ್ಮ ಭಾಷಣದಲ್ಲಿ ಹೇಳಿರುವಂತೆ ಸೆಲೆಕ್ಟ್ ಕಮಿಟಿಯವರು ಸೂಚಿಸಿರತಕ್ಕ ಕೆಲವು ಪದಾರ್ಥಗಳ ಮೇಲೆ ತೆರಿಗೆಯನ್ನು ಹಾಕುವುದರಿಂದ ಏಲಕ್ಕಿಗೂ ತೆರಿಗೆ ಬೀಳುತ್ತದೆ. ನಮ್ಮ ಮೈಸೂರು ರಾಜ್ಯದಲ್ಲಿ central tax 10 per cent ಮತ್ತು Mysore Purchase tax 20 per cent ಹೀಗೆ ಏಲಕ್ಕಿ ಮಾರಾಟಗಾರರು ಕೊಡ ಬೇಕಾಗಿದೆ. ಮದ್ರಾಸ್ ರಾಜ್ಯದಲ್ಲಿ central tax 10 per cent ಮಾತ್ರ ಬೀಳುತ್ತದೆ. ಅಲ್ಲಿ surcharge tax ವಿನಾಯಿತಿ ಇರುವುದರಿಂದ ಅಲ್ಲಿಯ ವ್ಯಾಪಾರಗಾರರಿಗೆ ಅನುಕೂಲವಿದೆ. ಮದ್ರಾಸಿನಲ್ಲಿ ಏಲಕ್ಕಿಯನ್ನು ಕೇಳುವಹಾಗೆ ಮೈಸೂರಿನಲ್ಲಿ ಕೊಳ್ಳುವುದಕ್ಕೆ ಹಿಂಜರಿಯುತ್ತಾರೆ. ಕಾರಣ, ಇಲ್ಲಿ ಜಾಸ್ತಿ ತೆರಿಗೆಕೊಡಬೇಕು. ಇದರಿಂದ ಏಲಕ್ಕಿ ಬೆಳೆಗಾರರಿಗೆ ಅನ್ಯಾಯವಾಗುತ್ತದೆ. ಇದನ್ನು ತಪ್ಪಿಸುವುದಕ್ಕೋಸ್ಕರ ನೆರೆ ರಾಜ್ಯದಲ್ಲಿ ಯಾವ ರೀತಿ ಇದೆಯೋ ಅದೇ ರೀತಿ ತೆರಿಗೆಯನ್ನು ನಮ್ಮ ರಾಜ್ಯದಲ್ಲಿಯೂ ಅನ್ವಯಿಸುವಂತೆ ಮಾಡಿ ನಮ್ಮಲ್ಲಿರುವ purchase tax ನಿಂದ ವಿನಾ ಯಿತಿ ಕೊಡಬೇಕೆಂದು ಈ ಸಂದರ್ಭದಲ್ಲಿ ಪ್ರಾರ್ಥಿಸುತ್ತೇನೆ.

ಸಣ್ಣಪುಟ್ಟ ವ್ಯಾಪಾರಿಗಳಿಗೆ ಲೆಕ್ಕಪತ್ರಗಳನ್ನಿಡುವುದು ಬಹಳ ಕಷ್ಟವಾಗಿರುತ್ತದೆ. ಹಳ್ಳಿ ಗಳಲ್ಲಿ ಸಣ್ಣ ಟೌನ್‌ಗಳಲ್ಲಿ ವ್ಯಾಪಾರಮಾಡುವ ಸಣ್ಣ ವ್ಯಾಪಾರಿಗಳಿಗೆ ತುಂಬ ತೊಂದರೆಯಾಗಿದೆ. ಮಾರಾಟತೆರಿಗೆ ಅಧಿಕಾರಿಗಳು ಇಂಥ ವ್ಯಾಪಾರಿಗಳಿಂದ ಸಣ್ಣ ವ್ಯಾಪಾರಸ್ಥರು ಎಂಬ ಭೇದವನ್ನು ಎಣಿಸದೆ ಬಲವಂತವಾಗಿ ತೆರಿಗೆಯನ್ನು ವಸೂಲ್ಮಾಡುತ್ತಾರೆ. ಒಂದು ವಿಧದಲ್ಲಿ ನೋಡಿದರೆ ದೊಡ್ಡ ವ್ಯಾಪಾರಗಾರರಿಗೇ ಹೆಚ್ಚು ವಿನಾಯಿತಿಗಳು ಸಿಕ್ಕುತ್ತಿವೆ. ಸಣ್ಣ ವ್ಯಾಪಾರಿಗಳಿಗೆ ಯಾವ ವಿನಾಯಿತಿಯೂ ಸಹ ಸಿಕ್ಕುವುದಿಲ್ಲ ಇವರಿಗೆ ಬರತಕ್ಕ ಆದಾಯ ಬಹಳ ಕಡಮೆಯಿರುವುದರಿಂದ ಅವರು ಲೆಕ್ಕಪತ್ರಗಳನ್ನಿಡುವುದಕ್ಕೆ ಬೇರೆಯವರನ್ನು ನೇಮಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಆದುದ ರಿಂದ ಇವರಿಗೆ ಲೆಕ್ಕಪತ್ರಗಳನ್ನಿಡುವುದಕ್ಕೆ ವಿನಾಯಿತಿ ಕೊಡಬೇಕೆಂದು ಈ ಸಂದರ್ಭದಲ್ಲಿ ಪ್ರಾರ್ಥಿಸುತ್ತೇನೆ.

(ಶ್ರೀ ಬಿ. ಹೆಚ್. ಲಕ್ಷ್ಮಣಯ್ಯ)

4-30 P.M.

ಇದೇ ಸಂದರ್ಭದಲ್ಲಿ ನಮ್ಮ ಅರ್ಥ ಮಂತ್ರಿಗಳಲ್ಲಿ ಇದಕ್ಕೆ ಸಂಬಂಧವಿಲ್ಲದಿದ್ದರೂ ಒಂದು ಮಾತು ಹೇಳಬೇಕಾಗಿದೆ. ಭಾರತ ಸರಕಾರದವರು ಏಲಕ್ಕಿ ಮಂಡಲಿ ಎಂದು ಮಾಡಿದ್ದಾರೆ, ಅದರಲ್ಲಿ ಯಾವ ರೀತಿ ಏಲಕ್ಕಿಗೆ ಬೆಲೆ ಇರಬೇಕು, ಬೆಳೆಯುತಕ್ಕ ಪ್ರದೇಶಗಳಿಗೆ ಏನು ಸೌಕರ್ಯಬೇಕೆನ್ನುವುದನ್ನೆಲ್ಲಾ ಪರಿಶೀಲನೆ ಮಾಡುತ್ತಾರೆ. ಆದರೆ ಏಲಕ್ಕಿ ಬೆಳೆಯುವ ಪ್ರದೇಶಗಳು ಮೈಸೂರು ದೇಶದಲ್ಲಿ ಮೂಡಿಗೆರೆ ಮತ್ತು ಸಕಲೇಶಪುರ ಇಲ್ಲಿ ಹೆಚ್ಚಾಗಿವೆ. ಹೀಗಿದ್ದರೂ ಈ ಮಂಡಲಿಯಲ್ಲಿ ನಮ್ಮ ಭಾಗದ ಒಬ್ಬ ಪ್ರತಿನಿಧಿಯೂ ಈ ಮಂಡಲಿಯಲ್ಲಿಲ್ಲ. ಏಲಕ್ಕಿ ಬೆಳೆಯುವವರ ಕಷ್ಟ ಸುಖಗಳನ್ನು ಹೇಳಿ ಅದಕ್ಕೆ ಸೌಕರ್ಯಗಳನ್ನು ದೊರಕಿಸಿಕೊಳ್ಳಲು ಈ ಮಂಡಲಿಯಲ್ಲಿ ಒಬ್ಬ ಪ್ರತಿನಿಧಿಗಳನ್ನು ನೇಮಿಸಬೇಕೆಂದು ಕೇಂದ್ರ ಸರಕಾರದವರನ್ನು ಒತ್ತಾಯ ಮಾಡಬೇಕೆಂದು ನಾನು ಮನವಿ ಮಾಡಿಕೊಳ್ಳುತ್ತೇನೆ.

ಈ ಮಾರಾಟ ತೆರಿಗೆ ಇಲಾಖೆಯಲ್ಲಿರುವ ಅಧಿಕಾರಿಗಳಿಗೆ ಬಡತಿ ದೊರೆಯುತ್ತಿಲ್ಲ. ಬಡತಿ ದೊರೆಯದೇ ಇರುವಂತಹವರಿಗೆ ತಮ್ಮ ಕೆಲಸದಲ್ಲಿ ಸ್ವಾಭಾವಿಕವಾಗಿ ಉತ್ಸಾಹ ಕುಗ್ಗುತ್ತಿದೆ. ಇಲ್ಲಿಗೆ ಬೇರೆ ಇಲಾಖೆಯಿಂದ ಜಿಲ್ಲಾಧಿಕಾರಿಗಳನ್ನು ಇದುವರೆಗೆ ನೇಮಿಸುತ್ತಿದ್ದಾರೆ. ಇದಕ್ಕೆ ಬದಲಾಗಿ ಇಲ್ಲಿರುವ ಸೀನಿಯರ್ ಅಧಿಕಾರಿಗಳಿಗೇ ಬಡ್ತಿ ಕೊಟ್ಟರೆ ಅವರೇ ಇನ್ನೂ ಹೆಚ್ಚು ಉತ್ಸಾಹದಿಂದ ಕೆಲಸ ಮಾಡುತ್ತಾರೆ. ಇದನ್ನು ನಮ್ಮ ಅರ್ಥ ಮಂತ್ರಿಗಳು ಕೂಲಂಕಷವಾಗಿ ವಿಚಾರ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಪ್ರಾರ್ಥಿಸುತ್ತೇನೆ.

ಪಾನ ನಿರೋಧದ ವಿಚಾರವಾಗಿ ಅನೇಕ ಜನಬೇಕು, ಅನೇಕ ಜನಬೇಡ ಎಂದು ಇಲ್ಲಿ ಮಾತನಾಡಿದ್ದಾರೆ. ಪಾನ ನಿರೋಧ ಬಂದ ಮೇಲೆ ಆ ಭಾಗದಲ್ಲಿ ಅನೇಕ ಕುಡಿಯುತಕ್ಕ ಬಡ ಸಂಸಾರಗಳವರು ಶಾಂತಿಯಿಂದ, ನೆಮ್ಮದಿಯಿಂದ ಜೀವನ ಮಾಡುತ್ತಿದ್ದಾರೆ. ಹರಿಜನರೇ ಅಲ್ಲ, ಎಲ್ಲ ಜನಾಂಗದವರೂ ಕೂಡ ಕುಡಿಯುತ್ತಾರೆ. ಈ ಬಡ ಸಂಸಾರಿಗಳು ಕುಡಿಯುವುದನ್ನು ಬಿಟ್ಟಮೇಲೆ ಸಮಾಧಾನದಿಂದ ಸುಖ ಜೀವಿಗಳಾಗಿ ಬದುಕುತ್ತಾರೆ. ಇವೊತ್ತು ದುಡ್ಡಿನ ದೆಸೆಯಿಂದ ಈ ಪಾನ ನಿರೋಧವನ್ನು ರದ್ದು ಮಾಡಿದ ಪಕ್ಷದಲ್ಲಿ ಈ ದೇಶದಲ್ಲಿರತಕ್ಕ ಬಹು ಪಾಲು ಬಡವರು ಹಾಳಾಗುತ್ತಾರೆ. ಅವರು ಜೀವನ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ನಾವು ಸುಖೀ ರಾಜ್ಯ ಸ್ಥಾಪನೆ ಮಾಡುತ್ತೇವೆಂದು ಹೇಳುತ್ತಿದ್ದೇವೆ. ಇಲ್ಲಿ ಬಹು ಭಾಗದ ಜನರು ಬಡವರು ಅವರ ಒಂದು ಆರ್ಥಿಕ ಸ್ಥಿತಿ ಉತ್ತಮವಾಗುವುದಕ್ಕೆ ಈ ಪಾನ ನಿರೋಧವನ್ನು ರದ್ದು ಮಾಡಿದರೆ, ಸುಖೀ ರಾಜ್ಯ ಸ್ಥಾಪನೆ ಮಾಡಿದಂತಾಗುವುದಿಲ್ಲ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಪಾನ ನಿರೋಧ fail ಆಗಿದೆ ಎಂದು ಬಹಳ ಜನ ಕೂಗುತ್ತಿದ್ದಾರೆ, ಇದರಿಂದ ದೇಶಕ್ಕೆ ಲಾಸ್ ಆಗಿದೆ. ಪಾನ ನಿರೋಧದಿಂದ ಬರುವ ಹಣವೂ ನಿಂತು ಹೋಗಿದೆ ಎಂದು ಹೇಳುತ್ತಿದ್ದಾರೆ, ಪಾನ ನಿರೋಧವನ್ನು ನಾವು ನಂಬಿಕೊಂಡ ಮೇಲೆ ಅದು ಫೇಲ್ ಆದರೆ ತಪ್ಪು ಯಾರದು ? ತಪ್ಪು ನಮ್ಮಲ್ಲಿಯೇ ಇರತಕ್ಕದ್ದು, ನಮ್ಮಲ್ಲಿರುವ ತಪ್ಪನ್ನು ನಾವು ಯೋಚನೆ ಮಾಡದೆ ಪಾನ ನಿರೋಧ fail ಆಯಿತು ಎಂದರೆ—ಒಂದು ಸಾರಿ ಪಾನ ನಿರೋಧವನ್ನು ಒಪ್ಪಿಕೊಂಡು ಇನ್ನೊಂದು ಸಾರಿ ಬೇಡ ಎಂದು ಹೇಳತಕ್ಕ ಮಾತು ಬಹಳ ಅರ್ಥವಿಲ್ಲದ ಮಾತು ಎಂದು ನನಗನ್ನಿಸುತ್ತಿದೆ. ಇದನ್ನು ಒಪ್ಪಿಕೊಂಡ ಮೇಲೆ ಇದನ್ನು ಏನೇ ಆಗಲಿ ಜಯಪ್ರದವಾಗುವಂತೆ ಪ್ರಯತ್ನ ಮಾಡುವುದು ನಮ್ಮೆಲ್ಲರ ಕರ್ತವ್ಯ, ಪಾನ ನಿರೋಧ ರದ್ದಾದ ಪಕ್ಷದಲ್ಲಿ ಅನೇಕ ಮಂದಿ ಬಡವರು ನೆಮ್ಮದಿಯಿಂದ ಬದುಕುವುದಕ್ಕೆ ಸಾಧ್ಯವಿಲ್ಲ. ಈ ದೇಶದಲ್ಲಿರುವ ಬಡತನವನ್ನು ನಿವಾರಣೆ ಮಾಡಬೇಕು, ಸುಖೀ ರಾಜ್ಯ ಸ್ಥಾಪನೆ ಮಾಡಬೇಕೆಂದರೆ ಪಾನ ನಿರೋಧವನ್ನು ಈಗ ಇಲ್ಲದೇ ಇರತಕ್ಕ ಪ್ರದೇಶದಲ್ಲಿ ಜಾರಿಗೆ ತರಬೇಕು, ಇದರಿಂದ ಆರ್ಥಿಕವಾಗಿ ಯಾರು ಮುಂದುವರಿಯಲು ಸಾಧ್ಯವಿಲ್ಲವೋ ಅವರು ನೆಮ್ಮದಿಯಿಂದ ಬದುಕುತ್ತಾರೆ ಅಷ್ಟಕ್ಕೆ ಅವಕಾಶ ಕೊಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನೊಂದು ಪ್ರಶ್ನೆ ಹತ್ತು ಕೋಟಿಯಷ್ಟು ಬರುತ್ತೆ ಎನ್ನುವ ಮಾತು ಹತ್ತು ಕೋಟಿ ಯಾರಿಂದ ಬರುತ್ತೆ ಎನ್ನುವುದನ್ನು ವಿಚಾರ ಮಾಡಬೇಕಾದುದು ಅಗತ್ಯ. ಕುಡಿಯುತಕ್ಕವರು ನಮ್ಮ ದೇಶದಲ್ಲಿ ಯಾರೂ ಶ್ರೀಮಂತರಲ್ಲ. ನಮ್ಮ ದೇಶದಲ್ಲಿ ಸುಮಾರು ಶೇಕಡಾ ಹತ್ತರಷ್ಟು ಶ್ರೀಮಂತರಿರಬಹುದು, ಅವರಿಗೋಸ್ಕರ ಸುಮಾರು ಎಪ್ಪತ್ತೈದು ಭಾಗದಷ್ಟಿರುವ ಬಡವರನ್ನು ಹಾಳು ಮಾಡುವುದಕ್ಕೆ ಸಾಧ್ಯವಿಲ್ಲ. ನೂರಕ್ಕೆ ಎಪ್ಪತ್ತೈದು ಜನ ಬಡವರೇ ಇರತಕ್ಕ ನಮ್ಮ ದೇಶದಲ್ಲಿ ಕುಡಿತದಿಂದ ಸುಮಾರು ಹತ್ತು ಕೋಟಿಯಷ್ಟು ಬರುತ್ತದೆ ಎಂದು ಹೇಳುವುದು ಅಷ್ಟು ಸೂಕ್ತವಲ್ಲ.

ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರನ್ನು ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ (ತಿಪಟೂರು).—ಮಾನ್ಯ ಅಧ್ಯಕ್ಷರೇ, ಈ ದಿವಸ ಆಡಳಿತದ ಡಿಮ್ಯಾಂಡ್‌ನಲ್ಲಿ ಪಾನ ನಿರೋಧ ವಿಷಯ ಹೆಚ್ಚಾಗಿ ಬಂತು. ಪಾನ ನಿರೋಧದಲ್ಲಿ ಎಕ್ಸೈಜು ಡ್ಯೂಟೀನೂ ಬಂತು. ಕುಡಿಯದೇ ಇದ್ದರೂ ಕುಡಿಯುವವರ ಮೇಲೆ ಏನೂ ಡ್ಯೂಟಿ ಹಾಕಿದ್ದಾರೋ ಅದರ ವಿಷಯವಾಗಿ ನಾನು ಮಾತನಾಡಬೇಕಾಗಿದೆ. ಮೊದಲು ಕುಡಿಯುವವರಿಲ್ಲವೆಂದಲ್ಲ. ಈಗ ಕುಡಿಯುವವರ ವ್ಯವಹಾರವೇ ಬೇರೆ ಇದಕ್ಕೋಸ್ಕರ ಸ್ವಲ್ಪ ಇಲ್ಲಿ ಮಾತನಾಡಬೇಕಾಗಿದೆ. ಈ ವಿಚಾರದಲ್ಲಿ ಮಾನ್ಯ ಮಂತ್ರಿಗಳಿಗೇನಾದರೂ ಪಾನ ನಿರೋಧ ಈ ದೇಶದಲ್ಲಿ ಜಾರಿಯಲ್ಲಿರುವ ಕಡೆ ಇದೆಯೋ ಇಲ್ಲವೇ ಎನ್ನುವುದನ್ನು ನೋಡಿಕೊಂಡು ಮುಂದುವರಿಯಬೇಕು. ಏಕೆಂದರೆ ಶ್ರೀಮಾನ್ ಜತ್ತಿಯವರು ಈ ಹಿಂದೆ ಚೀಫ್ ಮಿನಿಸ್ಟರಾಗಿದ್ದರು. ಈಗ ಅರ್ಥಿಕ ಮಂತ್ರಿಗಳಾಗಿದ್ದಾರೆ, ಇನ್ನು ಮುಂದೆ ಯಾವ ಮಂತ್ರಿಗಳಾಗುತ್ತಾರೋ ಏನೋ ಅವರು ಚೆನ್ನಾಗಿ ಉತ್ತರ ಹೇಳುತ್ತಾರೆ ಎಂದು ನಮ್ಮ ಜನ ನೂರರಲ್ಲಿ ತೊಂಬತ್ತು ಭಾಗ ಹೇಳಬಹುದು. ಸರಿಯಾದ ಉತ್ತರ ಹೇಳುವುದರಲ್ಲಿ ಮೊದಲನೆಯವರು ಮತ್ತು ಹಿಂದೆ ಚೀಫ್ ಮಿನಿಸ್ಟರಾಗಿದ್ದವರು, ಬಹಳ ದಿವಸ ಪರೀಕ್ಷೆ ಮಾಡಿ ಉತ್ತರ ಚೆನ್ನಾಗಿ ಹೇಳುತ್ತಾರೆ. ಈ ದೃಷ್ಟಿಯಲ್ಲಿ ನೂರಕ್ಕೆ 90 ಭಾಗ ಜನರು ಇವರು ಚೆನ್ನಾಗಿ ಉತ್ತರ ಹೇಳಿದರು ಎಂದು ಬೆಳಿಗ್ಗೆ ಪೇಪರಿನಲ್ಲಿ ನೋಡುತ್ತಾರೆ. ಇದನ್ನು ಅಂಗೀಕರಿಸಲಾಯಿತು ಎಂದು ಎಲ್ಲಾ ನೋಡುತ್ತಾರೆ.

Mr. SPEAKER.—Is the Hon'ble Member criticising the Paper or discussing the Budget ?

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ಇದಕ್ಕೆ ಸರಿಯಾದ ಉತ್ತರ ಚೆನ್ನಾಗಿ ಕೊಡುತ್ತಾರೆ ಎಂದು ಹೇಳಿದೆ. ಈಗ ಸರಿಯಾದ ಪಾಯಿಂಟಿಗೆ ಬರುತ್ತೇನೆ.

ಇಲ್ಲಿ ಏನಾಗಿದೆ ಎಂದರೆ ಅನೇಕ ಕಡೆ ಬೆಲ್ಲ ತಯಾರು ಮಾಡುವುದಕ್ಕೆಂದು ಲೈಸೆನ್ಸು ಕೊಟ್ಟು ಒಂದು ತಾಲ್ಲೂಕಿಗೆ ಒಂದು ಸಾರಿ 150 ರಿಂದ 200 ಈಚಲು ಮರಗಳನ್ನು ಕುಯ್ದು ಅದರಲ್ಲಿ ಬರುವ ಸೇಂದಿ ಬಿಟ್ಟು ಪೂರ್ತಿಯಾಗಿ ಬೆಲ್ಲ ಮಾಡುತ್ತಾರೆಯೇ ? ಎಂದಿಗೂ ಇಲ್ಲ. ಹೀಗೆ, 1,000, 1,800, 900, ಮತ್ತು 3,000 ಈಚಲು ಮರಗಳನ್ನು ಕುಯ್ದು ಎಷ್ಟು ಬೆಲ್ಲವನ್ನು ತಯಾರು ಮಾಡಿದರು, ಯಾವ ಮಾರ್ಕೆಟ್ಟಿನಲ್ಲಿ ಮಾರಿದರು ? ಟ್ಯಾಕ್ಸು ಎಷ್ಟು ಕೊಟ್ಟರು ? ಯಾರು ಬೆಲ್ಲವನ್ನು ತಯಾರು ಮಾಡಿ ಯಾವ ದೇಶಕ್ಕೆ ಸಾಗಿಸಿದರು ಎನ್ನುವುದನ್ನು ಯಾರಾದರೂ ಯೋಚನೆ ಮಾಡಿದ್ದಾರೆಯೇ ? ಎಷ್ಟರ ಮಟ್ಟಿಗೆ ಕೆಲಸವಾಗುತ್ತಿದೆ ಎನ್ನುವುದನ್ನು ನೋಡಿದ್ದಾರೆಯೇ ? ಯಾರೋ ಒಬ್ಬರು ತಲೆ ಮೇಲೆ ಬಟ್ಟೆ ಹಾಕಿಕೊಂಡು ಎಲ್ಲಿಯೋ ಹೋಗಿ ಕುಡಿದು ಬರುತ್ತಿದ್ದರು. ಈಗ ಲೈಸೆನ್ಸು ಕೊಟ್ಟಿರುವುದರಿಂದ ಮೊಸರು ಬೇಕೇ, ಹಾಲು ಬೇಕೇ ಎಂದು ಮಾರಲು ತರುವಂತೆ ಈಗ ಸೇಂದಿ ಬೇಕೇ ಎಂದು ತಲೆಯ ಮೇಲೆ ಡಬ್ಬ ಇಟ್ಟುಕೊಂಡು ಮಾರುತ್ತಿದ್ದಾರೆ. ತಾವು ಯಾರಾದರೂ ಒಂದು ಟ್ರೈನಲ್ಲಿ ನನ್ನ ಜೊತೆಯಲ್ಲಿ ಬನ್ನಿ ತೋರಿಸುತ್ತೇನೆ. ಆದರೆ ಆ ಮೇಲೆ ಅವರಿಗೆ ತೊಂದರೆ ಮಾತ್ರ ಮಾಡಬೇಡಿ. ನೀವೇ ಕೊಟ್ಟಿರುವ ಲೈಸೆನ್ಸು, ಅದರಂತೆ ಈ ರೀತಿ ಮಾರುತ್ತಿದ್ದಾರೆ. ಉದಾಹರಣೆಯಾಗಿ ಗೋರಿಬಿದನೂರು ತಾಲ್ಲೂಕಿನಲ್ಲಿ ಎಷ್ಟು ಮರ ಟ್ಯಾಪ್ ಮಾಡಿದ್ದಾರೆ ಎನ್ನುವುದನ್ನು ಮಾನ್ಯ ಮಂತ್ರಿಗಳು ನಿಜವಾಗಿಯೂ ಇಷ್ಟ ಪಟ್ಟರೆ ನೋಡಬಹುದು. ಅವರಿಗೆ ಹೇಗಿದ್ದರೂ ವಾಹನವಿದೆ ನನ್ನನ್ನೂ ಕರೆದರೆ ನಾನೂ ಬರುತ್ತೇನೆ ಬೇಕಾದರೆ ಒಟ್ಟಿಗೆ ಹೋಗೋಣ.

(ನಗು)

ಇಂಥ ಸಂದರ್ಭದಲ್ಲಿ ಯಾರು ಕಳ್ಳತನ ಮಾಡುತ್ತಾರೋ ಅವರೇ ಕಳ್ಳತನ ಮಾಡಬೇಡಿ ಎಂದು ಹೇಳುತ್ತಾರೆ. ನೀವು ಕುಡಿಯುತ್ತೀರಿ ಎಂದು ನಾನು ಹೇಳುವದಿಲ್ಲ, ದೇಶಕ್ಕಾಗಿ ತ್ಯಾಗ ಮಾಡಬೇಕು ಹಾಗೆ ಇರಬೇಕು ಹೀಗೆ ಇರಬೇಕು ಎಂದು ಮುಖ್ಯ ಮಂತ್ರಿಗಳು ಹೇಳುತ್ತಾರೆ. ದೇಶಕ್ಕೆ ಒಳ್ಳೆಯದಾಗಬೇಕು ಎಂದು ಪಾನನಿರೋಧ ಜಾರಿಗೆ ತರಲು ಮಹಾತ್ಮಾಗಾಂಧಿಯವರು ಹೇಳಿದರು. ಆದರೆ ಅವರ ಶಿಷ್ಯರಾದ ನೀವು ಈ ಮಟ್ಟಕ್ಕೆ ತರುತ್ತೀರಿ ಎಂದು ಅವರು ತಿಳಿದಿರಲಿಲ್ಲ, ಎಂದು ಹೇಳಬೇಕಾಗಿದೆ. ಸರಕಾರ ಬಲವಂತ ಮಾಡಿದರೆ ಇದು ಜಾರಿಗೆ ಬರುವುದು ಸಾಧ್ಯವಿಲ್ಲ. ಸಮಾಜ ಬುದ್ಧಿವಂತರಾಗಿ ಕುಡಿಯುವುದು ಒಳ್ಳೆಯದಲ್ಲ ಎಂಬ ಮನೋಭಾವ ಬರಬೇಕು. ಅಧಿಕಾರದ ನಿರ್ಬಂಧಕ್ಕೋಸ್ಕರ ಕುಡಿಯಬಾರದು ಎಂದು ಹೇಳುವುದು ಸರಿಯಲ್ಲ. ಪಾನ ನಿರೋಧದ ಸಲುವಾಗಿ ಎಲ್ಲ ವಸ್ತುಗಳ ಮೇಲೆ ಟ್ಯಾಕ್ಸ್ ಹಾಕಿರುವದರಿಂದ ಬಡವನಿಗೆ ತುಂಬಾ ತೊಂದರೆಯಾಗಿದೆ ಇದು ಸರಿಯಲ್ಲ. ಎಕ್ಸೈಜ್ ಟ್ಯಾಕ್ಸ ಇಟ್ಟರೆ ಯಾವ ರೀತಿ ಲಾಭ ಬರುತ್ತದೆ ಎನ್ನುವ ದೃಷ್ಟಿ ಹೋಗಬೇಕು. ದೊಡ್ಡ ದೊಡ್ಡ ಕಂಟ್ರಾಕ್ಟ್ ಅಂದರೆ 5 ಲಕ್ಷ 10 ಲಕ್ಷದವರಗಿನ ಕಂಟ್ರಾಕ್ಟ್ ಕೊಟ್ಟರೆ ಚಿಕ್ಕ ಕಂಟ್ರಾಕ್ಟರನು ತೆಗೆದುಕೊಳ್ಳಲು ಸಾಧ್ಯವಿಲ್ಲ. ದೇಶದ ಹಿತ ದೃಷ್ಟಿ

(ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ)

ಯಿಂದ ಸಣ್ಣ ಸಣ್ಣ ವಿಭಾಗಗಳನ್ನು ಮಾಡಿ ವಿಂಗಡಿಸಬೇಕು. ಪಾನನಿರೋಧ ನೀತಿಯನ್ನು ಅಂಗೀಕರಿಸಿರುವ ಕಾಂಗ್ರೆಸ್ ಪಕ್ಷದ ಸದ್ಯಸ್ಯರೊಬ್ಬರು ಬೀರ್‌ಷಾಪ್ ಒಂದರ ಕಂಟ್ರಾಕ್ಟ್ ಪಡೆದಿದ್ದಾರೆ. ಪಾನನಿರೋಧ ನೀತಿಯನ್ನು ಅಂಗೀಕರಿಸಿರುವ ಕಾಂಗ್ರೆಸ್ ಸಂಸ್ಥೆಯ ಪ್ರಮುಖ ಸದಸ್ಯರು ಬೀರ್‌ಷಾಪ್ ನಡೆಸುವುದು ಅಂದರೆ ಪಾನನಿರೋಧ ಜಾರಿಗೆ ಹೇಗೆ ತರುತ್ತಾರೆ? ಇದನ್ನು ಕಾಂಗ್ರೆಸ್ ಪಕ್ಷ ಪರಿಶೀಲಿಸಬೇಕು. ಸಾಮಾನ್ಯ ಜನರ ಮೇಲೆ ತೆರಿಗೆಯ ಹೊರೆ ಹೇರದಂತೆ ನೋಡಿಕೊಳ್ಳಬೇಕು.

ಇನ್ನು ಅಗ್ರಿಕಲ್ಚರಲ್ ಟ್ಯಾಕ್ಸ್, ಸೇಲ್ಸ್‌ಟ್ಯಾಕ್ಸ್ ಹಾಕಿದ್ದೀರಿ, ನಿಜ. ಸರಕಾರದ ರಾಜ್ಯದಾಡಳಿತ ನಡೆಯಬೇಕಾದರೆ ಟ್ಯಾಕ್ಸ್ ಹಾಕಬೇಕಾಗುತ್ತದೆ. ಸಾಮಾನ್ಯ ಜನರು ಹೆಚ್ಚು ಟ್ಯಾಕ್ಸ್ ಕೊಡುತ್ತಾರೆ. ಆದ್ದರಿಂದ ಸಾಮಾನ್ಯ ಜನರ ಮೇಲೆ ಹೆಚ್ಚು ಟಾಕ್ಸ್ ಹಾಕುವುದು ಸರಿಯಲ್ಲ. ಸಣ್ಣಪುಟ್ಟ ಉತ್ಪತ್ತಿ ಮೇಲೆ ಟ್ಯಾಕ್ಸ್ ಕಡಿಮೆ ಮಾಡಬೇಕು. ಈ ವರ್ಷ ಕಂದಾಯದ ಮೇಲೆ ಸರ್‌ಚಾರ್ಜ್ ಹಾಕಿದ್ದೀರಿ. ದೇಶದಲ್ಲಿ ಆಹಾರ ಪದಾರ್ಥ ಗಳನ್ನು ಜಾಸ್ತಿ ಬೆಳೆಯುವುದಕ್ಕೆ ಪ್ರೋತ್ಸಾಹ ಕೊಡಬೇಕು ಎಂದು ಹೇಳುತ್ತೀರಿ ಮತ್ತು ಇನ್ನೊಂದು ಕಡೆ ಟ್ಯಾಕ್ಸ್ ಹಾಕುತ್ತೀರಿ, ಚಿಕ್ಕಪುಟ್ಟ ಹಿಡುವಳಿದಾರರಿಗೆ ತೊಂದರೆಯಾಗಬಾರದು. ವ್ಯಾಪಾರ ಮಾಡುವವರಿಗೆ ಒಂದು ಮೂಟೆಗೆ ಎರಡಾಣೆ ಲಾಭ ಬರುತ್ತದೆ. ಆದುದರಿಂದ ಸಂಪತ್ತಿಯ ಮೇಲೆ ಟ್ಯಾಕ್ಸ್ ಹಾಕಿದರೆ ಹೆಚ್ಚು ಲಾಭ ಬರುತ್ತದೆ. ಒಂದು ಉದಾಹರಣೆ ಹೇಳುವದಾದರೆ ನಮ್ಮ ಜಿಲ್ಲೆಯಲ್ಲಿ ಕೊಬ್ಬರೀಎಣ್ಣೆ ತಯಾರಾಗುತ್ತದೆ. ದೂರ ದೂರದ ಪ್ರದೇಶಕ್ಕೆ ಕಳಿಸುತ್ತಾರೆ, ಒಂದು ಡಬ್ಬಾ ಮೇಲೆ ಟ್ಯಾಕ್ಸ್ ಇದೆ. ಆದರೆ ಲಾರಿ ತುಂಬಿಕೊಂಡು ಟ್ಯಾಕ್ಸ್ ಕೊಡದೆ ತೆಗೆದುಕೊಂಡು ಹೋಗುತ್ತಾರೆ. ಮಧ್ಯೆ 20–30ರೂ. ಕೊಟ್ಟು ಟ್ಯಾಕ್ಸ್ ಕೊಡುವುದನ್ನು ತಪ್ಪಿಸಿ ಸೀದಾ ಲಾರಿಯವನು ಹೊರಟು ಹೋಗುತ್ತಾನೆ. ನ್ಯಾಯವಾಗಿ ವ್ಯಾಪಾರ ಮಾಡುವವನಿಗೆ ತೊಂದರೆ ಯಾಗುತ್ತದೆ. ಈ ರೀತಿ ಎಲ್ಲ ಕಡೆ ನಡೆದಿದೆ. ಆದುದರಿಂದ ಮಾರಾಟ ತೆರಿಗೆಯನ್ನು ಯಾರು ತಪ್ಪಿಸಿಕೊಳ್ಳುತ್ತಾರೆ ಎಂಬುದನ್ನು ಪತ್ತೆಹಚ್ಚಬೇಕು, ಇದನ್ನು ಪತ್ತೆ ಹಚ್ಚುವುದಕ್ಕೆ ಮಾರಾಟ ತೆರಿಗೆಯ ಅಧಿಕಾರಿ ಒಬ್ಬನೇ ಹೋಗಬೇಕಾಗುತ್ತದೆ. ಅವನಿಗೆ ಯಾವುದೇ ಸಂರಕ್ಷಣೆ ಇರುವದಿಲ್ಲ, ಅವನ ಪ್ರಾಣಕ್ಕೆ ಜವಾಬ್ದಾರರು ಯಾರೂ ಇರುವದಿಲ್ಲ. ಈ ಸಿಬ್ಬಂದಿಗೆ ಆತ್ಮ ಸಂರಕ್ಷಣೆ ಮಾಡಿ ಕೊಳ್ಳಲು ರಿವಾಲ್ವರ್ ಇಟ್ಟುಕೊಳ್ಳುವುದಕ್ಕೆ ಕೊಡಬೇಕು ಇದಲ್ಲದೆ ಮಾರಾಟ ತೆರಿಗೆಯನ್ನು ಸಲ್ಲಿಸುವದರಲ್ಲಿ ತಪ್ಪಿಸಿಕೊಳ್ಳುವವರನ್ನು ಪತ್ತೆ ಮಾಡುವ ಅಧಿಕಾರಿಗಳಿಗೆ ಶಸ್ತ್ರ ಸೌಲಭ್ಯದ ಜೊತೆಗೆ ಸೂಕ್ತ ಸಿಬ್ಬಂದಿ ಒದಗಿಸಬೇಕು, ಅಂದರೆ ಟ್ಯಾಕ್ಸ್ ವಸೂಲಾಗುತ್ತದೆ. ಯಾವ ಹೊಸ ಟ್ಯಾಕ್ಸ್ ಹಾಕಬೇಕಾಗಿಲ್ಲ.

ಈಗ ಇರತಕ್ಕ ಟ್ಯಾಕ್ಸ್ ವಸೂಲಿ ಮಾಡುವ ವ್ಯವಸ್ಥೆ ಸರಿಯಾಗಿಲ್ಲ. ಬಡವರು ಟ್ಯಾಕ್ಸ್ ಕೊಡುತ್ತಾರೆ. ಐಶ್ವರ್ಯವಂತರು ತಪ್ಪಿಸಿಕೊಳ್ಳುತ್ತಾರೆ. ಆದುದರಿಂದ ಹತ್ತಾರು ವ್ಯವಹಾರ ಗಳನ್ನು ಮಾಡುವ ಕೋಟ್ಯಾಧೀಶರನ್ನು ಬಲಿಹಾಕಬೇಕು. ಇದು ನಿಮಗೂ ಗೊತ್ತಿದೆ ಉದಾಹರಣೆ ಹೇಳುವದಾದರೆ ಭಾರತಿ ಟ್ರೇಡಿಂಗ ಕಂಪನಿಯವರು ಸರಿಯಾಗಿ ಟ್ಯಾಕ್ಸ್ ಕೊಟ್ಟಿಲ್ಲ, ಕಾಂಗ್ರೆಸ್ ಮುಖಂಡರಾದವರು, ಕಾಂಗ್ರೆಸ್ ಸಂಸ್ಥೆಯ ಪ್ರಧಾನ ಕಾರ್ಯದರ್ಶಿಯಾದವರೊಬ್ಬರು ಅಧಿಕ ಪ್ರಮಾಣದ ತೆರಿಗೆ ಬಾಕಿ ಉಳಿಸಿಕೊಂಡಿದ್ದಾರೆ. ಅವರಿಂದ ವಸೂಲ್ಮಾಡುವದಕ್ಕೆ ಸಾಧ್ಯವಾಗಿಲ್ಲ. ಅಧಿಕಾರಿಗಳು ಹೆದರುತ್ತಾರೆ. ಯಾಕೆಂದರೆ ಅವರು ಏರ್ಪಡಿಸಿದ ಸಮಾರಂಭಗಳಿಗೆ ಮಂತ್ರಿಗಳು ಬರುತ್ತಾರೆ. ಮಂತ್ರಿಗಳ ಸಂಬಂಧ ಅವರು ಇಟ್ಟುಕೊಂಡಿರುತ್ತಾರೆ. ಈ ರೀತಿ ಮಾಡುವುದು ಸರಿ ಯಲ್ಲ, ವಸೂಲಿಯನ್ನು ಕಟ್ಟುನಿಟ್ಟಾಗಿ ಮಾಡಬೇಕೆಂದು ಒತ್ತಾಯ ಪೂರ್ವಕವಾಗಿ ಹೇಳುತ್ತೇನೆ. ದೇಶದ ಹಿತದೃಷ್ಟಿಯಿಂದ ಸರಕಾರ ಈ ವಸೂಲಿ ಕ್ರಮದ ಬಗ್ಗೆ ಗಮನ ಕೊಡಬೇಕು. ಇಷ್ಟು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† Sri M. V. RAMA RAO (Minister for Law).—Sir, the Demand in respect of State Excise Duties has, in spite of our interruptions and, if I may say so, your directions, tended to lend itself to more or less a free discussion on the policy of prohibition and the difficulties noticed by Hon'ble Members in the enforcement of that policy. I do not propose to use this occasion for replying to the criticisms which relate to the policy of prohibition as this would be wholely not proper. Therefore, I

propose to confine myself only to such points as relate to the State Excise Duties and matter pertaining to the Excise policy of the Government.

